ಸಾಹಿತ್ಯ ದಾಸೋಹ – ೨೧೫

ಸಂಚಿಕೆ ೩೯ – ಆಗಸ್ಟ್ ೨೦೨೩

೨೨.೦೭.೨೦೨೩ರ ದಾಸೋಹದ ಬರಹಗಳ ಸಂಕಲನ



ಸಮನ್ವಯ ಸಮಿತಿ * ಕನ್ನಡವೇ ಸತ್ಯ

ನೋಡಿಯೋ ಸಾಹಿತ್ಯ ವೇದಿಕೆ

ಪುಟ ತೆರೆಯುವ ಮುನ್ನ . . .

ಆತ್ಮೀಯರೆ,

22ನೆಯ ಜುಲೈ 2023ರಂದು ಅಂತರ್ಜಾಲ ಮುಖೇನ 'ನೋಡಿಯೋ ಸಾಹಿತ್ಯ ವೇದಿಕೆ'ಯಲ್ಲಿ ನಡೆದ 215ನೆಯ ಸಾಹಿತ್ಯ ದಾಸೋಹದ ಪ್ರಸ್ತುತಿಗಳನ್ನು ಈ ಸಂಚಿಕೆಯಲ್ಲಿ ನೀಡುತ್ತಿದ್ದೇವೆ.

ಕಳೆದ ಒಂದು ತಿಂಗಳ ಅವಧಿಯಲ್ಲಿ ಸಮನ್ವಯ ಸಮಿತಿ ಆಶ್ರಯದಲ್ಲಿ ಡಾ. ರಾ. ಲಕ್ಷ್ಮೀನಾರಾಯಣ ಅವರು ನಡೆಸಿಕೊಟ್ಟ 'ಎಚ್ಚೆಸ್ವಿ ಕಾವ್ಯ – ಒಂದು ಸಹೃದಯ ಅನುಸಂಧಾನ' ಕಾರ್ಯಕ್ರಮ ಹಾಗೂ ಶ್ರೀ ಬಿ.ಎಸ್. ಚಂದ್ರಶೇಖರ್ ಅವರು 'ಕರ್ನಾಟಕದಲ್ಲಿ ಸೌಹಾರ್ದ ಸಹಕಾರ ಚಳವಳಿ' ಎಂಬ ವಿಷಯದ ಬಗ್ಗೆ ಬೆಂಗಳೂರಿನ ಗೋಖಲೆ ಸಾರ್ವಜನಿಕ ಸಂಸ್ಥೆಯಲ್ಲಿ ನೀಡಿದ 'ಪ್ರಾ. ಎಚ್ಚೆಸ್ಕೆ ದತ್ತಿ ಉಪನ್ಯಾಸ' ಕಾರ್ಯಕ್ರಮದ ವರದಿಯೂ ಈ ಸಂಚಿಕೆಯಲ್ಲಿದೆ.

'ಸಣ್ಣ ಕಥಾ ಶ್ರಾವಣ ಅಭಿಯಾನ' – ನಮ್ಮ ವೇದಿಕೆಯ ಸದಸ್ಯರಲ್ಲಿ ಕಥಾ ರಚನೆಯನ್ನು ಪ್ರೋತ್ಸಾಹಿಸುವ ಉದ್ದೇಶದಿಂದ ಶ್ರಾವಣ ಮಾಸದಲ್ಲಿ (ಆಗಸ್ಟ್ 17ರಿಂದ ಸೆಪ್ಟೆಂಬರ್ 14ರವರೆಗೆ) ಸಣ್ಣ ಕಥಾ ಅಭಿಯಾನವನ್ನು ಹಮ್ಮಿಕೊಳ್ಳಲಾಗಿದೆ. ಈ ಅಭಿಯಾನದಲ್ಲಿ ಕನಿಷ್ಠ ಒಂದು ನೂರು ಹೊಸ ಸಣ್ಣ ಕತೆಗಳನ್ನು ನಮ್ಮ ಸದಸ್ಯರಿಂದ ನಿರೀಕ್ಷಿಸಲಾಗಿದ್ದು, ಇದಕ್ಕೆ ಪೂರ್ವಭಾವಿಯಾಗಿ 13ನೆಯ ಆಗಸ್ಟ್ 2023ರಂದು ಒಂದು ದಿನದ 'ಸಣ್ಣ ಕಥಾ ಶಿಬಿರ'ವನ್ನು ಹಮ್ಮಿಕೊಳ್ಳಲಾಗಿತ್ತು. ನುರಿತ ಸಂಪನ್ಮೂಲ ವ್ಯಕ್ತಿಗಳ ಮಾರ್ಗದರ್ಶನದಿಂದ ನಮ್ಮ ಸದಸ್ಯರಲ್ಲಿ ನವೋತ್ಸಾಹವನ್ನು ತುಂಬಿದ ಈ ಶಿಬಿರದ ಕುರಿತ ವರದಿಯನ್ನೂ ಈ ಸಂಚಿಕೆಯಲ್ಲಿ ನೀಡಲಾಗಿದೆ.

ಈ ಸಾಹಿತ್ಯ ದಾಸೋಹದಲ್ಲಿ ಭಾಗವಹಿಸಿ ಸ್ವರಚಿತ ಹಾಗೂ ವೈವಿಧ್ಯಮಯ ಕತೆ, ಕವನ, ಪ್ರಬಂಧಗಳನ್ನು ಪ್ರಸ್ತುತಪಡಿಸಿದ ಎಲ್ಲಾ 20 ದಾಸೋಹಿಗಳಿಗೂ, ದಾಸೋಹದ ಅಧ್ಯಕ್ಷತೆವಹಿಸಿ ಎಲ್ಲಾ ಪ್ರಸ್ತುತಿಗಳನ್ನೂ ವಿಶ್ಲೇಷಿಸಿದ ಶ್ರೀಮತಿ ಸಿ.ಆರ್. ಕಮಲಾಕ್ಷಿ ಅವರಿಗೂ ನಮ್ಮ ವಂದನೆಗಳು. ಸಾಹಿತ್ಯ ದಾಸೋಹ, ಸಣ್ಣ ಕಥಾ ಶಿಬಿರ ಮತ್ತಿತರ ಕಾರ್ಯಕ್ರಮಗಳನ್ನು ಅಚ್ಚುಕಟ್ಟಾಗಿ ನಿರ್ವಹಿಸಲು ಸಹಕರಿಸಿದ ಎಲ್ಲ ಸದಸ್ಯರಿಗೂ, ಈ ಸಂಚಿಕೆಯನ್ನು ರೂಪಿಸಿದ ಶ್ರೀ ಎಸ್.ಶೃಂಗೇಶ್ವರ ಶರ್ಮ ಅವರಿಗೂ. ಸಂಚಿಕೆಗೆ ಸುಂದರ ಮುಖಚಿತ್ರ ಒದಗಿಸಿದ ಶ್ರೀ ಶ್ರೀಧರ ಕೋಮರವಲ್ಲಿ ಅವರಿಗೂ ಸಂಚಾಲಕ ಸಮಿತಿಯ ಧನ್ಯವಾದಗಳು.

ಈ ಸಂಚಿಕೆಯ ಬಗ್ಗೆ ಓದುಗರ ಸಲಹೆ, ಅಭಿಪ್ರಾಯಗಳಿಗೆ ಸದಾ ಸ್ವಾಗತ.

ಧನ್ಯವಾದಗಳೊಂದಿಗೆ.

ಸಂಚಾಲಕ ಸಮಿತಿ
ಸಮನ್ವಯ ಸಮಿತಿ ಕನ್ನಡವೇ ಸತ್ಯ
ನೋಡಿಯೋ ದಾಸೋಹ ವೇದಿಕೆ, ಬೆಂಗಳೂರು 26.08..2023

ದಾಸೋಹದ ಪುಟಗಳಲ್ಲಿ ...

ಮುಖಚಿತ್ರ : ಚಿಪ್ಪಿನೆದೆಯ ಮುನಿಯಾ ಹಕ್ಕಿ (Scaly breasted Munia)

ಚಿತ್ರಕೃಪೆ : ಶ್ರೀ ಶ್ರೀಧರ ಕೋಮರವಳ್ಳಿ

ಸಮನ್ವಯ ಸಮಿತಿ - ಕನ್ನಡವೇ ಸತ್ಯ
ನೋಡಿಯೋ ಸಾಹಿತ್ಯ ದಾಸೋಹ ವೇದಿಕೆ

ಸಾಹಿತ್ಯ ದಾಸೋಹ 215

ಕಾರ್ಯಕ್ರಮ ವರದಿ: ಎಸ್.ಶೃಂಗೇಶ್ವರ ಶರ್ಮ

22ನೆಯ ಜುಲೈ 2023ರ ಶನಿವಾರದಂದು 'ನೋಡಿಯೋ ಸಾಹಿತ್ಯ ದಾಸೋಹ' ಅಂತರಜಾಲ ವೇದಿಕೆಯಲ್ಲಿ ಮಧ್ಯಾಹ್ನ 3.30ಕ್ಕೆ ಪ್ರಾರಂಭವಾದ 215ನೆಯ ಸಾಹಿತ್ಯ ದಾಸೋಹದ ಅಧ್ಯಕ್ಷತೆಯನ್ನು ಶ್ರೀಮತಿ ಸಿ.ಆರ್. ಕಮಲಾಕ್ಷಿ ಅವರು ವಹಿಸಿದ್ದರು. ಒಟ್ಟು 20 ದಾಸೋಹಿಗಳು ತಮ್ಮ ವಿವಿಧ ಬರಹಗಳನ್ನು ಪ್ರಸ್ತುತಪಡಿಸಿದರು.



ಆರಂಭದಲ್ಲಿ ಶ್ರೀ ಭ.ರಾ.ವಿಜಯಕುಮಾರ್ ಅವರು ಎಲ್ಲರನ್ನೂ ಸ್ವಾಗತಿಸಿ, ಅಧ್ಯಕ್ಷತೆ ವಹಿಸಿರುವ ಶ್ರೀಮತಿ ಸಿ.ಆರ್.ಕಮಲಾಕ್ಷಿ ಅವರನ್ನು ಪರಿಚಯಿಸಿದರು.

ವೃತ್ತಿಯಿಂದ ಬೆಂಗಳೂರಿನ ಆಡುಗೋಡಿಯಲ್ಲಿರುವ ಸರ್ಕಾರಿ ಪದವಿಪೂರ್ವ ಕಾಲೇಜಿನಲ್ಲಿ ರಸಾಯನ ಶಾಸ್ತ್ರದ ಉಪನ್ಯಾಸಕಿಯಾಗಿರುವ ಶ್ರೀಮತಿ ಕಮಲಾಕ್ಷಿ ಯವರು ಪ್ರವೃತ್ತಿಯಿಂದ ಸಾಹಿತ್ಯಾಸಕ್ತರಾಗಿದ್ದು, 'ಕಥಾಗುಚ್ಛ' ಎಂಬ ಫೇಸ್ಬುಕ್ ಸಾಹಿತ್ಯ ಬಳಗದಲ್ಲಿ ಹಾಗೂ ವಿವಿಧ ಪತ್ರಿಕೆಗಳು, ನಿಯತಕಾಲಿಕಗಳಲ್ಲಿ ಕತೆ, ಕವನ, ಲಲಿತ ಪ್ರಬಂಧ, ವೈಚಾರಿಕ ಬರಹಗಳನ್ನು ಪ್ರಕಟಿಸಿರುವುದಲ್ಲದೆ, 'ಕಂಪನಾಂಕ' ಎಂಬ ಖಾಸಗಿ ಟೆಲಿ ರೇಡಿಯೋ ವಾಹಿನಿಯಲ್ಲಿ 'ವಚನ ಸಿರಿಕಂಪು' ಎಂಬ ಮಾಲಿಕೆಯಲ್ಲಿ 75ಕ್ಕೂ ಹೆಚ್ಚು ವಚನಕಾರರ ಜೀವನ ಚರಿತ್ರೆ ಹಾಗೂ ವಚನಗಳ ಪರಿಚಯವನ್ನು ಮಾಡಿಕೊಡುತ್ತಿದ್ದಾರೆ. ಇವರ ಕೆಲವು ಪುಸ್ತಕಗಳು ಮುದ್ರಣ ಹಂತದಲ್ಲಿದ್ದು ಸದ್ಯದಲ್ಲಿಯೇ ಪ್ರಕಟವಾಗಲಿವೆ ಎಂದು ಶ್ರೀಮತಿ ಕಮಲಾಕ್ಷಿಯವರನ್ನು ಶ್ರೀ ವಿಜಯಕುಮಾರ್ ಅವರು ವೇದಿಕೆಗೆ ಪರಿಚಯಿಸಿ ಸ್ವಾಗತಿಸಿದರು.

ಶ್ರೀ ಬೆಂ.ಶ್ರೀ.ರವೀಂದ್ರ ಅವರು ತಮ್ಮ ಪ್ರಾಸ್ತಾವಿಕ ನುಡಿಗಳಲ್ಲಿ, 'ಸಾಹಿತ್ಯ ದಾಸೋಹ'ದ ಪಿಡಿಎಫ್ ಸಂಚಿಕೆಗಳ ಬಗ್ಗೆ ಮಾತನಾಡಿ, ಇದೊಂದು ಅಮೂಲ್ಯ ಭಂಡಾರವಾಗಿದ್ದು, ಸದ್ಯದಲ್ಲಿಯೇ ಇವನ್ನು ವೇದಿಕೆಯ ಜಾಲತಾಣದಲ್ಲಿ ಪ್ರಕಟಿಸಲಾಗುವುದು. ಪ್ರತಿ ಬಾರಿಯೂ ಈ ಸಂಚಿಕೆಗಳು ವಾಟ್ಸಾಪ್ ವೇದಿಕೆಯಲ್ಲಿ ಬಿಡುಗಡೆ ಆದಾಗ ಹಾಗೂ ವೇದಿಕೆಯ ವಿವಿಧ ಕಾರ್ಯಕ್ರಮಗಳನ್ನು ನಮ್ಮ ಯೂಟ್ಯೂಬ್ ವಾಹಿನಿಯಲ್ಲಿ ಪ್ರಸ್ತುತಪಡಿಸಿದಾಗ, ನಮ್ಮ ಸದಸ್ಯರೆಲ್ಲರೂ ಇವುಗಳನ್ನು ನೋಡಿ ತಮ್ಮ ಮುಕ್ತ ಅಭಿಪ್ರಾಯವನ್ನು ವ್ಯಕ್ತಪಡಿಸಬೇಕೆಂದು ಸೂಚಿಸಿದರು.

ಬರುವ ತಿಂಗಳನಲ್ಲಿ ಸಮನ್ವಯ ಸಮಿತಿ ವೇದಿಕೆಯು ನಡೆಸಲು ಉದ್ದೇಶಿಸಲಆರುವ ವಿವಿಧ ಕಾರ್ಯಕ್ರಮಗಳ ವಿವರ ನೀಡಿದ ಶ್ರೀ ರವೀಂದ್ರ ಅವರು, ನಾಡಿನ ಪ್ರಬುದ್ಧ ಸಾಹಿತಿಯಾದ ಡಾ.ಎಚ್.ಎಸ್.ವೆಂಕಟೇಶ ಮೂರ್ತಿಯವರು ತಮ್ಮ ಎಂಬತ್ತು ವಸಂತಗಳನ್ನು ಪೂರೈಸಿದ್ದು, ಈ ಸಂದರ್ಭದಲ್ಲಿ ನಮ್ಮ ನೋಡಿಯೋ ಅಂತರ್ಜಾಲ ವೇದಿಕೆಯಲ್ಲಿ 6ನೆಯ ಆಗಸ್ಟ್ 2023ರಂದು ಡಾ. ಆರ್.ಲಕ್ಷ್ಮೀನಾರಾಯಣ ಅವರು 'ಡಾ. ಎಚ್.ಎಸ್.ವಿ. ಒಂದು ಸಹೃದಯ ಅನುಸಂಧಾನ' ಎಂಬ ಕುರಿತು ಮಾತನಾಡಲಿದ್ದಾರೆ. ಇದಲ್ಲದೆ, ವೇದಿಕೆಯು ಈವರೆಗೆ ನಡೆಸಿದ ವಿವಿಧ ಅಭಿಯಾನಗಳು ಹಾಗೂ ಪ್ರಕಟಣೆಗಳನ್ನು ಪ್ರಸ್ತಾಪಿಸಿದ ಅವರು, ಈ ಬಾರಿ 17ನೆಯ ಆಗಸ್ಟ್ 2023ರಿಂದ 14 ಸೆಪ್ಟೆಂಬರ್ 2023ರವರೆಗಿನ ಶ್ರಾವಣ ಮಾಸದ ಅವಧಿಯಲ್ಲಿ 'ಸಣ್ಣ ಕಥೆಗಳ ಶ್ರಾವಣ' ಎಂಬ ಬಹುಮುಖ್ಯ ಅಭಿಯಾನವೊಂದನ್ನು ಹಮ್ಮಿಕೊಳ್ಳಲು ಉದ್ದೇಶಿಸಿದ್ದು, ಈ ಅಭಿಯಾನದಲ್ಲಿ ನಮ್ಮ ಹೆಚ್ಚಿನ ಸದಸ್ಯರು ಪಾಲ್ಗೊಂಡು ತಮ್ಮ ಸ್ವರಚಿತ ಸಣ್ಣ ಕತೆಗಳನ್ನು ರಚಿಸಿ, ವೇದಿಕೆಯಲ್ಲಿ ಪ್ರಕಟಿಸುವುದರ ಮೂಲಕ ಈ ಅಭಿಯಾನದಲ್ಲಿ ಕನಿಷ್ಠ ಒಂದು ನೂರು ಹೊಸ ಸಣ್ಣ ಕತೆಗಳು ಹೊರಹೊಮ್ಮಬೇಕು ಎಂಬ ನಮ್ಮ ಗುರಿಯನ್ನು ಸಾಧಿಸುವಲ್ಲಿ ಸಹಕರಿಸಬೇಕು ಎಂದು ಕೋರಿದರು. ಇದಕ್ಕೆ ಪೂರ್ವಭಾವಿಯಾಗಿ, ಕತೆಗಾರರಿಗೆ ಸೂಕ್ತ ಮಾರ್ಗದರ್ಶನವನ್ನು ನೀಡುವ ದೃಷ್ಟಿಯಿಂದ ಒಂದು 'ಸಣ್ಣ ಕಥಾ ಶಿಬಿರ'ವನ್ನು ಏರ್ಪಡಿಸುವ ಉದ್ದೇಶವಿದ್ದು, ಈ ಬಗ್ಗೆ ಪೂರ್ವಭಾವಿ ಸಿದ್ಧತೆಗಳು ನಡೆಯುತ್ತಿದ್ದು, ಹೆಚ್ಚಿನ ವಿವರಗಳನ್ನು ಸದ್ಯದಲ್ಲಿಯೇ ನೀಡಲಾಗುವುದು. ಈ ಶಿಬಿರದಲ್ಲಿ ಹೆಚ್ಚಿನ ಸದಸ್ಯರು ಪಾಲ್ಗೊಳ್ಳಬೇಕು ಎಂದು ಕರೆ ನೀಡಿದರು. ವೇದಿಕೆಯ ಸದಸ್ಯರು ರಚಿಸಿದ ಹಲವಾರು ಪುಸ್ತಕಗಳು ಸದ್ಯದಲ್ಲಿಯೇ ಬಿಡುಗಡೆಯಾಗಲಿರುವ ಬಗ್ಗೆ ತಮ್ಮ ಮೆಚ್ಚುಗೆ ವ್ಯಕ್ತಪಡಿಸಿದ ರವೀಂದ್ರ ಅವರು, ಈ ಎಲ್ಲ ಲೇಖಕರುಗಳಿಗೂ ವೇದಿಕೆಯ ಪರವಾಗಿ ಶುಭ ಹಾರೈಸಿದರು.

ಇದೇ ಸಂದರ್ಭದಲ್ಲಿ ಶ್ರೀ ಗುರುರಾಜ ಶಾಸ್ತ್ರಿಯವರು ಸಿದ್ಧಪಡಿಸಿದ 'ಸಾಹಿತ್ಯ ದಾಸೋಹ – 214'ರ ಸಂಚಿಕೆಯನ್ನು ಬಿಡುಗಡೆ ಮಾಡಲಾಯಿತು.

'ಸಾಹಿತ್ಯ ದಾಸೋಹ 215'ರ ಅಧ್ಯಕ್ಷತೆವಹಿಸಿದ ಶ್ರೀಮತಿ ಸಿ.ಆರ್.ಕಮಲಾಕ್ಷಿಯವರು, ದಾಸೋಹದಲ್ಲಿ ಭಾಗವಹಿಸಿ ಪ್ರಸ್ತುತಪಡಿಸಿದ ಎಲ್ಲಾ 20 ಬರಹಗಾರರ ಸ್ವರಚಿತ ಕತೆ, ಕವನ, ಲೇಖನಗಳನ್ನೂ ವಿಶ್ಲೇಷಿಸಿದರು.

ಶ್ರೀ ವೆಂಕಟೇಶ್ ಕಾಮತ್ ಅವರಿಂದ ವಂದನಾರ್ಪಣೆಯೊಂದಿಗೆ ಕಾರ್ಯಕ್ರಮ ಮುಕ್ತಾಯವಾಯಿತು. ಸುಮಾರು ಮೂರು ಗಂಟೆಗಳ ಕಾಲ ನಡೆದ 215ನೆಯ ಸಾಹಿತ್ಯ ದಾಸೋಹವನ್ನು ಸಂಚಾಲಕರಾದ ಶ್ರೀ ಕೆ.ಎನ್. ಮಹಾಬಲ ಅವರು ನಿರ್ವಹಿಸಿ ನಿರೂಪಿಸಿದರು. ದಾಸೋಹದ ಜಿ.ಮೀಟ್ ಆತಿಥ್ಯವನ್ನು ಶ್ರೀಮತಿ ರಾಧಿಕಾ ವಿ. ಗುಜ್ಜಾರ್ ಅವರು ವಹಿಸಿಕೊಂಡಿದ್ದರೆ, ಶ್ರೀಮತಿ ರೇಣುಕಾ ದೇಸಾಯಿಯವರು ಯುಟ್ಯೂಬ್ ಪ್ರಸಾರವನ್ನು ಸಿದ್ಧಪಡಿಸಿದರು. ಶ್ರೀಯುತ ಗುರುಪ್ರಸಾದ್ ಹಾಗೂ ಗುರುರಾಜ ಶಾಸ್ತ್ರಿಯವರು ತಂತ್ರಜ್ಞಾನ ಕಾರ್ಯವನ್ನು ನಿರ್ವಹಿಸಿದರು.

ದಾಸೋಹದಲ್ಲಿ ಪ್ರಸ್ತುತಪಡಿಸಲಾದ ಎಲ್ಲ 20 ಬರಹಗಳು, ಅಧ್ಯಕ್ಷರ ಅನಿಸಿಕೆಗಳು ಹಾಗೂ ವಿವಿಧ ಕಾರ್ಯಕ್ರಮವಳ ವರದಿಗಳನ್ನು ಈ ಸಂಚಿಕೆಯಲ್ಲಿ ನೀಡಲಾಗಿದೆ.


***

ಸಮನ್ವಯ ಸಮಿತಿ – ಭಾರತೀಯ ಸ್ಟೇಟ್ ಬ್ಯಾಂಕ್ ಕನ್ನಡ ಸಂಘಗಳು
ಗೋಖಲೆ ಸಾರ್ವಜನಿಕ ವಿಚಾರ ಸಂಸ್ಥೆ

ಪ್ರಾ.ಎಚ್ಚೆಸ್ಕೆ ಸ್ಮಾರಕ ದತ್ತಿ ಉಪನ್ಯಾಸ – ೦೫
" ಕರ್ನಾಟಕದಲ್ಲಿ ಸೌಹಾರ್ದ ಸಹಕಾರ ಚಳವಳಿ "
ಉಪನ್ಯಾಸಕರು: ಶ್ರೀ ಬಿ.ಎಸ್. ಚಂದ್ರಶೇಖರ್

ಕಾರ್ಯಕ್ರಮ ವರದಿ: ಶ್ರೀ ಟಿ.ಕೆ. ರಂಗನಾಥ್

ಭಾರತೀಯ ಸ್ಟೇಟ್ ಬ್ಯಾಂಕ್ ಕನ್ನಡ ಸಂಘಗಳ ಸಮನ್ವಯ ಸಮಿತಿಯು ಬೆಂಗಳೂರಿನ ಗೋಖಲೆ ಸಾರ್ವಜನಿಕ ವಿಚಾರ ಸಂಸ್ಥೆಯಲ್ಲಿ ಸ್ಥಾಪಿಸಿರುವ 'ಪ್ರಾ.ಎಚ್ಚೆಸ್ಕೆ ಸ್ಮಾರಕ ದತ್ತಿ ಉಪನ್ಯಾಸ ಕಾರ್ಯಕ್ರಮ'ದ 5ನೇ ವಾರ್ಷಿಕ ಉಪನ್ಯಾಸವು ಕರ್ನಾಟಕ ಸರಕಾರದ ಕನ್ನಡ ಮತ್ತು ಸಂಸ್ಕೃತಿ ಇಲಾಖೆಯ ಸಹಯೋಗದೊಂದಿಗೆ 7ನೆಯ ಆಗಸ್ಟ್ 2023ರಂದು ಸೋಮವಾರ ಸಂಜೆ 6.00 ಗಂಟೆಗೆ ನಡೆಯಿತು. ಗೋಖಲೆ ಸಾರ್ವಜನಿಕ ವಿಚಾರ ಸಂಸ್ಥೆಯ ಸಭಾಂಗಣದಲ್ಲಿ ನಡೆದ ಈ ಕಾರ್ಯಕ್ರಮದಲ್ಲಿ ಭಾರತೀಯ ಸ್ಟೇಟ್ ಬ್ಯಾಂಕಿನ ನಿವೃತ್ತ ಮುಖ್ಯ ವ್ಯವಸ್ಥಾಪಕ ಶ್ರೀ ಬಿ.ಎಸ್.ಚಂದ್ರಶೇಖರ್ ಅವರು "ಕರ್ನಾಟಕದಲ್ಲಿ ಸೌಹಾರ್ದ ಸಹಕಾರ ಚಳವಳ" ಕುರಿತು ಉಪನ್ಯಾಸ ನೀಡಿದರು. ಶ್ರೀ ರವಿ ಕುಸುಬಿ ಅವರಿಂದ ಸ್ವಾಗತ ಹಾಗೂ ಅತಿಥಿಗಳ ಪರಿಚಯದೊಂದಿಗೆ ಕಾರ್ಯಕ್ರಮ ಆರಂಭವಾಯಿತು.



ತೆರೆಯ ಮೇಲೆ ಪವರ್ ಪಾಯಿಂಟ್ ಪ್ರಸ್ತುತಿಯ ಮೂಲಕ ಸಹಕಾರ ಚಳವಳ ಮತ್ತು ವಿವಿಧ ಬಗೆಯ ಸಹಕಾರ ಸಂಘಗಳು ಹಾಗೂ ಸಹಕಾರಿ ಬ್ಯಾಂಕುಗಳ ಹುಟ್ಟು, ಬೆಳವಣಿಗೆ, ಏಳುಬೀಳುಗಳು, ವಿವಿಧ ಸಹಕಾರಿ ಕಾಯ್ದೆಗಳ ಸ್ವರೂಪ ಇತ್ಯಾದಿಗಳನ್ನು ವಿವರಣಾತ್ಮಕವಾಗಿ ತಿಳಿಸಿದ ಶ್ರೀ ಚಂದ್ರಶೇಖರ್ ಅವರು, ಭಾರತದಲ್ಲಿ ಕಳೆದ ಎರಡು ಶತಮಾನಗಳಲ್ಲಿ ಸಹಕಾರ ಚಳುವಳಿಗೆ ಸಂಬಂಧಿಸಿದಂತೆ ನಡೆದ ಬೆಳವಣಿಗೆಗಳನ್ನು ವಿಶ್ಲೇಷಿಸಿ ವಿಶ್ವದ ಹಾಗೂ ವಿಶೇಷವಾಗಿ ಯುರೋಪ್ ಖಂಡದ ವಿವಿಧ ದೇಶಗಳಲ್ಲಿನ ಸಹಕಾರಿ ಸಂಸ್ಥೆಗಳ ಚಟುವಟಿಕೆಗಳ ಬಗ್ಗೆ ತಿಳಿಸಿದರು.


ಜಾಗತಿಕ ಮಟ್ಟದ ಅಂತಾರಾಷ್ಟ್ರೀಯ ಸಹಕಾರ ದಿನ, ರಾಷ್ಟ್ರೀಯ ಸಹಕಾರ ಸಪ್ತಾಹ, ಶಿಕ್ಷಣ ಮತ್ತು ಭಾರತದ ಮಹತ್ವದ ಸಹಕಾರಿ ಸಂಸ್ಥೆಗಳ ಬಗ್ಗೆ ಮಾಹಿತಿ ನೀಡಿದ ಚಂದ್ರಶೇಖರ್, ಹಲವು ಸಹಕಾರ ಸಂಸ್ಥೆಗಳ ವಿಫಲತೆಯ ಹಿನ್ನೆಲೆಯಲ್ಲಿ ನೇಮಿಸಿದ ಅರ್ಧನಾರೀಶ್ವರನ್ ಸಮಿತಿಯ ವರದಿಯನ್ವಯ ಸಹಕಾರ ಸಂಸ್ಥೆಗಳಲ್ಲಿ ಸರ್ಕಾರದ

ಹಸ್ತಕ್ಷೇಪವನ್ನು ಕಡಿಮೆ ಮಾಡುವ ಉದ್ದೇಶದಿಂದ ಎರಡು ದಶಕಗಳ ಹಿಂದೆ ಕರ್ನಾಟಕದಲ್ಲಿ ಜಾರಿಯಾದ ಹೊಸ ಸಹಕಾರಿ ಕಾಯ್ದೆಯ ಬಗ್ಗೆ ಸೂಕ್ತ ವಿವರಣೆ ನೀಡಿದರು.



ಪ್ರಸಕ್ತ ಜಾರಿಯಲ್ಲಿರುವ ಸಹಕಾರಿ ಅಧಿನಿಯಮ ಹಾಗೂ ಸೌಹಾರ್ದ ಸಹಕಾರಿ ಅಧಿನಿಯಮಗಳ ನಡುವಣ ವ್ಯತ್ಯಾಸವನ್ನು ತಿಳಿಸಿ, ಕರ್ನಾಟಕದಲ್ಲಿ ಹೊಸ ನಿಯಮದಡಿ ಕಾರ್ಯನಿರ್ವಹಿಸುತ್ತಿರುವ ಸುಮಾರು 6000 ಸಹಕಾರಿ ಸಂಸ್ಥೆಗಳು ಹಾಗೂ ಈಗ ಕಾರ್ಯಪ್ರವೃತ್ತವಾಗಿರುವ 18 ಸೌಹಾರ್ದ ಸಹಕಾರಿ ಬ್ಯಾಂಕುಗಳು, ಅವುಗಳ ಕಾರ್ಯವ್ಯಾಪ್ತಿ ಮತ್ತು ವೈಶಿಷ್ಟ್ಯಗಳನ್ನು ವಿವರಿಸಿದರಲ್ಲದೆ, ಭಾರತ ಸಂವಿಧಾನದ 97ನೇ ತಿದ್ದುಪಡಿಯ ಮೂಲಕ ಸಹಕಾರಿ ಸಂಸ್ಥೆಗಳನ್ನು ಸ್ಥಾಪಿಸುವುದು ನಾಗರಿಕರ ಮೂಲಭೂತ ಹಕ್ಕು ಆಗಿರುವುದರ ಮಹತ್ವವನ್ನು ಮನದಟ್ಟು ಮಾಡಿಕೊಟ್ಟರು.

ಕರ್ನಾಟಕ ಹಾಗೂ ದೇಶದ ವಿವಿಧ ರಾಜ್ಯಗಳಲ್ಲಿ ತಮ್ಮದೇ ಆದ ಹೊಸ ಹೊಸ ಆವಿಷ್ಕಾರಗಳ ಮೂಲಕ ಹಲವು ಸಾಧನೆಗಳನ್ನು ಮಾಡಿ ರಾಜ್ಯ ಹಾಗೂ ರಾಷ್ಟ್ರ ಮಟ್ಟದಲ್ಲಿ ಮನ್ನಣೆ ಗಳಿಸಿದ ಹಲವು ಸಹಕಾರ ಸಂಘಗಳ ವಿವಿಧ ಜನಪ್ರಿಯ ಚಟುವಟಿಕೆಗಳ ಬಗ್ಗೆ ಉದಾಹರಣೆಗಳ ಸಹಿತ ವಿವರಿಸಿದ ಚಂದ್ರಶೇಖರ್ ಅಂತಹ ಸಂಘಗಳ ಜನ ಮೆಚ್ಚುಗೆಯ ಕಾರ್ಯಕ್ರಮಗಳನ್ನು ಶ್ಲಾಘಿಸಿದರು.



ಸುಮಾರು 80 ನಿಮಿಷಗಳ ಉಪನ್ಯಾಸದ ನಂತರ ಸಭಿಕರ ಹಲವು ಪ್ರಶ್ನೆಗಳಿಗೆ ಸಮಾಧಾನಕರ ಉತ್ತರ ನೀಡಿ ಸಹಕಾರಿ ಸಂಸ್ಥೆಗಳ ಮಹತ್ವವನ್ನು ಮನಗಾಣಿಸಿದರಲ್ಲದೆ, ಇತ್ತೀಚೆಗೆ ಕರ್ನಾಟಕದಲ್ಲಿ ವಿವಿಧ ಸಹಕಾರಿ ಸಂಸ್ಥೆಗಳ ಕುಸಿತದಿಂದಾಗಿ ಠೇವಣಿದಾರರು ಅನುಭವಿಸುತ್ತಿರುವ ಸಂಕಷ್ಟಗಳು, ಸರ್ಕಾರದ ಉಪಕ್ರಮಗಳು, ಠೇವಣಿ ವಿಮೆ ಮುಂತಾದ ವಿಷಯಗಳ ಬಗ್ಗೆ ಸಭಿಕರಲ್ಲಿ ಅರಿವು ಮೂಡಿಸಿದರು.

ಉಪನ್ಯಾಸದ ನಂತರ ಶ್ರೀ ಗುರುರಾಜ ಶಾಸ್ತ್ರಿಯವರು ಉಪನ್ಯಾಸಕರಿಗೆ, ಗೋಖಲೆ ಸರ್ವಜನಿಕ ವಿಚಾರ ಸಂಸ್ಥೆಗೆ ಹಾಗೂ ಸಭಿಕರಿಗೆ ವಂದನೆಗಳನ್ನು ಸಲ್ಲಿಸಿದರು.

ಶ್ರೀ ಬಿ.ಎಸ್. ಚಂದ್ರಶೇಖರ್ ಅವರ ಉಪನ್ಯಾಸವು ಸಮನ್ವಯ ಸಮಿತಿಯ ಯು-ಟ್ಯೂಬ್ ವಾಹಿನಿಯಲ್ಲಿ ಲಭ್ಯವಿದ್ದು ಅದನ್ನು ಈ ಕೆಳಗೆ ನೀಡಿರುವ ಕೊಂಡಿಯ ಮೇಲೆ ಕ್ಲಿಕ್ ಮಾಡುವುದರ ಮೂಲಕ ವೀಕ್ಷಿಸಬಹುದು.

https://www.youtube.com/live/qqD90SBYbqk?feature=share

***

ಸಮನ್ವಯ ಸಮಿತಿ – ಕನ್ನಡವೇ ಸತ್ಯ ವೇದಿಕೆ
ಸಣ್ಣ ಕಥಾ ಶಿಬಿರ

ಕಾರ್ಯಕ್ರಮ ವರದಿ: ಶ್ರೀ ಹು.ವಾ.ಶ್ರೀಪ್ರಕಾಶ್

ಸಮನ್ವಯ ಸಮಿತಿ ಕನ್ನಡವೇ ಸತ್ಯ ವೇದಿಕೆಯ ಆಶ್ರಯದಲ್ಲಿ 13ನೆಯ ಆಗಸ್ಟ್ 2023 ರಂದು ಭಾನುವಾರ, ಬೆಂಗಳೂರಿನ ಇಂಡಿಯನ್ ಇನ್ಸ್ಟಿಟ್ಯೂಟ್ ಆಫ್ ವರ್ಲ್ಡ್ ಕಲ್ಚರ್ ಸಭಾಂಗಣದಲ್ಲಿ, ಸಾಹಿತಿ ಹಾಗೂ ಅಂಕಣಕಾರ



ಶ್ರೀ ಶಶಿಧರ ಹಾಲಾಡಿಯವರ ನಿರ್ದೇಶನ ದಲ್ಲಿ ಒಂದು ದಿನದ 'ಸಣ್ಣ ಕಥಾ ಶಿಬಿರ' ವನ್ನು ಆಯೋಜಿಸಲಾಗಿತ್ತು.

ಶ್ರೀಮತಿ ವಿಜಯಲಕ್ಷ್ಮಿ ಅವರಿಂದ ಪ್ರಾರ್ಥನೆಯ ನಂತರ ವೇದಿಕೆಯ ಪ್ರಧಾನ ಸಂಚಾಲಕರಾದ ಶ್ರೀ ಬೆಂ.ಶ್ರೀ. ರವೀಂದ್ರ ಅವರು, ಶಿಬಿರದ ನಿರ್ದೇಶಕರಾದ ಶ್ರೀ ಶಶಿಧರ ಹಾಲಾಡಿ ಹಾಗೂ ಸಂಪನ್ಮೂಲ ವ್ಯಕ್ತಿಗಳಾದ ಶ್ರೀಯುತ ಎನ್.ಎಸ್.ಶ್ರೀಧರ ಮೂರ್ತಿ, ವಾಸುದೇವ ನಾಡಿಗ್ ಮತ್ತು ಸಂತೋಷ್ ಕುಮಾರ್ ಮಹೆಂದೆಳೆ ಅವರುಗಳನ್ನು ಹಾಗೂ ಎಲ್ಲಾ ಶಿಬಿರಾರ್ಥಿಗಳನ್ನೂ ಸಣ್ಣ ಕಥಾ ಶಿಬಿರಕ್ಕೆ ಸ್ವಾಗತಿಸಿದರು.

ಸಮನ್ವಯ ಸಮಿತಿಯ ಚಟುವಟಿಕೆಗಳ ಬಗ್ಗೆ ಸಂಕ್ಷಿಪ್ತವಾಗಿ ತಿಳಿಸಿದ ರವೀಂದ್ರ ಅವರು, ಭಾರತೀಯ ಸ್ಟೇಟ್ ಬ್ಯಾಂಕ್‌ನಲ್ಲಿ 1972ರಲ್ಲಿ ಕನ್ನಡ ಸಂಘಗಳ ಸ್ಥಾಪನೆ, 1978ರಲ್ಲಿ ಸಮನ್ವಯ ಸಮಿತಿಯ ಆರಂಭ, ಪ್ರಾಚಾರ್ಯ ಎಚ್ಚೆಸ್ಕೆ ಅವರ ನಿರ್ದೇಶನದಲ್ಲಿ ಹಣ ಮತ್ತು ಬ್ಯಾಂಕಿಂಗ್‌ಗೆ ಮೀಸಲಾದ 'ಬ್ಯಾಂಕಿಂಗ್ ಪ್ರಪಂಚ' ಎಂಬ



ನಿಯತಕಾಲಿಕದ ಪ್ರಕಟಣೆ, ಕರ್ನಾಟಕದ ವಿವಿಧ ಭಾಗಗಳಲ್ಲಿ ನಡೆಸಿದ 27 ಬ್ಯಾಂಕಿಂಗ್ ಕಮ್ಮಟಗಳು, ಇಂಗ್ಲಿಷ್–ಕನ್ನಡ ಬ್ಯಾಂಕಿಂಗ್ ನಿಘಂಟು ಪ್ರಕಟಣೆ, 1999ರಿಂದ ಪ್ರತಿ ತಿಂಗಳಗೊಂದರಂತೆ 215 ಸಾಹಿತ್ಯ ದಾಸೋಹಗಳನ್ನು ಆಯೋಜಿಸುವುದರ ಮೂಲಕ ಸಾಕಷ್ಟು ಹೊಸ ಬರಹಗಾರರಿಗೆ ಪ್ರೋತ್ಸಾಹ, ಹಲವು ಪುಸ್ತಕಗಳ ಪ್ರಕಟಣೆ ಮುಂತಾದ ಬ್ಯಾಂಕಿಂಗ್ ಮತ್ತು ಸಾಹಿತ್ಯಿಕ ಚಟುವಟಿಕೆಗಳ ಬಗ್ಗೆ ವಿವರಿಸಿದ ರವೀಂದ್ರ ಅವರು, ಸಮನ್ವಯ ಸಮಿತಿ ಹಾಗೂ ಕನ್ನಡವೇ ಸತ್ಯ ವಾಟ್ಸಾಪ್ ವೇದಿಕೆ ಮತ್ತು ಕೊರೋನಾ ಕಾಲಘಟ್ಟದಲ್ಲಿ ಹುಟ್ಟಿಕೊಂಡ ನೋಡಿಯೋ ಸಾಹಿತ್ಯ ದಾಸೋಹ ಅಂತರಜಾಲ ವೇದಿಕೆಯ ವಿವಿಧ ಚಟುವಟಿಕೆಗಳ ಬಗ್ಗೆ ತಿಳಿಸಿದರು.



ವೇದಿಕೆಯಿಂದ ‘ಸಾಹಿತ್ಯ ಸಿರಿ’, ‘ಸಾಹಿತ್ಯ ಮಂದಾರ’ ಮೊದಲಾದ ಐದು ಸಂಚಿಕೆಗಳು ಪ್ರಕಟವಾಗಿದ್ದು, ವೇದಿಕೆಯ ಕವನ ಸರಪಳಿ ಅಭಿಯಾನದಲ್ಲಿ ಭಾಗವಹಿಸಿ 88 ಸದಸ್ಯರು ರಚಿಸಿದ ಕವನಗಳನ್ನೊಳಗೊಂಡ ‘ಸರಸಮ್ಮನಿಗೆ ಸತ್ಕಾರ ಸರಪಳಿಗೆ ನಮಸ್ಕಾರ’ ಎಂಬ ಕೃತಿ, ಇತ್ತೀಚೆಗೆ ಸ್ನೇಹ ಪಬ್ಲಿಕೇಷನ್ ಪ್ರಕಟಿಸಿದ ವೇದಿಕೆಯ 27 ಜನ ಸದಸ್ಯರಿಂದ ರಚಿತವಾದ ‘ಪಲ್ಲಟ’ ಖೋ ಕಾದಂಬರಿ ಹಾಗೂ ಸಮನ್ವಯ ಸಮಿತಿಯ ಮನವಿಯ ಮೇರೆಗೆ ಪ್ರಾಚಾರ್ಯ ಎಚ್.ಎಸ್.ಕೃಷ್ಣಸ್ವಾಮಿ ಅಯ್ಯಂಗಾರ್ ಅವರ ಜೀವನ ಸಾಧನೆಯನ್ನು ಕುರಿತಂತೆ ಡಾ ಪ್ರದಾನ್ ಗುರುದತ್ತರವರು ಬರೆದ ಹಾಗೂ ಸಪ್ನಾ ಬುಕ್ ಹೌಸ್ ಪ್ರಕಟಿಸಿದ ‘ಎಚ್ಚೆಸ್ಕೆ ಬದುಕು ಬರಹ’ ಎಂಬ ಸುಮಾರು ಐನೂರು ಪುಟಗಳ ಬೃಹತ್ ಗ್ರಂಥದ ಬಗ್ಗೆ ಶ್ರೀ ರವೀಂದ್ರ ಅವರು ಮಾಹಿತಿ ನೀಡಿದರು.



ಇದೀಗ ಸಣ್ಣ ಕತೆಗಳ ರಚನೆಗೆ ಪ್ರೋತ್ಸಾಹ ನೀಡುವ ಉದ್ದೇಶದಿಂದ ವೇದಿಕೆಯು ಬರುವ ಶ್ರಾವಣ ಮಾಸದಲ್ಲಿ ಅಂದರೆ ಆಗಸ್ಟ್ 17ರಿಂದ ಸೆಪ್ಟೆಂಬರ್ 14ರವರೆಗೆ ‘ಸಣ್ಣ ಕಥೆಗಳ ಶ್ರಾವಣ’ ಎಂಬ ಅಭಿಯಾನವನ್ನು ನಡೆಸಲು ಉದ್ದೇಶಿಸಿದ್ದು, ಈ ಅಭಿಯಾನದಲ್ಲಿ ನಮ್ಮ ವೇದಿಕೆಯ ಸದಸ್ಯರಿಂದ ಕನಿಷ್ಠ ಒಂದು ನೂರು ಹೊಸ ಸ್ವರಚಿತ ಸಣ್ಣ ಕತೆಗಳನ್ನು ನಿರೀಕ್ಷಿಸಲಾಗಿದೆ. ಇದಕ್ಕೆ ಪೂರ್ವಭಾವಿಯಾಗಿ ಈ ಸಣ್ಣ ಕಥಾ ಶಿಬಿರವನ್ನು ಹಮ್ಮಿಕೊಳ್ಳಲಾಗಿದೆ ಎಂದೂ ರವೀಂದ್ರ ಹೇಳಿದರು.



ಶಿಬಿರದ ನಿರ್ದೇಶಕರಾದ ಶ್ರೀ ಶಶಿಧರ ಹಾಲಾಡಿಯವರು ಮಾತನಾಡಿ ಸಣ್ಣ ಕಥಾ ಶ್ರಾವಣ ಅಭಿಯಾನಕ್ಕೆ ಪೂರಕವಾಗಿ, ಸದಸ್ಯರಲ್ಲಿ ಹೆಚ್ಚಿನ ಹುಮ್ಮಸ್ಸು, ಸ್ಫೂರ್ತಿ ಹಾಗೂ ಮಾರ್ಗದರ್ಶನ ತುಂಬುವ ಉದ್ದೇಶದಿಂದ ಈ ಸಣ್ಣಕಥಾ ಶಿಬಿರವನ್ನು ಏರ್ಪಡಿಸಲಾಗಿದೆ. ಸಣ್ಣ ಕತೆ ಎಂದರೆ ಮೊದಲು ನೆನಪಿಗೆ ಬರುವುದು ಮಾಸ್ತಿ ಯವರು. ಸಣ್ಣ ಕತೆಯ ಸ್ವರೂಪದ ಬಗ್ಗೆ ನಾನಾ ರೀತಿಯ ವ್ಯಾಖ್ಯಾನಗಳಿವೆ. ಮಾಸ್ತಿ, ನಿರಂಜನ, ಆನಂದರಿಂದ ಹಿಡಿದು ಸಣ್ಣ ಕಥಾ ರಚನೆಯ ಸ್ವರೂಪ ವಿವಿಧ ರೀತಿಯಲ್ಲಿ ಬದಲಾಗುತ್ತ ಬಂದಿದೆ. ಇತ್ತೀಚೆಗೆ ದಾದಾಪೀರ್ ಜೈಮುನ್ ಮುಂತಾದವರು ವಿಭಿನ್ನವಾಗಿ ಬರೆಯುವುದನ್ನು ಕಾಣಬಹುದು. ಪ್ರಜಾವಾಣಿ ಕಥಾ ಸ್ಪರ್ಧೆಯ ಬಹುಮಾನಿತ ಕಥೆಗಳನ್ನು ಓದಿದರೆ ವೈವಿಧ್ಯಮಯವಾದ ಕಥಾರಚನೆಗಳ ಪರಿಚಯ ಸಾಧ್ಯ. ಬಹುತೇಕ ಖ್ಯಾತ ಕತೆಗಾರರು ಪ್ರಜಾವಾಣಿ ಕಥಾ ಸ್ಪರ್ಧೆಗಳಲ್ಲಿ ಈ ಮೊದಲು ಭಾಗವಹಿಸಿದವರೇ ಆಗಿದ್ದಾರೆ.

ಇತ್ತೀಚೆಗೆ, ಸಣ್ಣ ಕಥೆಗಳಿಗೆ ಕಾರ್ಪೋರೇಟ್ ಸ್ವರೂಪ ಕೊಡಬಹುದೇ ಎಂಬ ಚಿಂತನೆ ನಡೆದಿದೆ. ಕಥಾ ಸ್ಪರ್ಧೆಗಳಿಗೆ ಲಕ್ಷಗಟ್ಟಲೆ ಬಹುಮಾನ ನೀಡುತ್ತಿರುವುದು ಸ್ವಾಗತಾರ್ಹ ಬೆಳವಣಿಗೆಯಾದರೂ ಬಹುಮಾನದ ಮೊತ್ತ ಅಧಿಕವಾದಾಗ ನಾನಾ ಕಾರಣದಿಂದ ಉತ್ತಮ ಕತೆಗೆ ಬಹುಮಾನ ಬಾರದೇಹೋಗುವ ಅಪಾಯವಿದೆ ಎಂಬುದು ಕೆಲವರ ಅಭಿಪ್ರಾಯ ಎಂದ ಶ್ರೀ ಶಶಿಧರ ಹಾಲಾಡಿಯವರು, ಕಥಾ ಶಿಬರದ ಸಂಪನ್ಮೂಲ ವ್ಯಕ್ತಿಗಳ ಸಂಕ್ಷಿಪ್ತ ಪರಿಚಯ ನೀಡಿ ಕಾರ್ಯಕ್ರಮಕ್ಕೆ ಚಾಲನೆ ನೀಡಿದರು.



ಸಂಪನ್ಮೂಲ ವ್ಯಕ್ತಿಗಳ ಅನಿಸಿಕೆಗಳು

1. ಶ್ರೀ ಎನ್.ಎಸ್. ಶ್ರೀಧರ ಮೂರ್ತಿ:



ಮೊದಲನೆಯ ಅಧಿವೇಶನದಲ್ಲಿ ಮಾತನಾಡಿದ ಖ್ಯಾತ ವಿಮರ್ಶಕರಾದ ಶ್ರೀ ಎನ್. ಎಸ್. ಶ್ರೀಧರ ಮೂರ್ತಿಯವರು ಕಥೆ ಎಂದರೆ ಹೇಗಿರಬೇಕು ಎಂದು ಹೇಳಲು ಬರದೇ ಇರುವುದೇ ಕಥೆ. ದೇವರು ಏನೆಂದು ಹೇಳಲು ಬರುವುದಿದ್ದರೆ ದೇವರು ಏಕೆ ಆಗುತ್ತಿದ್ದ ಎಂದು ಯಾಜ್ಞವಲ್ಕ ಹೇಳಿದ ಹಾಗೆ ಕಥೆ ಅಂದರೆ ಹೀಗೆಯೇ ಎಂದು ಹೇಳಲು ಬರುವುದಿಲ್ಲ. ಸುಮಾರು 12 ವರ್ಷಗಳ ಕಾಲ ಕಥೆಗಳೇ ಪ್ರಧಾನವಾಗಿದ್ದ 'ಮಲ್ಲಿಗೆ' ಮಾಸಪತ್ರಿಕೆಯ ಸಂಪಾದಕನಾಗಿದ್ದಾಗ ಪ್ರತಿ ತಿಂಗಳು ಬರುತ್ತಿದ್ದ ಸುಮಾರು 300ರಿಂದ 600 ಕಥೆಗಳನ್ನು ಓದುತ್ತಿದ್ದೆ. ಅನೇಕರ ಕಥೆಗಳನ್ನು ತಿದ್ದಿದ್ದೂ ಇದೆ. ಆವರಲ್ಲಿ ಕೆಲವರು ಇಂದು ಖ್ಯಾತನಾಮ ಲೇಖಕರಾಗಿದ್ದಾರೆ. ನನ್ನ ದೊಡ್ಡಪ್ಪ ಎನ್.ಎಸ್. ಚಿದಂಬರರಾವ್ ಕತೆಯನ್ನು ಮೊದಲೇ ನಿರ್ಧರಿಸಿ, ಊಟವಾದ ನಂತರ 10 ಪುಟಗಳ ಕಥೆ ಬರೆದು ಮರುದಿನ ಅಂಚೆಗೆ ಹಾಕುತ್ತಿದ್ದರು. ಅವರು ಎಂದೂ ಎರಡನೇ ಸಲ ತಿದ್ದಿ ಬರದಿದ್ದಿಲ್ಲ. ಎಂ.ವ್ಯಾಸರು ಮತ್ತೆ ಮತ್ತೆ ತಿದ್ದಿ, ಓದಿ, ಮತ್ತೆ ತಿದ್ದಿ ಬರೆಯುತ್ತಿದ್ದರು. ಕೆ.ಟಿ.ಗಟ್ಟಿಯವರು ಸಣ್ಣ ಬದಲಾವಣೆಗೂ ಒಪ್ಪುತ್ತಿರಲಿಲ್ಲ ಹೀಗೆ ಮೂರು ವಿಭಿನ್ನ ಕಥೆಗಾರರ ಕಥಾ ರಚನೆ ರೀತಿಯ ಬಗ್ಗೆ ತಿಳಿಸಿಕೊಟ್ಟರು.





ಭಾರತೀಯ ಕಥನ ಕ್ರಮದ ಬಗ್ಗೆ ಎ.ಕೆ.ರಾಮಾನುಜನ್ ಅವರ ಮಾತನ್ನು ತಿಳಿಸುತ್ತ ಭಾರತೀಯ ಕಥನ ಪರಂಪರೆ ಬಹಳ ಹಿರಿದಾದುದು. ಮಹರ್ಷಿಗಳು ವ್ಯಾಸರ ಬಳಿ, ವ್ಯಾಸರು ತನ್ನ ಮಗನಾದ ಶುಕನಿಗೆ, ಶುಕನು ಪರೀಕ್ಷಿತನಿಗೆ ಭಾಗವತದ ಕಥೆ ಹೇಳುತ್ತಾನೆ ಹೀಗೆ ಭಾಗವತ, ಅಷ್ಟಾದಶ ಪುರಾಣ ಮುಂತಾದವು ನಮ್ಮ ಪರಂಪರೆ. ಮಹಾರಾಜರ ಮುಂದೆ ಕಥನ ಶ್ರವಣ ನಡೆಯುವಾಗ ಮಹಾರಾಜರ ಸಂಕೀರ್ತನಗಳನ್ನೂ ಅದರಲ್ಲಿ ಸೇರಿಸಿ ಬಿಡುತ್ತಿದ್ದರು. ನಮ್ಮ ಕಥಾ ಪರಂಪರೆ ಏಕವ್ಯಕ್ತಿ ಕೃತವಲ್ಲ. ಕೇವಲ ಗುರುತಿಸು ವುದಕ್ಕಷ್ಟೇ ಕೆಲವು ಕತೆಗಾರರ ಹೆಸರನ್ನು ಉಲ್ಲೇಖಿಸಿದರೂ, ಅನೇಕರಿಂದ ವಿಭಿನ್ನ ರೀತಿಯ ಕತೆಗಳು ಸೃಷ್ಟಿಯಾಗಿ ನಮ್ಮ ಕಥಾಲೋಕ ಸಮೃದ್ಧಿಯಾಗಿದೆ.

19ನೇ ಶತಮಾನದ ಆರಂಭದಲ್ಲಿ ಇಂಗ್ಲೀಷಿನ ಓದಿಗೆ ತೆರೆದುಕೊಂಡ ನಂತರ ಯುರೋಪಿನ ಸಾಹಿತ್ಯ ನಮಗೆ ಹತ್ತಿರವಾಯಿತು. ಪಂಜೆ ಮಂಗೇಶರಾಯರು ಮೊದಲ ಕಥೆ ಬರೆದರು. ಮಾಸ್ತಿಯವರನ್ನು ಸಣ್ಣಕಥಾ ಪಿತಾಮಹ ಎನ್ನುತ್ತೇವೆ. ಮಾಸ್ತಿಯವರು ಒಂದು ಪರಂಪರೆ ಮತ್ತು ಸಮಕಾಲೀನತೆಯನ್ನು ತಮ್ಮ ಕಥೆಗಳಲ್ಲಿ ತಂದರು. ನಂತರ ಅನೇಕರು ಮಾಸ್ತಿಯವರ ಮಾದರಿಯನ್ನೇ ಅನುಕರಿಸುತ್ತಿದ್ದರು. ತ.ರಾ.ಸು.ರವರ ಪಾತ್ರ ಸೃಷ್ಟಿಯ ಕಲೆ ಅದ್ಭುತ ((೦-೦.=೦), ನಿರಂಜನರ 'ಕೊನೆಯ ಗಿರಾಕಿ' ಕತೆಯು ಸಂವೇದನೆ ಮತ್ತು ಸಾಮಾಜಿಕ ಸಮಸ್ಯೆಯ ದೃಷ್ಟಿಯಿಂದ ಮುಖ್ಯವಾದದ್ದು. ಕೆಲವರು ಭಿನ್ನ ಪ್ರಯೋಗಗಳನ್ನು ಮಾಡಿದರು. ಅದೊಂದು ರೀತಿಯ ಪ್ರಯೋಗದ ಕಾಲ. ಪ್ರಗತಿಶೀಲ ಚಳುವಳಿಯ ಬರಹಗಾರರು ಹೆಚ್ಚಾಗಿ ಕಾದಂಬರಿಯಲ್ಲಿ ತೊಡಗಿಕೊಂಡರು .

1960ರ ದಶಕ ಸಣ್ಣ ಕಥೆಗಳ ಸಮೃದ್ಧಿಯ ಕಾಲ .ಸ್ವಾತಂತ್ರ್ಯ ಬಂದ ನಂತರ ಶಿಕ್ಷಣ ಪದ್ಧತಿಯ ಯಶಸ್ಸಿನಿಂದಾಗಿ ದೊಡ್ಡ ಓದುಗರ ಸಂಖ್ಯೆ ಸೃಷ್ಟಿಯಾಯಿತು. ಯುರೋಪ್ ಮಾತ್ರವಲ್ಲದೆ ಬೇರೆ ಭಾಗಗಳ ಸಾಹಿತ್ಯದ ಓದು ಕೂಡ ದಕ್ಕಿತು. ವಿ.ಕೃ. ಗೋಕಾಕತಂತಹವರು ಅಮೆರಿಕದಲ್ಲಿ ಓದಿಕೊಂಡು ಬಂದರು.



60ರ ದಶಕದ ಮುಖ್ಯ ಕಥೆಗಾರರನ್ನು ಯಾವುದೇ ಮಾನದಂಡದಿಂದ ಪರಿಶೀಲಿಸಿದರೂ ಚಿತ್ತಾಲರನ್ನು ಮುಖ್ಯ ಕಥೆಗಾರರೆಂದು ಪರಿಗಣಿಸಬಹುದು, ಚಿತ್ತಾಲರ ಕಥನಕ್ರಮ ವಿಭಿನ್ನ. ಕಥನದ ವ್ಯಾಮೋಹ ಎಂದರೆ ಮುಂದೆ ಏನಾಯಿತು ಎನ್ನುವುದಕ್ಕಿಂತ ಇಷ್ಟು ಹೊತ್ತು ಏನಾಯಿತು ಎಂಬುದೇ ಕಥೆ. ಹೀಗೆ ಚಿತ್ತಾಲದ ಕಥೆ ವಿಭಿನ್ನವಾದ ಮನೋಭೂಮಿಕೆಯನ್ನು ಕಲ್ಪಿಸುತ್ತದೆ ಉದಾಹರಣೆಗೆ 'ಕಥೆಯಾದಳು ಹುಡುಗಿ' ಮತ್ತು 'ಶಿಕಾರಿ'ಯಲ್ಲಿ ವಿಭಿನ್ನ ಕಥನ ಕ್ರಮವನ್ನು ಗಮನಿಸಬಹುದು. ಚಿತ್ತಾಲರು ಬರೆಯುವ ಮಾದರಿಯನ್ನು ಅನೇಕರು ಅನುಕರಿಸಲು ಪ್ರಯತ್ನಿಸಿದರೂ ಸಿದ್ಧಿಸಲಿಲ್ಲ. ಚಿತ್ತಾಲರು ಮಾಸ್ತಿಯವರ ನಂತರ ಬಹಳ ಮುಖ್ಯವಾದ ಕಥೆಗಾರರು.

ಪೂರ್ಣಚಂದ್ರ ತೇಜಸ್ವಿಯವರು ಒಂದು ರೀತಿಯಲ್ಲಿ ಬಹುಮುಖ ಪ್ರತಿಭೆ. 'ತಬರನ ಕತೆ'ಯ ಕ್ರೌರ್ಯ ತಬರನ ಒಳಗೋ ಹೊರಗೋ ಎಂಬುದು ಸುಂದರ ಮೀಮಾಂಸೆ. ಇದನ್ನು ಚಲನಚಿತ್ರ ಮಾಡಲು ಬಂದ ಗಿರೀಶ್ ಕಾಸರವಳ್ಳಿಯವರಿಗೆ ತೇಜಸ್ವಿಯವರು, 'ಯಾವ ಕ್ಯಾಮರದಲ್ಲೂ ನೀವು ತಬರನನ್ನು ಹಿಡಿಯಲಾರಿರಿ' ಎಂದರಂತೆ. ತೇಜಸ್ವಿಯವರ ಕಥೆಯ ದೃಷ್ಯಾತ್ಮಕ ಸಾಧ್ಯತೆಯನ್ನು ಕ್ಯಾಮರದಲ್ಲಿ ಸೆರೆಹಿಡಿಯಲಾಗದೆಂಬುದೇ ಕಥೆಯ ವಿಶಿಷ್ಟತೆ.

ಯು.ಆರ್. ಅನಂತಮೂರ್ತಿಯವರ ಕಥೆಗಳಲ್ಲಿ ಪಾಶ್ಚಾತ್ಯ ಬರವಣಿಗೆಯ ಸಂವೇದನಾತ್ಮಕತೆ, ಮೌಲ್ಯದ ಚರ್ಚೆ ಕಾಣಬಹುದು. 'ಪ್ರಶ್ನೆಗಳು' ಇವರ ಬಹು ಮುಖ್ಯವಾದ ಕಥೆ. 'ಸೂರ್ಯನ ಕುದುರೆ' ಕಥನಕ್ರಮದ ವಿಸ್ತಾರತೆಯ ದೃಷ್ಟಿಯಿಂದ ಬಹು ದೊಡ್ಡ ಕೊಡುಗೆ.



ಅನೇಕರು ನವ್ಯ ಸಾಹಿತ್ಯದಲ್ಲಿ ಕಥನ ಕ್ರಮಕ್ಕೆ, ಕಥನ ಪ್ರಪಂಚಕ್ಕೆ ಉತ್ತಮ ಕೊಡುಗೆ ನೀಡಿದ್ದಾರೆ. ರಾಮಚಂದ್ರ ಶರ್ಮ ಅವರು ಮನೋವಿಜ್ಞಾನದ ಸಾಧ್ಯತೆಗಳ ಬಗ್ಗೆ ಉತ್ತಮ ಕಥೆಗಳನ್ನು ಬರೆದರೆ, ನವ್ಯ ಸಾಹಿತ್ಯದ ಸದಾಶಿವ ಅವರು ಕೂಡ ವಿಸ್ತಾರವಾದ ಕಥನ ಪ್ರಪಂಚವನ್ನು ತೆರೆದಿಟ್ಟರು. ಇದೇ ಸಂದರ್ಭದಲ್ಲಿ ವ್ಯಾಪಕವಾಗಿ ಪತ್ರಿಕೆಗಳು ಹುಟ್ಟಿಕೊಂಡ ಪರಿಣಾಮವಾಗಿ ಅನೇಕ ಕಥೆಗಾರರು ಸಹಾ ಸೃಷ್ಟಿಯಾದರು. ಹಲವರು ಗಂಭೀರ ಚರ್ಚೆಗೊಳಗಾಗದ ನತದೃಷ್ಟರಾದರೂ ಕಥನ ಪರಂಪರೆಗೆ ದೊಡ್ಡ ಕೊಡುಗೆ ನೀಡಿದರು.

ನಾ.ಡಿಸೋಜರ ಕತೆಗಳಲ್ಲಿ ಸೂಕ್ಷ್ಮವಾದ ಮನದಾಳದ ನೋವು, ಸಂಬಂಧಗಳ ಸಂಘರ್ಷ ಕಾಣಬಹುದು. ಕೆ.ಟಿ.ಗಟ್ಟಿ, ಕುಂ.ವೀರಭದ್ರಪ್ಪ, ದೊಡ್ಡೇರಿ ವೆಂಕಟಗಿರಿರಾವ್ ಮುಂತಾದ ಹಲವು ಕಥೆಗಾರರು ಉತ್ತಮ ಕೊಡುಗೆ ನೀಡಿದ್ದಾರೆ. ದೊಡ್ಡೇರಿ ವೆಂಕಟಗಿರಿರಾವ್‌ರವರನ್ನು 'ಸುಧಾ'ಧಲ್ಲಿ ಧಾರಾವಾಹಿಯಾಗಿ ಬಂದ 'ಸಂಪ್ರದಾನ' ಕಾದಂಬರಿಯನ್ನು ಮರುಪ್ರಕಟಣೆಗಾಗಿ ಕೇಳಿದಾಗ ನನಗೆ ಇನ್ನೂ ಬರೆಯುವ ಶಕ್ತಿ ಇದೆ ಎಂದು ತಮ್ಮ 92ನೇ ವಯಸ್ಸಿನಲ್ಲಿ 'ಹೆತ್ತೊಡಲು' ಎಂಬ ಮತ್ತೊಂದು ಕಾದಂಬರಿಯನ್ನು ಬರೆದು ಕೊಟ್ಟಿದ್ದನ್ನು ಶ್ರೀಧರ ಮೂರ್ತಿಯವರು ಸ್ಮರಿಸಿದರು.

ಕೆ.ವಿ.ತಿರುಮಲೇಶ್ ಅವರು ಕಡಿಮೆ ಸಂಖ್ಯೆಯ ಕತೆಗಳನ್ನು ಬರೆದರೂ ಮುಖ್ಯವಾದ ಕಥೆಗಾರರೆಂದು ಗುರುತಿಸಲ್ಪಟ್ಟಿದ್ದಾರೆ. ಭಿನ್ನವಾದ ಕಥೆಗಳನ್ನು ಬರೆದ ಇವರ ಅನೇಕ ಕಥೆಗಳಲ್ಲಿ ನಾಯಕನಿಗೆ ಹೆಸರೂ ಇಲ್ಲ. ಇನ್ನು ಚದುರಂಗ, ರಾಮಚಂದ್ರ ಶರ್ಮ, ದೇವನೂರು ಮಹದೇವ, ಬರಗೂರು ರಾಮಚಂದ್ರಪ್ಪ, ಮಹಿಳಾ ಲೇಖಕಿಯರಾದ ತ್ರಿವೇಣಿ, ವೀಣಾ ಯಲಬುರ್ಗಿ ಅವರ ಕಥೆಗಳು ಗಮನ ಸೆಳೆಯುತ್ತವೆ. ವೈದೇಹಿ ಅವರದು ಭಿನ್ನವಾಗಿ ನಿಲ್ಲುವ ಒಂದು ಕಥಾ ಶೈಲಿ. ಜಯಂತ ಕಾಯ್ಕಿಣಿ, ವಿವೇಕ ಶಾನುಭಾಗ, ನಾಗರಾಜ, ವಸುಧೇಂದ್ರ ಮುಂತಾದವರೂ ಭಿನ್ನವಾಗಿ ಬರೆಯುತ್ತಿದ್ದಾರೆ.

ಫ್ಯಾಂಟಸಿಯನ್ನು ನಾವು ನೋಡುವುದಕ್ಕೂ ಪಾಶ್ಚ್ಯಾತ್ಯರು ನೋಡುವುದಕ್ಕೂ ವ್ಯತ್ಯಾಸವಿದೆ. ಜಿಂಕೆಯೊಂದಿಗೆ ಶಕುಂತಲೆ ಮಾತನಾಡುವುದು ಭಾರತೀಯ ಪರಂಪರೆಯಲ್ಲಿ ಫ್ಯಾಂಟಸಿ ಅಲ್ಲ. ಎಂ.ಎಸ್.ಕೆ.ಪ್ರಭು ಅವರು ಫ್ಯಾಂಟಸಿ ಕಥೆಗಳನ್ನು ಬರೆದರು.

ಕಥೆ ಅಂದರೆ ವಸ್ತು ಮಾತ್ರವಲ್ಲ. ವಸ್ತು ಕೂಡ ಕಥೆಯ ಒಂದು ಭಾಗ. ನಿರೂಪಣಾ ಕ್ರಮ ಮುಖ್ಯವಾದ ಅಂಶ. ಕಥೆಯಲ್ಲಿ ಪಾತ್ರಗಳ ನಡುವೆ ಸಂಘರ್ಷ ಮತ್ತು ಪಾತ್ರಗಳ ಬೆಳವಣಿಗೆ ಅಗತ್ಯ. ಕಥನಶಿಲ್ಪದಲ್ಲಿ ಪ್ರತಿ ಇಟ್ಟಿಗೆಯೂ ಮುಖ್ಯ. ಗಟ್ಟಿಯಾದ ಕತೆಯಲ್ಲಿ ಪಾತ್ರದ ಒಂದು ಸಂಭಾಷಣೆ ಕೂಡಾ ಮುಖ್ಯವಾಗುತ್ತದೆ .

ಬರಹಗಾರನು ಭಾಷೆಯ ಬಗ್ಗೆ ಬಹಳ ಮುಖ್ಯವಾಗಿ ಗಮನಹರಿಸಬೇಕು. ತನ್ನ ಮನಸ್ಸಿನ ಭಾವನೆಗಳನ್ನು ಓದುಗನಲ್ಲಿ ಸಮರ್ಥವಾಗಿ ಮೂಡಿಸುವ ಹಾಗೆ ಬರೆಯಬೇಕು. ಕಥೆ ಅನ್ನುವುದು ಒಂದು ಸ್ವಕೀಯ, ಪರಕೀಯ ಅನುಭವ. ಅನುಭವ ಕೇವಲ ಘಟನೆಯಲ್ಲ. ನಮ್ಮ ಅನುಭವ ಮತ್ತು ಗ್ರಹಿಕೆಗೆ ಮಿತಿ ಇರುತ್ತದೆ. ಅದು ಸಾರ್ವತ್ರಿಕವಾಗುವುದಿಲ್ಲ. ಕಥೆಗೆ ಉತ್ತಮ ನಿರೂಪಣಾ ತಂತ್ರವನ್ನು ನಾವೇ ಹುಡುಕಿಕೊಳ್ಳಬೇಕು. ಕಥೆಯ ಆರಂಭ ಮಾಡುವುದು ಎಷ್ಟು ಮುಖ್ಯವೋ, ಕೊನೆಯವರೆಗೂ ಅದನ್ನು ನಿಭಾಯಿಸುವುದು ಸಹ ಬಹಳ ಮುಖ್ಯ ಕೇವಲ ಸಿದ್ಧಾಂತ ಹೇಳುವುದು ಕಥೆಯಲ್ಲ ಎಂದು ವಿವಿಧ ಲೇಖಕರ ವಿಭಿನ್ನ ರೀತಿಯ ಸಣ್ಣ ಕತೆಗಳು, ಕಾಲಘಟ್ಟ, ಕಥಾ ವಸ್ತು ಮತ್ತು ಶೈಲಿಯ ಬಗ್ಗೆ ಸವಿವರವಾಗಿ ಮಾತನಾಡಿದ ಶ್ರೀಧರಮೂರ್ತಿಯವರು ನಂತರ ನಡೆದ ಸಂವಾದ ಕಾರ್ಯಕ್ರಮದಲ್ಲಿ ಕೇಳುಗರ ಪ್ರಶ್ನೆಗಳಿಗೆ ಉತ್ತರಿಸಿದರು

2. ಶ್ರೀ ವಾಸುದೇವ ನಾಡಿಗ್:



ಎರಡನೆಯ ಅಧಿವೇಶನದಲ್ಲಿ, ಸಂಪನ್ಮೂಲ ವ್ಯಕ್ತಿಯಾಗಿ ಭಾಗವಹಿಸಿದ್ದ ಕವಿ, ಕತೆಗಾರ, ಲೇಖಕ ಶ್ರೀ ವಾಸುದೇವ ನಾಡಿಗ್ ಅವರು ಮಾತನಾಡುತ್ತಾ ಕವಿಯಾಗಿ ಭಾವನಾತ್ಮಕವಾಗಿ ನಾನು ಲೋಕ ವನ್ನು ನೋಡುವೆ. ಓರ್ವ ಲೇಖಕನಿಗೆ ಬಾವುಕತೆ ಬಹಳ ಮುಖ್ಯ ಎಂದರು. 'ಶಿಕಾರಿ' ಮೂಲಕ ಯಶವಂತ ಚಿತ್ತಾಲರು, 'ಗ್ರಸ್ತ'ನ ಮೂಲಕ ದೇವನೂರು ಮಹದೇವ ಅವರು ಬದುಕನ್ನು ನೋಡುವ ರೀತಿ, ಪಾತ್ರ ಒಂದು ತಾವೇ ಆಗುವ ಬಗೆ ವಿಭಿನ್ನ. ಕಥೆಯಲ್ಲಿ ಪಾತ್ರಗಳ ಅಂತರಂಗ

ಮಾತನಾಡಬೇಕು. ಕಥೆಯು ಹೇಗಿರಬೇಕು ಎಂದರೆ ಕಥೆಯೊಳಗಿನ ಪಾತ್ರ ನಿಮ್ಮನ್ನು ಪ್ರೇಮಿಸಬೇಕು. ಕಲಕುವ ಪಾತ್ರ ಕೊಡಬೇಕು ಕಾಡುವ ಗುಣ ಇರಬೇಕು. ಇದಕ್ಕೆ ಸಮರ್ಥ ಭಾಷೆ ಮುಖ್ಯ. ಮಗುವಿಗೆ ಕೊಡಬಹುದಾದ ನುಣ್ಣನೆಯ ಕೊಡುಗೆ ಭಾಷೆ. ಕಥೆಯೂ ಅಂತರಂಗದಿಂದ ಹುಟ್ಟಿದ ಮಗು. ಭಾಷೆ ಪಾರದರ್ಶಕವಾಗಿರಬೇಕು.



ಸಾಹಿತ್ಯದಲ್ಲಿ ಪಾರದರ್ಶಕತೆ ಮುಖ್ಯ. ಅನುಕಂಪದಿಂದ ಹುಟ್ಟಿದ ಸಂಬಂಧಗಳು ಭಿಕ್ಷೆಯೇ ಹೊರತು ಬಾಂಧವ್ಯವಲ್ಲ. ಲೋಕವನ್ನು ವಾಸ್ತವವಾಗಿ ನೋಡಿದಾಗ ಅನೇಕ ಅಹಿತಕರ ಸಂಗತಿಗಳು ಕಾಣುತ್ತವೆ. ಭಾವನಾತ್ಮಕವಾಗಿ ನೋಡಿದಾಗ ಅವು ಮರೆಯಾಗುತ್ತವೆ. ಮುಳ್ಳುಗಳು ಅರಿವಿಗೆ ಮೂಡುವುದಿಲ್ಲ. ಕಥೆಯಲ್ಲಿ ಪರಿಸರಕ್ಕೂ ಮಹತ್ವವಿದೆ. ಪರಿಸರವು ಪಾತ್ರಗಳನ್ನು ಜೀವಂತಗೊಳಿಸುವ ಶಕ್ತಿ ಎನ್ನಬಹುದು.

ತನ್ನ ಅನನ್ಯತೆಗಾಗಿ ಬರೆಯಬೇಕೆಂಬ ಹಪಾಹಪಿ ಲೇಖಕನಿಗೆ ಇರುತ್ತದೆ. ಕಥೆಯಿಂದ ಕಥೆಗಾರ ತನ್ನದೇ ಶೈಲಿ ಮತ್ತು ತಂತ್ರಗಳಿಂದ ಗುರುತಿಸಿಕೊಳ್ಳುತ್ತಾನೆ. ಕಥೆ ಬರೆಯುವಾಗ ವರ್ತಮಾನದಲ್ಲಿ ಮುಳುಗಿ ಭೂತವನ್ನು ಎಬ್ಬಿಸಬೇಕು. ನೆನಪುಗಳನ್ನು ಆಳಬೇಕು. ಲೇಖಕ ಕಥೆಯನ್ನು ಹೊಸೆಯಬಾರದು, ಕಥೆಯು ಲೇಖಕನನ್ನು ಹೊಸೆಯಬೇಕು. ಕಥೆ ಅನ್ನುವುದು ತನ್ನ ವಿವೇಕ ಮತ್ತು ಅನುಭವವನ್ನು ದಾಟಿಸುವ ಪ್ರಕ್ರಿಯೆ. ನಮ್ಮ ಆಲೋಚನೆಯ ದಿಕ್ಕನ್ನು ಬದಲಾಯಿಸಿ ಜಗತ್ತನ್ನು ನೋಡುವ ದೃಷ್ಟಿಯನ್ನು ಬದಲಾಯಿಸುವುದು.

ಹೀಗೆ ಕತೆಗಾರನ ಬದ್ಧತೆ, ಅನನ್ಯತೆ, ಕಥಾ ವಸ್ತು, ಶೈಲಿ, ತಂತ್ರ ಮುಂತಾದುವುಗಳ ಬಗ್ಗೆ ಸಮಗ್ರವಾಗಿ ಮಾತನಾಡಿದ ವಾಸುದೇವ ನಾಡಿಗ್ ಅವರು, ಅನೇಕ ಯಶಸ್ವಿ ಸಣ್ಣ ಕತೆಗಳನ್ನು ಹೆಸರಿಸಿದರು. ಅವುಗಳಲ್ಲಿ ಒಂದು ಕುಗ್ರಾಮಕ್ಕೆ 'ಡಾಂಬರು ಬಂದುದು' (ದೇವನೂರ ಮಹದೇವ), 'ಒಂದು ಡೈರಿಯ ಪರಿಮಳ' (ವಾಸುದೇವ ನಾಡಿಗ್), 'ಕ್ಲಿಪ್ ಜಾಯಿಂಟ್' (ಯು.ಆರ್. ಅನಂತಮೂರ್ತಿ), 'ಅಬಚೂರಿನ ಪೋಸ್ಟಾಫೀಸು' ಅಲ್ಲ — 'ಅಂಗ ಬಂದ' (ಪೂರ್ಣಚಂದ್ರ ತೇಜಸ್ವಿ), 'ಕಲ್ಲು ಕರಗುವ ಸಮಯ', 'ಟಾಲ್ ಸ್ಟಾಯ್' (ಪಿ ಲಂಕೇಶ್), ಸಣ್ಣ ಕಥಾ ಸಂಕಲನ ಗಳಾದ 'ಹೊನ್ನ ಕಣಜ' (ಪ್ರಜಾವಾಣಿ). 'ಕಥಾ ಜಗತ್ತು' (ನೊಬೆಲ್ ಪ್ರಶಸ್ತಿ ವಿಜೇತ ಕಥೆಗಳು), 'ನಾ ಮೆಚ್ಚಿದ ಸಣ್ಣಕಥೆ'(ಸ.ರಘುನಾಥ), 'ಸಮಾಜ ಶಾಸ್ತ್ರದ ಒತ್ತಡ ಗಳು' (ವೈದೇಹಿ), 'ಬುಗುರಿ' (ಮೊಗಳ್ಳಿ ಗಣೇಶ್), 'ತಬ್ಬಲಿಗಳು' (ರಾಘವೇಂದ್ರ ಖಾಸನೀಸ) ಹಾಗೂ



ಯಶವಂತ ಚಿತ್ತಾಲ, ಸತ್ಯಕಾಮ, ದೇವುಡು ನರಸಿಂಹ ಶಾಸ್ತ್ರಿ ಮೊದಲಾದವರ ಹಲವು ಕಥೆಗಳನ್ನು ಕಥಾ ಸ್ವರೂಪ, ಭಾಷೆಯ ಬಳಕೆ, ತಂತ್ರಗಳ ಕುರಿತಂತೆ ಉದಾಹರಿಸಿದರು. ನಂತರ ಶ್ರೀ ವಾಸುದೇವ ನಾಡಿಗ್ ಅವರೊಂದಿಗೆ ಶಿಬಿರಾರ್ಥಿಗಳಿಂದ ಸಂವಾದ ಕಾರ್ಯಕ್ರಮ ನಡೆಯಿತು.

೩. ಶ್ರೀ ಸಂತೋಷಕುಮಾರ್ ಮಹೆಂದೆಳೆ:

ಸಣ್ಣ ಕಥಾ ಶಿಬಿರದ ಮಧ್ಯಾಹ್ನದ ಹಾಗೂ ಮೂರನೆಯ ಅಧಿವೇಶನವನ್ನು ಖ್ಯಾತ ಸಾಹಿತಿ ಶ್ರೀ ಸಂತೋಷ ಕುಮಾರ ಮಹೆಂದೆಳೆಯವರು ತುಂಬ ಲವಲವಿಕೆಯಿಂದ ಹಾಗೂ ಸಂವಾದಾತ್ಮಕವಾಗಿ ನಡೆಸಿಕೊಟ್ಟರು.



ತಮ್ಮ ಆರಂಭಿಕ ಮಾತುಗಳಲ್ಲಿಯೇ 'ಕಥೆ ಎಂದರೆ ಕಥೆ ಅಷ್ಟೇ, ಜಗತ್ತಿನ ಅತ್ಯಂತ ಸುಂದರವಾದ, ನಂಬಬಹುದಾದ ಸುಳ್ಳು–ಕಥೆ' ಎಂದು ಶಿಬಿರಾರ್ಥಿಗಳಲ್ಲಿ ಕುತೂಹಲ ಹುಟ್ಟಿಸಿದ ಮಹೆಂದೆಳೆಯವರು, ಕಥೆಯಲ್ಲಿ ಕಥೆಗಾರನ ಅನುಭವ ಓದುಗನಿಗೆ ತಲುಪಬೇಕು. ಈ ಕಥೆ ತನ್ನದು ಎಂದು ಅವನಿಗೆ ಅನಿಸಬೇಕು. ಕಥೆಯ ಆರಂಭ ಓದುಗನನ್ನು ಸೆರೆ ಹಿಡಿಯುವಂತಿರಬೇಕು. ಕಥೆಯುದ್ಧಕ್ಕೂ ಅದೇ ಸ್ಥಿರತೆಯನ್ನು ಉಳಿಸಿಕೊಂಡು ಹೋಗುವುದು ಅಗತ್ಯ. ಓದುವಾಗ ಒಂದು ಚಿತ್ರಣ ಮೂಡುತ್ತಿರಬೇಕು. ಅದಕ್ಕಾಗಿ ಕತೆಗಾರನಿಗೆ ಪಾತ್ರವನ್ನು ಕಟ್ಟಿಕೊಡಬಲ್ಲ ನಿರೂಪಣೆಯ ಹಿಡಿತ ಅಗತ್ಯ. ಬಳಸುವ ಭಾಷೆ ಅದೇ ಆದರೂ ಬಳಸುವ ಶಬ್ದ, ನಿರೂಪಣಾ ವಿಧಾನದಿಂದ ಕಥೆ ವಿಭಿನ್ನವಾಗಿ ಮೂಡಬಲ್ಲದು. ಯಾವುದೇ ಕಥೆಗೆ ಉತ್ತಮ ಶೀರ್ಷಿಕೆ ಮುಖ್ಯ. ಕಥೆ ಬರೆಯುವ ಮುನ್ನವೇ ಶೀರ್ಷಿಕೆ ಹೊಳೆದರೆ ಕತೆಗಾರ ಅರ್ಧ ಯಶಸ್ವಿಯಾದಂತೆ! ಆದ್ದರಿಂದ ಶೀರ್ಷಿಕೆಗಳು ಹೊಳೆದರೆ ಬರೆದಿಟ್ಟುಕೊಳ್ಳಿ. ಅವಕಾಶ ಸಿಕ್ಕಾಗ ಕಥಾ ಸ್ಪರ್ಧೆಗಳಲ್ಲಿಯೂ ಭಾಗವಹಿಸಿ ಎಂದು ಹೇಳಿದರು.

ಉತ್ತರ ಕನ್ನಡದಲ್ಲಿ ಬಾಲ್ಯವನ್ನು ಕಳೆದ ತಾವು ಆರಂಭದಲ್ಲಿ ವೈಜ್ಞಾನಿಕ ಕಥೆಗಳನ್ನೇ ಬರೆಯುತ್ತಿದ್ದುದಾಗಿ ಹೇಳಿದ ಅವರು, ಒಟ್ಟಾರೆ ಹಲವು ಬಗೆಯ ಕಥೆಗಳಿವೆ, ಪತ್ತೇದಾರಿ, ಕೌಟುಂಬಿಕ, ಸಾಮಾಜಿಕ, ಐತಿಹಾಸಿಕ, ಸಾಂದರ್ಭಿಕ, ವೈಜ್ಞಾನಿಕ, ಇತ್ಯಾದಿ 25ಕ್ಕೂ ಹೆಚ್ಚು ಬಗೆಗಳನ್ನು ಗುರುತಿಸಬಹುದು. ವೈಜ್ಞಾನಿಕ ಕಥೆಗಳಲ್ಲಿ ಫಿಕ್ಷನ್ ಮತ್ತು ಫ್ಯಾಂಟಸಿ ಎಂಬ ಎರಡು ಬಗೆ ಇದೆ. ಫಿಕ್ಷನ್‌ನಲ್ಲಿ ವಿಜ್ಞಾನದ ತಳಹದಿಯಲ್ಲಿ ಸಾಧ್ಯವಾಗಬಹುದಾದ ಕಲ್ಪನೆ ಇರುತ್ತದೆ. ಫ್ಯಾಂಟಸಿಯಲ್ಲಿ ಈ ಸಾಧ್ಯತೆ ಕಡಿಮೆ. ವಿಜ್ಞಾನ ಇತಿಹಾಸದ ಕಲ್ಪನೆಯನ್ನು ಆಧಾರವಾಗಿಟ್ಟುಕೊಂಡೂ ಕಥೆಗಳನ್ನು ಬರೆಯಬಹುದು. ಆದರೆ ಬರಹಗಾರನಿಗೆ ಬದ್ಧತೆ ಬಹಳ ಮುಖ್ಯ. ಹೇಳಬಹುದಾದ ವಿಷಯ, ವಾಕ್ಯ ರಚನೆ, ಭಾಷೆಯ ಬಳಕೆಗೆ ಆತ ಹೊಣೆಗಾರನಾಗುತ್ತಾನೆ. ಕಥೆಯ ಅಂಶಗಳ ಜೊತೆಗೆ ಒಂದು ಇಂಟರ್‌ಲೋಡ್ ಇರಬೇಕು ಎಂದ ಮಹೆಂದೆಳೆಯವರು ತಮ್ಮ 'ತಪ್ಪಿದ ಲೆಕ್ಕ' ಕತೆಯನ್ನು ಉದಾಹರಿಸಿದರು.



ಕಾಲದ ಬದಲಾವಣೆಗೆ ತಕ್ಕಂತೆ ಬರಹಗಾರನು ಬದಲಾಗಬೇಕು. ಅಲ್ಲದೆ, ಕತೆಗೊಂದು ಚೌಕಟ್ಟು ಮುಖ್ಯ. ತಪ್ಪು ಮಾಡಬಾರದೆಂಬ ಎಚ್ಚರಿಕೆ ಬರಹಗಾರನಿಗೆ ಅಗತ್ಯ. ಭಾಷೆಯನ್ನು ಸಮರ್ಥವಾಗಿ ಬಳಸಿಕೊಳ್ಳಬೇಕು. ಕಥೆಯಲ್ಲಿ ಅವಾಸ್ತವಿಕ ಎನಿಸದ, ಕಥೆಗೆ ಪೂರಕವಾದ ತಿರುವುಗಳು ಇರಬೇಕು. ಕಥೆಯಲ್ಲಿ ಬರುವ ಪಾತ್ರಗಳು ಮತ್ತು ಕಥಾವಸ್ತುವಿನ ಜೊತೆಗೆ ಪರಿಸರದ ಸಮನ್ವಯತೆ ಬಹಳ ಮುಖ್ಯ. ಕಥಾ ವಸ್ತುಗಳಲ್ಲಿ ಶೃಂಗಾರ, ಹಾಸ್ಯ, ರೌದ್ರ ಮುಂತಾದ ವೈವಿಧ್ಯತೆ ಇರುತ್ತದೆ. ಶೃಂಗಾರಕ್ಕೂ ಕಾಮಕ್ಕೂ ನಡುವೆ ಸಣ್ಣ ಗೆರೆ ಇದೆ. ಬರಹಗಾರನಿಗೆ ಸಂವೇದನಾಶೀಲತೆ



ಸೋಪಜ್ಞತೆ ಮುಖ್ಯ. ಲೇಖಕನಾದವನು ಸೃಜನಶೀಲತೆಯನ್ನು ಆದಷ್ಟು ದುಡಿಸಿಕೊಳ್ಳಬೇಕು. ಪ್ರತಿಮಾ ರೂಪಕ ಕಥೆಗಳಲ್ಲಿ ಪಾತ್ರಗಳೇ ಇಲ್ಲದೆ ಕಥೆಯನ್ನು ಬರೆಯಬಹುದು. ಯಾವುದೇ ಕಥೆ ಇರಲಿ, ಕಥೆಗಾರನು ಕಥೆ ಬರೆದ ನಂತರ ಕೆಲವು ದಿನ ಬಿಟ್ಟು ಮತ್ತೊಮ್ಮೆ ಓದಿ ಸರಿಪಡಿಸುವುದು ಒಳ್ಳೆಯದು.

ಪಾತ್ರಗಳಿಗೆ ಪೂರೈಸುವ ಹೂರಣ ಮುಖ್ಯವೇ ಹೊರತು ಹೆಸರಲ್ಲ. ಕಥೆಗಾರನು ತನ್ನ ಕಥೆಗಳ ಮೂಲಕ ಸಮಾಜಕ್ಕೆ ಸಂದೇಶ ಕೊಡಬೇಕಾಗಿಲ್ಲ. ಕತೆಗೆ ಉತ್ತಮ ವಿಮರ್ಶೆ ಅಥವಾ ಬಹುಮಾನ ಬಂದಿದೆಯೇ ಎಂಬುದು ಮುಖ್ಯವಲ್ಲ. ಕಥೆಯೊಂದನ್ನು ಸಾವಿರ ಜನ ಓದಿದರೆ ಆತ ಒಳ್ಳೆ ಕಥೆಗಾರನೇ ಸರಿ.

ಕೊರತೆಯಾಗದ ಕಥೆಗಳ ನಿಧಿ ಎಂದರೆ ಅದು ರಾಮಾಯಣ ಮತ್ತು ಮಹಾಭಾರತ. ಇದರಲ್ಲಿನ ಬೇಕಾದ ಪಾತ್ರಕ್ಕೆ ಪುಷ್ಟಿ ಕೊಡಬಹುದು. ರಾಮಾಯಣದಲ್ಲಿ ಶ್ರೀ ರಾಮನು ತಾನು ವಾಲಿಯ ವಧೆ ಮಾಡಿದುದನ್ನು ಸಮರ್ಥಿಸಿಕೊಳ್ಳುವಾಗ 'ಮೃಗವನ್ನು ಮರೆಯಿಂದಲೇ ಕೊಲ್ಲಬೇಕು' ಎಂದು ಹೇಳಿದುದನ್ನು ಸ್ಮರಿಸಿದ ಮಹೆಂದಳೆಯವರು, 'ಮಹಾಪತನ'ದಲ್ಲಿ ತಾವು ಸುಯೋಧನನ ಪಾತ್ರ ಪೋಷಿಸಿದ ಪರಿಯನ್ನು ಉಲ್ಲೇಖಿಸಿದರು.



ತಮ್ಮದೇ ಕೃತಿಗಳಾದ ಸಂಕ, ಚಾಕ್‌ಪೀಸ್, ತಪ್ಪಿದ ಲೆಕ್ಕ, ಕಪ್ಪು ದರ್ಪಣ, ಮಹಾಪತನ, ವೈಜಯಂತಿಪುರ ಅಘೋರಿಗಳ ಲೋಕದಲ್ಲಿ ಮೊದಲಾದ ಕತೆಗಳ ಉದಾಹರಣೆಯನ್ನು ನೀಡುವುದರೊಂದಿಗೆ ಕಥಾವಸ್ತುವಿನ ಆಯ್ಕೆ, ಶೀರ್ಷಿಕೆ, ಆರಂಭಿಕ ಚೌಕಟ್ಟು, ಪಾತ್ರ ಪೋಷಣೆ ಮುಂತಾದ ಅನೇಕ ಅಂಶಗಳನ್ನು ಮನದಟ್ಟು ಮಾಡಿದ ಅವರು, ವೈದ್ಯಕೀಯ ಮತ್ತು ಪ್ರತಿಮಾ ರೂಪದ ಕಥೆಗಳನ್ನು ಹೇಗೆ ಸೃಷ್ಟಿಸಬಹುದು ಎಂಬುದನ್ನು ವಿವರಿಸಿ, ದೇಹದ ಒಂದು ಅಂಗ ಬದಲಾದಂತೆ, ಮೇಜು ಮಾತನಾಡುವಂತೆ ಕುತೂಹಲಕರವಾದ ಕಥೆಗಳನ್ನು ಹೇಗೆ ರಚಿಸಬಹುದು ಎಂಬುದನ್ನು ವಿವರಿಸಿದರು.

ನಂತರ ನಡೆದ ಸಂವಾದ ಕಾರ್ಯಕ್ರಮದಲ್ಲಿ ಶಿಬಿರಾರ್ಥಿಗಳ ಹಲವು ಪ್ರಶ್ನೆಗಳಿಗೆ ಉತ್ತರಿಸಿದ ಸಂತೋಷ ಕುಮಾರ್ ಮಹೆಂದೆಳೆಯವರು, ಸಾಮಾನ್ಯವಾಗಿ ಸಣ್ಣ ಕಥೆಯಲ್ಲಿ ಸುಮಾರು 2000ದಿಂದ 2500 ಪದಗಳು ಇರುತ್ತವೆ. ನೀಳ್ಗತೆ ಬರೆಯುವಾಗ ಬರಹದ ಶೈಲಿಯ ಮೇಲಿನ ಹಿಡಿತ ಚೆನ್ನಾಗಿರಬೇಕಾಗುತ್ತದೆ. ಕತೆ ಬರೆಯುವಾಗ ನಾನು ಎಂದು ಆರಂಭಿಸುವುದು ಸುಲಭವಾದರೂ ಅದು ಒಮ್ಮೊಮ್ಮೆ ಅಪಾಯಕಾರಿ. ಕಥೆಗಾರನಿಗೆ ಎಂತಹ ಕಥೆಗಳನ್ನು ಬರೆಯಬಾರದು ಎಂಬ ಅರಿವು ಇರಬೇಕು. ಕಥೆ ಬರೆಯುವಾಗ ಮಡಿವಂತಿಕೆ ಬಿಡುವುದು ಅಗತ್ಯ. ಸಮಾಜದಲ್ಲಿ ನಡೆಯುತ್ತಿರುವ ಸಂಗತಿಗಳನ್ನು ಚಿತ್ರಿಸುವುದು ತಪ್ಪಲ್ಲ. ಅಗತ್ಯವಿದ್ದಲ್ಲಿ ಇಂಗ್ಲಿಷ್ ಪದಗಳನ್ನು ಬಳಸಬಹುದು ಎಂದು ಹಲವು ಕತೆಗಳನ್ನು ವಿಶ್ಲೇಷಿಸಿ ವಿವರಣೆ ನೀಡಿದರು.

ಕಥಾ ಶಿಬಿರಕ್ಕೆ ಆಗಮಿಸಿದ್ದ ಸ್ನೇಹ ಪಬ್ಲಿಕೇಶನ್‌ನ ಶ್ರೀ ಪರಶಿವಪ್ಪ ಅವರು ಮಾತನಾಡಿ ಕನ್ನಡ ಪುಸ್ತಕಗಳ ಓದುಗರ ಸಂಖ್ಯೆ ಕಡಿಮೆಯಾಗಿಲ್ಲ, ಮೂವತ್ತೈದು ಸಾವಿರಕ್ಕೂ ಹೆಚ್ಚು ಆನ್ಲೈನ್ ಫ್ಲ್ಯಾಟ್‌ಫಾರ್ಮ್‌ಗಳಲ್ಲಿ ಕನ್ನಡ ಪುಸ್ತಕಗಳು ಮಾರಾಟವಾಗುತ್ತಿವೆ ಎಂದು ಹೇಳಿ, ಈ ಶಿಬಿರದಲ್ಲಿ ಶಿಬಿರಾರ್ಥಿಗಳಿಂದ ಉತ್ತಮವಾದ ನೂರಾರು ಕತೆಗಳು ಹೊರಹೊಮ್ಮಲಿ ಎಂದು ಆಶಿಸಿದರು.







ಶಿಬಿರಾರ್ಥಿಗಳ ಪರವಾಗಿ ಡಾ.ಗೋವಿಂದ ಹೆಗಡೆ, ಡಾ.ಶುಭಶ್ರೀ ಪ್ರಸಾದ್ ಹಾಗೂ ಗುರುರಾಜ್ ಶಾಸ್ತ್ರಿ ಅವರು ತಮ್ಮ ಅನಿಸಿಕೆಗಳನ್ನು ವ್ಯಕ್ತಪಡಿಸಿದರು. ಕಾರ್ಯಕ್ರಮದ ಕೊನೆಯಲ್ಲಿ ಶ್ರೀ ಕೆ.ಎನ್.ಮಹಾಬಲ ಅವರು ವಂದನಾರ್ಪಣೆ ಮಾಡಿದರು. ಒಂದು ದಿನವಿಡೀ ನಡೆದ ಸಣ್ಣ ಕಥಾ ಶಿಬಿರದಲ್ಲಿ ಒಟ್ಟು 43 ಜನ ಶಿಬಿರಾರ್ಥಿಗಳು ಭಾಗವಹಿಸಿದ್ದರು. ಎಲ್ಲ ಶಿಬಿರಾರ್ಥಿಗಳಿಗೂ ಶ್ರೀ ಜಿ.ಎಚ್.ನಾಯಕ ಅವರು ಸಂಪಾದಿಸಿರುವ 'ಕನ್ನಡ ಸಣ್ಣಕತೆಗಳು' ಪುಸ್ತಕವನ್ನು ನೀಡಲಾಯಿತು. ಶ್ರೀಮತಿ ಶ್ರವಣಕುಮಾರಿಯವರು ಕಾಫಿ, ತಿಂಡಿ ಹಾಗೂ ಉತ್ತಮ ಊಟದ ವ್ಯವಸ್ಥೆ ಮಾಡಿದರೆ, ಕಾರ್ಯಕ್ರಮದ ಲೆಕ್ಕ ನಿರ್ವಹಣೆ ಮತ್ತು ಶಿಬಿರದ ವ್ಯವಸ್ಥೆಗಳನ್ನು ಶ್ರೀಯುತ ಕೆ.ಎನ್ ಜಯರಾಂ, ರವಿ ಕುಸುಬಿ, ಶ್ರೀರಂಗರಾಜನ್ ಮತ್ತು ಶ್ರೀ ಗುರುರಾಜ ಶಾಸ್ತ್ರಿಯವರು ನಿರ್ವಹಿಸಿದರು.

***

ಸಮನ್ವಯ ಸಮಿತಿ – ಕನ್ನಡವೇ ಸತ್ಯ
ನೋಡಿಯೋ ಸಾಹಿತ್ಯ ದಾಸೋಹ ವೇದಿಕೆ



ವಿಶೇಷ ಉಪನ್ಯಾಸ


"ಎಚ್.ಎಸ್.ವಿ. ಕಾವ್ಯ – ಒಂದು ಸಹೃದಯ ಅನುಸಂಧಾನ"

ಉಪನ್ಯಾಸಕರು: ಡಾ. ರಾ.ಲಕ್ಷ್ಮೀನಾರಾಯಣ

ಕಾರ್ಯಕ್ರಮ ವರದಿ: ಕೆ.ಎನ.ಮಹಾಬಲ

ಖ್ಯಾತ ಕವಿ ಶ್ರೀ ಎಚ್.ಎಸ್. ವೆಂಕಟೇಶ ಮೂರ್ತಿಯವರಿಗೆ ಇತ್ತೀಚೆಗೆ ಎಂಬತ್ತು ವರ್ಷಗಳು ತುಂಬಿದ ಸಂದರ್ಭದಲ್ಲಿ ನೋಡಿಯೋ ಸಾಹಿತ್ಯ ವೇದಿಕೆಯ ಆಶ್ರಯದಲ್ಲಿ 6ನೆಯ ಆಗಸ್ಟ್ 2023ರಂದು ಭಾನುವಾರ ಖ್ಯಾತ ವಿದ್ವಾಂಸರಾದ ಡಾ. ಆರ್. ಲಕ್ಷ್ಮೀನಾರಾಯಣ ಅವರಿಂದ "ಎಚ್.ಎಸ್.ವಿ. ಕಾವ್ಯ – ಒಂದು ಸಹೃದಯ ಅನುಸಂಧಾನ" ಎಂಬ ವಿಷಯದ ಬಗ್ಗೆ ಉಪನ್ಯಾಸ ಕಾರ್ಯಕ್ರಮವನ್ನು ಏರ್ಪಡಿಸಲಾಗಿತ್ತು. ಜಿಮೀಟ್ ತಂತ್ರಜ್ಞಾನದ ಮೂಲಕ ನಡೆದ ಈ ಕಾರ್ಯಕ್ರಮದಲ್ಲಿ ಶ್ರೀ ಎಚ್.ಎಸ್. ವೆಂಕಟೇಶಮೂರ್ತಿಯವರೂ ಭಾಗವಹಿಸಿದ್ದು ವಿಶೇಷವಾಗಿತ್ತು.

ತಮ್ಮ ಉಪನ್ಯಾಸವನ್ನು ಆರಂಭಿಸಿದ ಲಕ್ಷ್ಮೀನಾರಾಯಣ ಅವರು ಮಾತನಾಡಿ, ಕುವೆಂಪು, ಬೇಂದ್ರೆಯವರ ಸಾಲಿನಲ್ಲಿ ನಿಲ್ಲುವಂತಹ ನಮ್ಮ ಕಾಲದ ಬಹು ದೊಡ್ಡ ಕವಿಗಳಲ್ಲಿ ಡಾ.ಎಚ್.ಎಸ್.ವಿ.ಯವರೂ ಒಬ್ಬರು ಎಂದು ಹೇಳಿ, ಅವರು ಕವನ, ಮಹಾಕಾವ್ಯ, ಖಂಡಕಾವ್ಯ, ಮಕ್ಕಳ ಸಾಹಿತ್ಯ, ಕತೆ, ಕಾದಂಬರಿ, ನಾಟಕ, ಅನುವಾದ, ವಿಮರ್ಶೆ, ಅಂಕಣ ಬರಹಗಳು, ಆತ್ಮಕಥೆ, ಹೀಗೆ ಸಾಹಿತ್ಯದ ಎಲ್ಲ ಪ್ರಕಾರಗಳಲ್ಲಿಯೂ ನಿರಂತರವಾಗಿ ತೊಡಗಿಸಿಕೊಂಡಿರುವುದು ಬೆರಗುಗೊಳಿಸುವ ವಿಷಯ. ಅವರು ಹಲವಾರು ಬಗೆಯ ಕಾವ್ಯ ಚಳವಳಿಗಳ ನಡುವೆಯೇ ಕಾವ್ಯವನ್ನು ರಚಿಸುತ್ತ ಬಂದಿದ್ದರೂ, ಮುಕ್ತವಾಗಿ ತಮಗೆ ತೋರಿದಂತಹ ಹಾದಿಯಲ್ಲಿಯೇ ಮುನ್ನಡೆದರು ಎಂದು ತಿಳಿಸಿದರು. ಎಚ್.ಎಸ್.ವಿ. ವಿರಚಿತ ಸಿಂದಬಾದನ ಆತ್ಮಕಥೆ, ಸೌಗಂಧಿಕಾ, ಶ್ರೀರಾಮಚಾರಣ, ಗಂಧವ್ರತ, ಮುಂತಾದ ಕವನಗಳನ್ನು ವಿವರಿಸಿ ಅವರ ಕಾವ್ಯಗಳ ಮಹತ್ವವನ್ನು ತಿಳಿಸಿದರು. ವಸ್ತು, ಸಂವಿಧಾನ, ಛಂದೋಪ್ರಯೋಗ, ಸೌಂದರ್ಯ ಇವುಗಳ ಎಚ್.ಎಸ್.ವಿ.ಯವರ ಕಾವ್ಯಗಳ ವಿಶೇಷ ಎಂದೂ ಡಾ. ಲಕ್ಷ್ಮೀನಾರಾಯಣ ಅವರು ಪ್ರತಿಪಾದಿಸಿದರು.



ಡಾ. ಆರ್. ಲಕ್ಷ್ಮೀನಾರಾಯಣ



02ನೇ ಡಿಸೆಂಬರ್ 1949ರಂದು ಜನಿಸಿದ ಆರ್.ಲಕ್ಷ್ಮೀನಾರಾಯಣ ಅವರು, ಪದವಿ ಕಾಲೇಜು ಶಿಕ್ಷಣ ಇಲಾಖೆಗೆ ಸೇರಿ, 35 ವರ್ಷಗಳ ಕಾಲ ರಾಜ್ಯದ ವಿವಿಧ ಕಾಲೇಜುಗಳಲ್ಲಿ ಪ್ರಾಧ್ಯಾಪಕರಾಗಿ, ಪ್ರಾಂಶುಪಾಲರಾಗಿ ಸೇವೆ ಸಲ್ಲಿಸಿ, 2007ರಲ್ಲಿ ಶಿಕ್ಷಣ ಇಲಾಖೆಯ ಜಂಟಿ ನಿರ್ದೇಶಕರಾಗಿ ನಿವೃತ್ತರಾದರು. ಈ ಹಿಂದೆ ಅವರು ಬೆಂಗಳೂರಿನ ಬಿ.ಎಂ.ಶ್ರೀ. ಪ್ರತಿಷ್ಠಾನದ ಅಧ್ಯಕ್ಷರಾಗಿಯೂ ಕಾರ್ಯನಿರ್ವಹಿಸಿದ್ದರು.

'ವಕ್ರೋಕ್ತಿ ಜೀವಿತ– ಒಂದು ಅಧ್ಯಯನ' ಎಂಬ ಮಹಾ ಪ್ರಬಂಧಕ್ಕೆ ಡಾಕ್ಟರೇಟ್ ಪದವಿ ಪಡೆದ ಅವರು, ಹಲವು ಸ್ವತಂತ್ರ ಹಾಗೂ ಅನುವಾದಿತ ಕೃತಿಗಳನ್ನು ರಚಿಸಿದ್ದು, ಪಾಲಿ ಕನ್ನಡ ಶಬ್ದಕೋಶ, ಪ್ರಾಕೃತ ಕನ್ನಡ ಬೃಹತ್ ನಿಘಂಟು ಇವರ ಮಹತ್ಸಾಧನೆಯಲ್ಲಿ ಪ್ರಮುಖವಾದವು. ಅವರು ಕೇಂದ್ರ ಸಾಹಿತ್ಯ ಅಕಾಡೆಮಿ ಪ್ರಶಸ್ತಿ, ರಾಜ್ಯ ಸಾಹಿತ್ಯ ಅಕಾಡೆಮಿ ಪ್ರಶಸ್ತಿ, ಉತ್ತರ ಪ್ರದೇಶ ಸರ್ಕಾರದ ಸೌಹಾರ್ದ ಸಮ್ಮಾನ್ ಪ್ರಶಸ್ತಿ ಮತ್ತಿತರ ಹಲವಾರು ಪ್ರಶಸ್ತಿ ಪುರಸ್ಕಾರಗಳಿಗೂ ಭಾಜನರಾಗಿದ್ದಾರೆ.

ಡಾ. ಎಚ್.ಎಸ್. ವೆಂಕಟೇಶಮೂರ್ತಿಯವರು ಮಾತನಾಡಿ, ಡಾ. ಆರ್. ಲಕ್ಷ್ಮೀನಾರಾಯಣ ಅವರ ಅಧ್ಯಯನ ಶೀಲತೆಯ ಬಗ್ಗೆ ತಮ್ಮ ಮೆಚ್ಚುಗೆ ವ್ಯಕ್ತಪಡಿಸುತ್ತಾ, ನಾನು ಅರವತ್ತು ವರ್ಷಗಳಷ್ಟು ದೀರ್ಘಾವಧಿಯಲ್ಲಿ ಬರೆದ ಬಹಳಷ್ಟು ಕವಿತೆಗಳನ್ನು ಅವರು ಅರವತ್ತು ನಿಮಿಷಗಳಲ್ಲಿ ನಿರರ್ಗಳವಾಗಿ ಪರಿಚಯ ಮಾಡಿಕೊಟ್ಟಿದ್ದಾರೆ. ಆದರೆ ಅವರಿಗೆ ಬುದ್ಧಚರಣ ಕೃತಿಯ ಬಗ್ಗೆ ಪ್ರಸ್ತಾಪಿಸಲು ಬಹುಶಃ ಕಾಲಾವಧಿ ಸೀಮಿತವಾಗಿತ್ತು ಎಂದು ಹೇಳಿದರು.

ವೇದಿಕೆಯ ಸಂಚಾಲಕ ಶ್ರೀ ಬೆಂ.ಶ್ರೀ. ರವೀಂದ್ರರು ಮಾತನಾಡಿ, ವೆಂಕಟೇಶ ಮೂರ್ತಿಯವರ ಸಮಕ್ಷಮದಲ್ಲಿಯೇ ಅವರ ಕಾವ್ಯಗಳ ಬಗ್ಗೆ ಆರ್. ಲಕ್ಷ್ಮೀನಾರಾಯಣ ಅವರ ಉಪನ್ಯಾಸವನ್ನು ಆಸ್ವಾದಿಸುವ ಅವಕಾಶ ಒದಗಿದ್ದು ನಮ್ಮೆಲ್ಲರ ಅದೃಷ್ಟ ಎಂದು ಹೇಳಿ, ಸದ್ಯದಲ್ಲಿಯೇ ಡಾ. ಆರ್.ಲಕ್ಷ್ಮೀನಾರಾಯಣ ಅವರಿಂದ ಬುದ್ಧಚರಣ ಕೃತಿಯ ಬಗ್ಗೆಯೇ ಒಂದು ಉಪನ್ಯಾಸ ಏರ್ಪಡಿಸಲಾಗುವುದು ಎಂಬ ಭರವಸೆ ನೀಡಿದರು.

ಆರಂಭದಲ್ಲಿ ಶ್ರೀ ಬಿ.ಆರ್. ರವೀಂದ್ರನಾಥ್ ಅವರು ಸ್ವಾಗತಿಸಿ, ಅತಿಥಿಗಳನ್ನು ಪರಿಚಯಿಸಿದರು. ಕಾರ್ಯಕ್ರಮವನ್ನು ನಿರ್ವಹಿಸಿದ ಶ್ರೀ ಗುರುರಾಜ ಶಾಸ್ತ್ರಿಯವರು ಕೊನೆಯಲ್ಲಿ ಎಲ್ಲರಿಗೂ ವಂದಿಸಿದರು.

***

ಕಾವ್ಯ ಪ್ರಯೋಜನಗಳು

– ಗಣಪತಿ ಹೆಗಡೆ

'ಪ್ರಯೋಜನಮನುದ್ದಿಶ್ಯ ನಮಂದೋಪಿ ಪ್ರವರ್ತತೆ', (ಪ್ರಯೋಜನವಿಲ್ಲದೇ ಯಾವುದೇ ಮೂರ್ಖನಾದರೂ ಕಾರ್ಯ ಪ್ರವರ್ತನಾಗುವದಿಲ್ಲ) ಎನ್ನುವದು, ಎಲ್ಲಾ ಕೆಲಸ ಕಾರ್ಯಗಳಿಗೂ ಒಂದಲ್ಲಾ ಒಂದು ಪ್ರಯೋಜನ ಇದ್ದೇ ಇರುತ್ತದೆ ಎನ್ನುವ ತಾತ್ಪರ್ಯ. ಇದನ್ನೇ ಕಾರ್ಯಕಾರಣ ಸಂಬಂಧ ಎನ್ನುವದು. ಕಾರಣ ಇಲ್ಲದೇ ಕಾರ್ಯ ಹುಟ್ಟಿಕೊಳ್ಳುವದಿಲ್ಲ. ಮೂರ್ಖರು ಮಾಡುವ ಕಾರ್ಯಕ್ಕೂ ಕಾರಣವಿರುತ್ತದೆ. ಅವರು ಮೂರ್ಖ ರಾಗಿರುವದೇ ಅಂತಹ ಕಾರ್ಯದ ಕಾರಣ. ಆದರೆ ಅದರಿಂದ ಅವನಿಗಾಗಲೀ ಅಥವಾ ಅನ್ಯರಿಗಾಗಲೀ ಯಾವುದೇ ಪ್ರಯೋಜನ ಇದೆ ಅಂತ ಹೇಳಲಿಕ್ಕೆ ಬರುವದಿಲ್ಲ. ಬದಲಾಗಿ ವಿಪರೀತ ಪರಿಣಾಮವೇ ಆದೀತು.

ಕೆಲವು ಕೆಲಸಗಳಿಗೆ, ಕರ್ತೃವಿಗೆ ಆಗುವ ಪ್ರಯೋಜನದ ಜೊತೆ ಇತರರಿಗೂ ಈ ಕೆಲಸದ ಪ್ರಯೋಜನ ದಕ್ಕುವದುಂಟು.

ಒಬ್ಬನಿಗೆ ಹೂದೋಟವನ್ನು ಮಾಡುವ ಆಸಕ್ತಿ ಇದೆ ಅಂತ ಅಂದುಕೊಳ್ಳೋಣ. ಹೂದೋಟವನ್ನು ಮಾಡಿ ಬಗೆ ಬಗೆಯ ಹೂಗಳು ಅರಳಿ ನಿಂತಾಗ ಅವನಿಗಾದ ಸಂತೋಷವೇ ಅವನಿಗಾಗುವ ಪ್ರಯೋಜನ. ಇದರಿಂದ ಆರಂಭದಲ್ಲಿ, ಶುದ್ಧ ಸಂತೋಷವನ್ನು ಬಿಟ್ಟು ಇನ್ನೇನನ್ನೂ ಅವನು ಅಪೇಕ್ಷಿಸುವದಿಲ್ಲ. ಆದರೆ ಈ ಸಂತೋಷ ಎನ್ನುವದು ಅವನಿಗಷ್ಟೇ ಸೀಮಿತವಾಗಿರುವದಿಲ್ಲ.

ಹೂದೋಟವನ್ನು ಹಾದುಹೋಗುವ ದಾರಿಹೋಕ, ಹೂದೋಟದ ಅಕ್ಕಪಕ್ಕದ ಮನೆಯವರು, ಆ ಹೂದೋಟದ ಹೂಗಳನ್ನು ಪಡೆಯುವವರು, ಹೂವಿನ ಸೌಂದರ್ಯದ ಜೊತೆ ಪರಿಮಳವನ್ನು ಅನುಭವಿಸುವವರು ಸಹ ಈ ಹೂದೋಟದ ಪ್ರಯೋಜನದ ಫಲಾನುಭವಿಗಳಾಗಿರುತ್ತಾರೆ.

ಹೂವಿನ ಹಾಗೂ ಹೂದೋಟದ ಸೌಂದರ್ಯವನ್ನು ಬೇರೆಯವರು ಹೇಳಿದಾಗ ಯಜಮಾನ ಸಂತೃಪ್ತಿಯಿಂದ ಬೀಗುವದು ಸಹಜ. ಅವನ ಮೂಲೋದ್ದೇಶದ ಹೊರತಾದ ಯಶಸ್ಸನ್ನು ಅವನು ಪಡೆಯುತ್ತಾನೆ. ಆಮೇಲೆ ಕ್ರಮೇಣ ಸಹಜವಾಗಿಯೇ ಹೂವಿನ ವ್ಯಾಪಾರದಿಂದ ಹಣ ಗಳಿಸುವ ಆಲೋಚನೆ ಬಂದು ಆರ್ಥಿಕ ಲಾಭವೂ ಆಗುತ್ತದೆ. ತಿಳಿದೋ ತಿಳಿಯದೆಯೊ, ಹೂದೋಟದ ಯಜಮಾನ ತಾನೂ ಸ್ವಸಂತೋಷ ಹಾಗೂ ಹಣವನ್ನು ಗಳಿಸುವದರ ಜೊತೆ ಬೇರೆಯವರಿಗೂ ಪ್ರಯೋಜನವನ್ನು ಕೊಡುತ್ತಾನೆ.

ಈಗ ಕಾವ್ಯದ ಪ್ರಯೋಜನೆಗಳ ಕುರಿತು ಬರೋಣ. ಪ್ರಾರಂಭದ ಹಂತದಲ್ಲಿ ಕಾವ್ಯರಚನೆಯೂ ಸೇರಿ, ಸಂಗೀತ, ನಾಟ್ಯ, ಚಿತ್ರಕಲೆ ಮೊದಲಾದ ಲಲಿತಕಲೆಗಳು ಸ್ವಸಂತೋಷಕ್ಕಾಗಿಯೇ ಹುಟ್ಟಿಕೊಳ್ಳುವವು. ಏನನ್ನಾದರೂ ಗೀಚುವದು ಚಿತ್ರಕಲೆಯ ಮೊದಲ ಲಕ್ಷಣ. ಹಾಗೆ ಮನಸ್ಸಿನಲ್ಲಿ ಮೂಡಿದ ಭಾವನೆಗಳನ್ನು ಅಕ್ಷರ ರೂಪಕ್ಕೆ ಇಳಿಸಿದಾಗ ಏನೋ ಸಮಾಧಾನವಾಗುವದು. ಈ ಸಮಾಧಾನವೇ ಕಾವ್ಯಪ್ರಯೋಜನೆಯ ಮೊದಲ ಹಂತ.

ತಾನು ಬರೆದ ಲೇಖನವನ್ನು ಬೇರೆಯವರಿಗೆ ತೋರಿಸಿ ಅವರಿಂದ ಭೇಷ್ ಎನಿಸಿಕೊಂಡಾಗ ಲೇಖಕ ಸಂತೃಪ್ತನಾಗಿ ಇನ್ನೂ ಬರೆಯೋಣ ಎನ್ನುವ ಹಂತಕ್ಕೆ ಬರುತ್ತಾನೆ. ಆದುದರಿಂದಲೇ, ಎಳೆಯ ಬರಹಗಾರರ ಲೇಖನಗಳನ್ನು ಪ್ರಾರಂಭದಲ್ಲಿಯೇ ವಿಮರ್ಶೆಗೆ ಹಚ್ಚಬಾರದು ಎನ್ನುವದು. ಅದೇನಿದ್ದರೂ ಎರಡನೆ ಹಂತದಲ್ಲಿ ಆಗಬೇಕಾದ ಕೆಲಸ. ಬೇರೆಯವರ ಹೊಗಳಿಕೆಯಿಂದಾದ ಉತ್ಸಾಹವೇ ಯಶಸ್ಸು ಎನ್ನಿಸಿಕೊಳ್ಳುವದು.

ಹೇಮಚಂದ್ರನು 'ಕಾವ್ಯಂ ಆನಂದಾಯ ಯಶಸೇ ಕಾಂತಾತುಲ್ಯತಯಾ ಉಪದೇಶಾಯ' (ಸ್ವಸಂತೋಷ, ಯಶಸ್ಸು ಹಾಗೂ ಕಾಂತಾಸಮ್ಮಿತ) ಎನ್ನುವ ಕಾವ್ಯದ ಮೂರು ಪ್ರಯೋಜನಗಳನ್ನು ಹೇಳಿದ್ದಾನೆ. ಇದು ಕಾವ್ಯದ ಪೂರ್ಣಪ್ರಯೋಜನವಲ್ಲ ಅಂತ ತಿಳಿಯಲು ಹೆಚ್ಚು ಕಷ್ಟವೇನೂ ಇಲ್ಲ.

ಆದರೆ ಮಮ್ಮಟನು ತನ್ನ ಕಾವ್ಯಪ್ರಕಾಶದಲ್ಲಿ ಹೇಳಿದ 'ಕಾವ್ಯಂ ಯಶಸೇರ್ಥಕೃತೆ ವ್ಯವಹಾರವಿದೆ ಶಿವೇತರಕ್ಷತಯೇ ಸದ್ಯಃ ಪರನಿರ್ವೃತಯೆ ಕಾಂತಾಸಮ್ಮಿತತಯೋಪದೇಶಯುಜೆ' (ಯಶಸ್ಸಿಗಾಗಿ, ಧನ ಸಂಗ್ರಹಣೆಗಾಗಿ, ವ್ಯಾವಹಾರಿಕ ಅನುಭವಕ್ಕಾಗಿ, ಪಾಪ ಪರಿಹಾರಕ್ಕಾಗಿ, ತತ್ಕಾಲದಲ್ಲಿಯೇ ಪರಮಾನಂದ ಹೊಂದುವದಕ್ಕಾಗಿ, ಕಾಂತೆಯಂತೆ ಉಪದೇಶಿಸುವದಕ್ಕಾಗಿ) ಎನ್ನುವ ವಿವರಣೆ ಹೆಚ್ಚು ಪರಿಪೂರ್ಣವಾದದ್ದು ಅಂತ ಲಾಕ್ಷಣಿಕರು ಅಭಿಪ್ರಾಯಪಡುತ್ತಾರೆ.

ಹೂದೋಟದ ಮಾಲಿಕನ ಹಾಗೆಯೇ, ಕವಿಯಿಂದ ರಚಿತವಾದ ಕಾವ್ಯ, ಕೇವಲ ಕವಿಗೆ ಮಾತ್ರ ಪ್ರಯೋಜನವನ್ನು ತಂದು ಕೊಡುವುದಿಲ್ಲ. ಆದರೆ ಯಶಸ್ಸು ಹಾಗೂ ಧನಸಂಗ್ರಹಣೆಯ ಪ್ರಯೋಜನ ಪೂರ್ತಿಯಾಗಿ ಕವಿಗೇ ಸಲ್ಲುವಂತದ್ದು. ಸಾರ್ವಜನಿಕವಾಗಿ ಸಿಗುವ ಹೊಗಳಿಕೆಯೇ ಕವಿಗೆ ದಕ್ಕುವ ಯಶಸ್ಸು. ರಚಿಸಿದ ಕಾವ್ಯಕ್ಕಾಗಿ, ಹೆಚ್ಚೋ, ಕಡಿಮೆಯೋ, ಕೆಲವು ಮಟ್ಟಿಗಿನದಾದರೂ ಹೊಗಳಿಕೆ ಕಾವ್ಯರಚನಾಕಾರರಿಗೆ ಸಿಕ್ಕೇ ಸಿಗುತ್ತದೆ. ಲೇಖಕನಿಗೆ ಸಿಗುವ ಆರ್ಥಿಕ ಪ್ರಯೋಜನೆಗಿಂತ, ಈ ಯಶಸ್ಸೇ ಲೇಖಕ ಬರವಣಿಗೆಯನ್ನು ಮುಂದುವರಿಸಲು ಸಹಾಯಕಾರಿಯಾಗುತ್ತದೆ. ಕೆಲವು ಕಾವ್ಯ ರಚನಾಕಾರರಿಗೆ ಅವರ ಜೀವಿತಾವಧಿಯಲ್ಲಿ ಈ ಅಸ್ಮಿತೆಯನ್ನು ಗುರುತಿಸಿಕೊಳ್ಳುವ ಭಾಗ್ಯ ಇಲ್ಲದೇ ಅವರ ಮರಣಾನಂತರ ದೊರೆಯುವ ಸಾಧ್ಯತೆಯೂ ಇದೆ. ಆರ್ಥಿಕ ಪ್ರಯೋಜನ ಎನ್ನುವದು, ಕೆಲವೇ ಸೀಮಿತ ಬರವಣಿಗೆಗಾರರಿಗೆ ಮಾತ್ರ ದಕ್ಕುವಂತದ್ದು.

ಶಿವೇತರಕ್ಷತಯೆ ಹಾಗೂ ಸದ್ಯಃ ಪರನಿರ್ವೃತಯೆ ಇದು ಲೇಖಕ ಹಾಗೂ ಓದುಗ ಇಬ್ಬರಿಗೂ ಸಿಗುವ ಪ್ರಯೋಜನಗಳು.

ಕಾವ್ಯ ರಚನೆಯಿಂದಾಗಿ ಕೃತಿಕಾರನಿಗೆ ಪುಣ್ಯ ಪ್ರಾಪ್ತಿಯಾಗುತ್ತದೆ ಎನ್ನುವ ಹೇಳಿಕೆ ಇದೆ. ಮಯೂರನೆಂಬ ಕವಿ ತನಗೆ ಒದಗಿದ ತೊನ್ನನ್ನು 'ಸೂರ್ಯಶತಕದ' ರಚನೆಯಿಂದ ಕಳೆದುಕೊಂಡ ಎನ್ನುವ ಐತಿಹ್ಯವಿದೆ.

ಇನ್ನು ಕಾವ್ಯವನ್ನು ಓದುವದರಿಂದ ಹಾಗೂ ಶ್ರವಣ ಮಾಡುವದರಿಂದ ಪುಣ್ಯಸಂಗ್ರಹವಾಗುತ್ತದೆ ಎನ್ನುವದನ್ನು ನಾವೆಲ್ಲರೂ ಕೇಳಿಯೇ ಇದ್ದೇವೆ. ಭಾಗವತಕಥಾ ಪಾರಾಯಣವನ್ನು ಓದುವದರಿಂದ ಅಥವಾ ಕೇಳುವುದರಿಂದ ಪುಣ್ಯ ಬರುತ್ತದೆ ಅಂತಲೇ ಭಾಗವತ ಸಪ್ತಾಹವನ್ನು ಮಾಡಿ ಊರವರನ್ನು ಸೇರಿಸುವದಿದೆ.

'ವೇದಪಾರಾಯಣದ ಫಲ ಗಂ।
ಗಾದಿ ತೀರ್ಥಸ್ನಾನ ಫಲ ಕೃ।
ಚ್ಛಾದಿ ತಪಸಿನ ಫಲವು ಜ್ಯೋತಿಷ್ಟೋಮಯಾಗಫಲ॥
ಮೇದಿನಿಯನೊಲಿದಿತ್ತ ಫಲ ವ।
ಸ್ತ್ರಾದಿ ಕನ್ಯಾದಾನಫಲವಹು।
ದಾದರಿಸಿ ಭಾರತದೊಳೊಂದಕ್ಷರವ ಕೇಳ್ದರಿಗೆ ॥'

ಅಂತ ಗದುಗಿನ ನಾರಣಪ್ಪನೇ ಹೇಳಿಕೊಂಡಿರುವದುಂಟು.

ಈ ಮೊದಲೇ ಹೇಳಿದಂತೆ ಸಾಹಿತಿ ಮೂಲತಃ ಬರೆಯುವದು ಆತ್ಮ ಸಂತೋಷಕ್ಕಾಗಿ. ಮನಸ್ಸಿನಲ್ಲಿ ಮೂಡಿದ ಭಾವನೆಗಳನ್ನು ಅಕ್ಷರ ರೂಪಕ್ಕೆ ಇಳಿಸಿದಾಗ ಒಂದು ವಿಚಿತ್ರ ಸಂತೋಷವಾಗುವದು. ಹಾಗೆಯೇ ಕಾವ್ಯವನ್ನು ಓದುವ ಸಹೃದಯನಿಗೂ ಸಂತೋಷವಾಗುತ್ತದೆ. ಸದ್ಯಃ ಪರನಿರ್ವೃತಯೆ, ಅಂದರೆ ತತ್ಕಾಲದಲ್ಲಿ ಪರಮಾನಂದ ಉತ್ಪನ್ನವಾಗುವದೂ ಲೇಖಕನಿಗೂ, ಓದುಗನಿಗೂ ಒಟ್ಟೊಟ್ಟಿಗೇ ದೊರೆಯುವ ಸತ್ಫಲ.

'ದೇಶ ಸುತ್ತು ಕೋಶ ಓದು' ಎನ್ನುವದು ಒಂದು ಹಳೆಯ ಗಾದೆ. ದೇಶವನ್ನು ಸುತ್ತುವದರಿಂದ ಬೇರೆ ಬೇರೆ ಸಂಸ್ಕೃತಿಯ ಜನರ ಸಂಸರ್ಗ ಒದಗುತ್ತದೆ. ಪರಸ್ಪರ ವಿಚಾರ ವಿನಿಮಯಕ್ಕೆ ಅನುಕೂಲವಾಗುತ್ತದೆ. ವಿವಿಧ ಭೂಪ್ರದೇಶಗಳ ತಿಳುವಳಿಕೆಗಳಿಗೆ ಅನುಕೂಲ ಒದಗುತ್ತದೆ. ಸ್ಥಳಪರಿಚಯದ ಕಾರಣಕ್ಕಾಗಿ ಇತಿಹಾಸದ ಕಲಿಕೆ ಸುಲಭವಾಗುತ್ತದೆ.

ಸಾಹಿತ್ಯದಲ್ಲಿ, ಲೋಕಸಂಚಾರವಿಲ್ಲದೆಯೇ ಕೇವಲ ಸಾಹಿತ್ಯದ ಓದುವಿಕೆಯಿಂದಾಗಿ ಈ ಅನುಭವಗಳನ್ನು ಗಳಿಸಿಕೊಳ್ಳಬಹುದು. ಲೋಕಾನುಭವ ಹಾಗೂ ವ್ಯವಹಾರದ ತಿಳುವಳಿಕೆ ಕೇವಲ ಕಾವ್ಯವನ್ನು ಓದುವದರಿಂದ ಸಾಧ್ಯ. ಅದಕ್ಕೇ ಕಾವ್ಯವನ್ನು 'ವ್ಯವಹಾರವಿದೇ' ಎನ್ನುವದು.

ವೇದೋಪನಿಷತ್ತುಗಳು ಹಾಗೂ ಶಾಸ್ತ್ರಗಳನ್ನು 'ಪ್ರಭುಸಮ್ಮಿತ' ಎನ್ನುತ್ತಾರೆ. ಹೇಗೆ ರಾಜನಾದವನ ಮಾತನ್ನು ಚಾಚೂ ತಪ್ಪದೇ ನಡೆಸಬೇಕಾಗಿದ್ದು ಪ್ರಜೆಯ ಕರ್ತವ್ಯವೋ ಹಾಗೇ ವೇದಗಳಲ್ಲಿ ಹಾಗೂ ಶಾಸ್ತ್ರಗಳಲ್ಲಿ ಉಲ್ಲೇಖಿಸಲ್ಪಟ್ಟ ವಿಷಯಗಳನ್ನು ಅನುಸರಿಸಲೇಬೇಕು. ಇಲ್ಲಿ ವೇದವಾಕ್ಯ ಹಾಗೂ ಶಾಸ್ತ್ರವಾಕ್ಯಗಳು ಕಠಿಣವಾಗಿಯೇ ಇರುತ್ತವೆ. ರಾಜನಾದವನು ಪ್ರಜೆಯ ಮನಸ್ಸಿಗೆ ಸಂತೋಷವಾಗುವ ಹಾಗೆ ಆಜ್ಞೆ ಮಾಡುವುದಿಲ್ಲ.

ಪುರಾಣ ಹಾಗೂ ಇತಿಹಾಸಗಳು 'ಮಿತ್ರ ಸಮ್ಮಿತ' ಎನಿಸಿಕೊಳ್ಳುತ್ತವೆ. ಹೇಗೆ ಗೆಳೆಯನಾದವನು ಪ್ರೀತಿಯಿಂದ ಮನಃ ಪರಿವರ್ತನೆ ಮಾಡಲು ಪ್ರಯತ್ನಿಸುತ್ತಾನೆಯೋ ಹಾಗೇ ಪುರಾಣೇತಿಹಾಸಗಳು ಓದುಗನ ಮನಸ್ಸಿನ ಮೇಲೆ ಪರಿಣಾಮ ಬೀರುತ್ತವೆ. ಒಳ್ಳೆಯದು ಹಾಗೂ ಕೆಟ್ಟದ್ದು ಯಾವುದು ಎಂದು ತಿಳಿಸುವದರ ಜೊತೆಗೆ ಒಳ್ಳೆಯದನ್ನು ಮಾಡುವದರಿಂದ ಒಳ್ಳೆಯದಾಗುತ್ತದೆ ಅಂತಲೂ ಕೆಟ್ಟದ್ದನ್ನು ಮಾಡುವದರಿಂದ ಕೆಡುಕಾಗುತ್ತದೆ ಅಂತಲೂ ಪುರಾಣೇತಿಹಾಸಗಳನ್ನು ಓದುವದರಿಂದ ಓದುಗ ತಿಳಿದು ಕೊಳ್ಳುತ್ತಾನೆ.

ಆದರೆ ಕಾವ್ಯವನ್ನು 'ಕಾಂತಾಸಮ್ಮಿತ' ಎನ್ನುತ್ತಾರೆ. ಹೆಂಡತಿಯ ಮಾತಿನ ಹಿಂದೆ ಒಲವು ಇರುತ್ತದೆ. ಅವಳ ಮಾತು ಕೇವಲ ಕಿವಿಗೆ ಹಾದುಹೋಗುವಂತದ್ದಲ್ಲ. ಗೆಳೆಯರ ಮಾತು ಕಿವಿಯಿಂದ ನೇರವಾಗಿ ಬುದ್ಧಿಗೆ ಹೋಗುವಂತದ್ದು.

ಆದರೆ ಹೆಂಡತಿಯ ಮಾತು ಮೊದಲು ಹೃದಯವನ್ನು ಹಾದು ಬುದ್ಧಿಯನ್ನು ಸೇರುತ್ತದೆ. ಆದುದರಿಂದ ಇಂತಹ ಮಾತು ಕಿವಿಗೆ ಇಂಪು, ಹೃದಯಕ್ಕೆ ತಂಪು. ಗಂಡನ ಮನಸ್ಸನ್ನು ಮೊದಲು ಗೆದ್ದು ಆಮೇಲೆ ತಪ್ಪು ಒಪ್ಪುಗಳ ಕಡೆ ಗಂಡನ ಲಕ್ಷ್ಯ ಸೆಳೆಯುತ್ತಾಳೆ. ಇದರಿಂದ ಸಿಹಿಲೇಪಿತ (ಶುಗರ್ ಕೋಟೆಡ್) ಕಹಿಮಾತ್ರೆ ತಿನ್ನಲು ಕಷ್ಟವಾಗದೇ ಇರುವ ಹಾಗೆ ಹೆಂಡತಿಯ ಉಪದೇಶವೂ ಸಹ್ಯವಾಗುತ್ತದೆ.

ಹಾಗೆಯೇ ಕಾವ್ಯವನ್ನು ಓದುವಾಗ, 'ಕಾವ್ಯರಸವನ್ನು' ಆಸ್ವಾದಿಸುವದರಿಂದ ಅದರಲ್ಲಿರುವ ಅನುಸರಿಸಿ ನಡೆಯಲು ಕಷ್ಟಕರವಾದ ವಿಷಯಗಳೂ ಮನಸ್ಸಿಗೆ ಹಿತವನ್ನೇ ಕೊಡುತ್ತವೆ.

ಈ ಎಲ್ಲಾ ಪ್ರಯೋಜನೆಗಳನ್ನು ಲಕ್ಷ್ಯಿಸಿ ಕಾವ್ಯ ರಚನೆ ಹಾಗೂ ಕಾವ್ಯವಾಚನದ ಕಡೆಗೆ ಗಮನ ಹರಿಸಬೇಕು.

***

ಗಝಲ್

– ಸುಜಾತಾ ರವೀಶ್

ಆಲಿಸುತ ಮುರಳಿಯ ಮೋಹಕ ಗಾನ ಮರುಳಾದೆ ಆಲಾಪನಕೆ ಮನಮೋಹನ
ಆಶಿಸುತ ಇನಿಯನ ಸಾನ್ನಿಧ್ಯವನು ಧಾವಿಸಿದೆ
ಆಲಿಂಗನಕೆ ಮನಮೋಹನ

ಗಂಧಗಳ ಸೂಸುತಿವೆ ಬಿರಿಯುತಿಹ ಕುಸುಮಗಳ ಅಲರುಗಳ ಪರಿಮಳ
ಬಂಧಗಳ ಗಂಟುಗಳ ಗೋಜಲುಗಳು ಬಿಗಿಯುತಿವೆ ಆಕುಂಚನಕೆ ಮನಮೋಹನ

ಸಾಮೀಪ್ಯ ಚುಂಬಕದೊಲು ಸೆಳೆಯುತಿರೆ ಭವದ ರಿವಾಜುಗಳ ಕಟ್ಟುಪಾಡೇಕೆ
ಸಾನಿಧ್ಯ ಭರವಸೆಯ ನೀಡುತಿದೆ ವಿಶ್ವಾಸದ ಬಿಗಿ
ಆಶ್ವಾಸನಕೆ ಮನಮೋಹನ

ಇನಿಯ ಬಂದಾನೋ ಬಾರನೋ ಎಂದು ತಲ್ಲಣಿಸಿ ಕೊರಗುತಿಹೆ ಬೇಗ ಬಾರೆಂದು
ಹೃದಯ ನಗಾರಿಯಿದು ಭೋರಿಡುತ ಕುಣಿದಿದೆ ಆಗಮನಕೆ ಮನಮೋಹನ

ಇಳಿಸಂಜೆಯಲಿ ಚಿತ್ತಾರ ಬಿಡಿಸಿರುವೆ ಮಳೆಬಿಲ್ಲ
ರಂಗುಗಳ ಸಾಲ ಪಡೆದು
ಸುಜಿಯೆಂಬ ರಾಧೆಯ ಮನ ನಲುಗುತಿದೆ ದ್ವಂದ್ವಗಳ ಆಂದೋಲನಕೆ ಮನಮೋಹನ

***

ಅವನಿವನಾದರೆ ಇವನವನೇನಾ?

– ಎಲ್. ಗಿರಿಜಾರಾಜ್

ಪ್ರತಿ ಬೇಸಿಗೆಯಲ್ಲಿ ಬರುವ ಪಬ್ಲಿಕ್ ಪರೀಕ್ಷೆಯ ದಿನಗಳು ಕೇವಲ ವಿದ್ಯಾರ್ಥಿಗಳಿಗೆ ಮಾತ್ರವಲ್ಲ, ಶಿಕ್ಷಕರಿಗೂ ಒಂದು ರೀತಿ ಪರೀಕ್ಷೆಯೇ! ಅದರಲ್ಲೂ ಪರೀಕ್ಷಾ ಕೊಠಡಿಯ ನಿರ್ವಹಣೆಯಂತೂ ಒಂದು ಸವಾಲೇ ಸರಿ. ಪರೀಕ್ಷಕಳಾಗಿ ಕೆಲಸ ಮಾಡುವಾಗ, ಗಂಭೀರ ವಾತಾವರಣದಲ್ಲೂ ವಿದ್ಯಾರ್ಥಿಗಳ ಹಾಲ್ ಟಿಕೆಟ್ ಹಿಡಿದು ಆ ಭಾವಚಿತ್ರ ಒಂದು ಸಲ, ಆ ವಿದ್ಯಾರ್ಥಿಯನ್ನೊಂದು ಸಲ ನೋಡುತ್ತಾ, ಆ ಕಣ್ಣು, ಆ ಮೂಗು, ಆ ಬಾಯಿ, ಆ ಚಹರೆ ಅವನದೇ/ಅವಳದೇ ಎಂದು ಧೃಡಪಡಿಸಿಕೊಂಡು ಸಹಿ ಹಾಕುವ ಸನ್ನಿವೇಶ ನಗು ತರಿಸುತ್ತದೆ.

ಅಂದು ಯಥಾಪ್ರಕಾರ ವಿಕ್ರಮನು ಬೇತಾಳನನ್ನು ಹೆಗಲೇರಿಸಿಕೊಂಡು ಹೋಗುವಂತೆ ನನ್ನ ದೊಡ್ಡ ಚೀಲವನ್ನು ಹೆಗಲೇರಿಸಿಕೊಂಡು ಕಾಲೇಜು ತಲುಪುವಷ್ಟರಲ್ಲಿ ತಡವಾಗಿಬಿಟ್ಟಿತ್ತು. ಎದುರಾದ ಸಹೋದ್ಯೋಗಿಗಳಿಗೆ ಆತುರದಲ್ಲೇ 'ಹಾಯ್' ಹೇಳುತ್ತಾ ಪ್ರಾಂಶುಪಾಲರ ರೂಮಿನೆಡೆಗೆ ಜೋರಾದ ಎದೆಬಡಿತದೊಡನೆ ಕಾಲಿಟ್ಟೆ.

ಇನ್ನೂ ಮೂರ್ನಾಲ್ಕು ಲೇಟ್ ಲತೀಫ್ ಪರೀಕ್ಷಕರು ಬರಬೇಕಾಗಿದ್ದ ವಿಷಯ ಪ್ರಾಂಶುಪಾಲರ ಚಡಪಡಿಕೆಯ ಸಿಟ್ಟಿನ ಮಾತುಗಳಿಂದ ತಿಳಿದು, ತಡವಾಗಿ ಬಂದಿರುವೆ ಎಂಬ ನನ್ನ ಪಾಪಪ್ರಜ್ಞೆ ಕಡಿಮೆಯಾಯಿತು. "ಕಾಪಿ ಗೀಪಿಮಾಡದೆ ಜಾಣರಂತೆ ಸರ ಸರ ಬರೆಯುವ ವಿದ್ಯಾರ್ಥಿಗಳು ಸಿಗಲಪ್ಪ" ಎಂದು ದೇವರಿಗೆ ಒಂದು ಅಪ್ಲಿಕೇಷನ್ ಮೊದಲು ಹಾಕಿ, ಅಲ್ಲಿದ್ದ ಕರಂಡಕದೊಳಗೆ ಕೈ ಹಾಕಿ ಚೀಟಿಯೊಂದನ್ನು ಎತ್ತಿಕೊಂಡೆ. ನನ್ನ ಪಾಲಿಗೆ ಬಂದ ಕೊಠಡಿ ಸಂಖ್ಯೆ ೩೦೯. ಸಂಖ್ಯಾಶಾಸ್ತ್ರ ಭವಿಷ್ಯವನ್ನು ಮೊನ್ನೆ ದೂರದರ್ಶನದಲ್ಲಿ ಪರಿಣತರೊಬ್ಬರು ಹೇಳುತ್ತಿದ್ದರು. ಮೂರು ಮತ್ತು ಒಂಬತ್ತು ಅನಿಷ್ಠ ಸಂಖ್ಯೆಗಳು ಎಂದೇನಾದರೂ ಅವರು ಹೇಳಿದರೇ ಎಂಬ ಅನುಮಾನ ಕಾಡಿತು. ಮೂರು ಮತ್ತು ಒಂಬತ್ತರ ಮಧ್ಯದ ಶೂನ್ಯ ಬಹಳ ಶೂನ್ಯವಾಗಿ ತೋರಿತು. ಬಂದದ್ದೆಲ್ಲಾ ಬರಲಿ, ಗೋವಿಂದನ ದಯೆ ಇರಲಿ ಎಂದುಕೊಳ್ಳುತ್ತಾ ಸಂಬಂಧಿಸಿದ ಕಡತ ಹಿಡಿದು ೩೦೯ಕ್ಕೆ ಧಾವಿಸಿದೆ.

ಬೆಲ್ ಆದ ನಂತರ ಪ್ರಶ್ನೆ ಪತ್ರಿಕೆ ವಿತರಿಸಿದಾಗ ತಿಳಿಯಿತು. ಅಲ್ಲಿದ್ದವರಲ್ಲಿ ಮುಕ್ಕಾಲು ಭಾಗ ರಿಪೀಟರ್ಸ್ ಎಂದು. ಮೂರ್ನಾಲ್ಕು ವರ್ಷ ದಂಡಯಾತ್ರೆ ಮಾಡಿದವರೂ ಅಲ್ಲಿದ್ದರು. ಘಜ್ನಿ ಮಹಮದನನ್ನು ನೆನೆಸಿಕೊಳ್ಳುತ್ತ ಹುಡುಗರನ್ನು ಕಣ್ಣಲ್ಲೇ ಅಳೆದೆ. ಕೆಲವರ ಹುರಿಮೀಸೆ, ಭಾರೀ ಶರೀರ ನೋಡಿ ಬೆಚ್ಚಿಬಿದ್ದೆ. ನಮ್ಮ ಕಾಲೇಜ್ ಮಾತ್ರವಲ್ಲದೆ ಇತರ ಕಾಲೇಜಿನ ಅಪರಿಚಿತ ಹುಡುಗರೂ ಅಲ್ಲಿದ್ದುದರಿಂದ ನಾನು ಎಚ್ಚರಿಕೆಯಿಂದ ಪರಿಶೀಲನೆ ಮಾಡಬೇಕಾಗಿತ್ತು. ಫೋಟೋ ನೋಡಿ ಮುಖ ನೋಡುವುದೋ, ಮುಖ ನೋಡಿ ಫೋಟೋ ನೋಡುವುದೋ! ಕೆಲವರು "ಎಷ್ಟಾದರೂ ನೋಡಿಕೊಳ್ಳಿ" ಎಂಬಂತೆ ತಲೆಯನ್ನು ಬೋಲ್ಟ್ ಆಗಿ ಮೇಲೆತ್ತಿ ಕಣ್ಣುಗಳನ್ನು ಅಗಲವಾಗಿ ಬಿಡುವಾಗ ನನಗೇ ಸಂಕೋಚವಾಗುತ್ತಿತ್ತು. ಒಬ್ಬ ವಿದ್ಯಾರ್ಥಿ ವಿಚಿತ್ರ ಕೇಶಾಲಂಕಾರದಲ್ಲಿ ಶೋಭಿಸುತ್ತಿದ್ದ. ಮತ್ತೆ ಫೋಟೋ ನೋಡಿದರೆ "ಮಗು" ಥರ!

"ಈ ಕಾಲೇಜೇನಾ? ಯಾವ ಬ್ಯಾಚ್?" ಎಂದು ಮೆಲ್ಲನೆ ಪ್ರಶ್ನಿಸಿದೆ. ಅವನು ಜೋರಾಗಿ ಗಹಗಹಿಸಿದ. ಆ ನಗೆ, "ನಾನು ಗೊತ್ತಿಲ್ಲವೇ ಮಿಸ್, ಕಾಲೇಜಿನಲ್ಲಿ ಹೀರೋ ಥರ ಇದ್ದೆ. ಕೇಳಿ ಅವಮಾನ ಮಾಡುವಿರಲ್ಲ.." ಎಂಬ ಅರ್ಥ ಸೂಸುವಂತಿತ್ತು. ನಾನು ಗುರುತು ಹತ್ತಿದವಳಂತೆ "ಓಹ್! ನೀನಾ.. ಗೊತ್ತಾಯ್ತು, ಗೊತ್ತಾಯ್ತು" ಎಂಬ ಉದ್ಗಾರದೊಂದಿಗೆ ಮುಂದೆ ಸಾಗಿದೆ.

ಸಾಮಾನ್ಯವಾಗಿ ಮೋಸ ಮಾಡಬೇಕೆಂದಿರುವ ವಿದ್ಯಾರ್ಥಿ ಇತರರಿಗೆ ಅನುಮಾನ ಬಾರದಂತೆ ಸಹಜವಾಗಿರುವ ಕಲೆ ಕರಗತ ಮಾಡಿಕೊಂಡಿರುತ್ತಾನೆ. ಆದರೆ ಕೆಲವು ಮುಗ್ಧ ಹುಡುಗರೇ ಅನುಮಾನ ಬರುವ ರೀತಿಯಲ್ಲಿ ವರ್ತಿಸುತ್ತಾರೆ. ಇಲ್ಲೊಂದು ಕೇಸು ಹಾಗೇ ಆಯಿತು. ಅಂಥಾ ಸುಡುಬಿಸಿಲು, ಮುಖದಿಂದ ಬೆವರು ಸುರಿಯುತ್ತಿದೆ. ಒಬ್ಬ ವಿದ್ಯಾರ್ಥಿ ಟೋಪಿ ಹಾಕಿಕೊಂಡು ಪರೀಕ್ಷೆ ಬರೆಯುತ್ತಿದ್ದ. ಅದೂ ಎಂಥದ್ದೂ ಅಂತೀರಾ? ಚಳಿ ತಡೆಯಲಾರದೆ ಎರಡೂ ಕಿವಿ ಮುಚ್ಚಿಕೊಳ್ಳುವಂತೆ ಹಾಕಿಕೊಳ್ಳುತ್ತಾರಲ್ಲ, ಆ ರೀತಿಯ ಉಣ್ಣೆಯ ಟೋಪಿ, ಆದರೆ ಫೋಟೋದಲ್ಲಿ ಟೋಪಿ ಇರಲಿಲ್ಲ. ಆ ಕಣ್ಣು, ಮೂಗು ಎಲ್ಲಾ ಅವನದೇ ಎಂದು ಫೋಟೋ ಸಾರುತ್ತಿದ್ದರೂ ಯಾಕೋ ಆ ಟೋಪಿ ನೋಡಿ ಅನುಮಾನ ಬಲವಾಯಿತು. “ಟೋಪಿ ತೆಗೆ” ಎಂದರೂ ಆತ ತೆಗೆಯಲಿಲ್ಲ. ಅದಕ್ಕೆ ಅವನು ಕೊಟ್ಟ ಉತ್ತರವೂ ವಿಚಿತ್ರವಾಗಿತ್ತು.

"ತುಂಬಾ ಕೂದಲು ಬೆಳೆದಿದೆ ಮ್ಯಾಡಂ".

ನಾನು, "ಅಲ್ಲಯ್ಯಾ, ಉದ್ದ ಕೂದಲು ಬಿಡುವುದು ಈಗ ಫ್ಯಾಶನ್ ಅಲ್ವಾ? ತೆಗೆಯಯ್ಯಾ!" ಎಂದರೂ ಆಸಾಮಿ ಒಪ್ಪಲಿಲ್ಲ. ಮುಚ್ಚಿದ ಟೋಪಿಯೊಳಗೆ "ಅಖಿಲಾಂಡ ಕೋಟಿ ಬ್ರಹ್ಮಾಂಡ ಅಡಗಿಸಿಟ್ಟಿರಬಹುದೇ? ಎಂತೆಂಥ ತಂತ್ರ ಮಂತ್ರಗಳೋ, ಕಾಪಿ ಹೊಡೆಯುವ ಚೀಟಿಗಳೋ ಇರಬಹುದೇ?” ಎಂದು ನನ್ನ ಪರೀಕ್ಷಕ ಬುದ್ಧಿ ಲೆಕ್ಕಹಾಕಿತು. ಆ ಟೋಪಿಯ ರಹಸ್ಯ ಭೇದಿಸಬೇಕೆಂದು ಟೋಪಿಗೆ ಕೈ ಹಚ್ಚುತ್ತಿರುವುದನ್ನು ನೋಡಿ, “ಬೇಡ, ಬೇಡ ಮಿಸ್, ನಾನೇ ತೆಗೀತೀನಿ” ಎಂದು ತನ್ನ ಟೋಪಿ ತೆಗೆದ. ತೆಗೆದದ್ದೇ ತಡ ಸೊಗಸಾದ ಎರಡು ಜಡೆ ಹೆಣೆಯಬಹುದಾದ ಮಾರುದ್ದದ ಕೂದಲು ಬೆನ್ನಿನ ಮೇಲೆ ಹರಡಿಕೊಂಡಿತು. ನಾನು ಸಹಿ ಹಾಕಿ ಮುಗಿಸಿದ ತಕ್ಷಣ, "ಮಿಸ್, ಟೋಪಿ ಹಾಕಿಕೊಳ್ಳಲಾ?” ಎಂದು ಆತುರ ತೋರಿದ. "ಹಾಕಿಕೋ ಮಹರಾಯ" ಎಂದರೂ ಆ ಉದ್ದ ಕೂದಲಿನ ಹಿಂದೆ ಏನೋ ರಹಸ್ಯವಿರಬೇಕು ಎಂದು ಮನದಲ್ಲಿ ಕುತೂಹಲ ಮೂಡಿತು.

ಸಮಯ ಮುಗಿಯುತ್ತಿದ್ದಂತೆ ಎಲ್ಲರೂ ನನ್ನ ಕೈಗೆ ಉತ್ತರ ಪತ್ರಿಕೆ ಕೊಟ್ಟು ಹೊರನಡೆದರು. ಬೆಲ್ ಆದ ನಂತರ ಎದ್ದು ಬಂದ ಆ ಟೋಪಿಯ ಹುಡುಗನನ್ನು ಕುತೂಹಲ ತಡೆಯಲಾರದೆ, "ಯಾಕೋ, ಇಷ್ಟು ಸೆಖೆಯಲ್ಲಿ ಇಷ್ಟುದ್ದ ಕೂದಲು ಬೆಳೆಸಿದ್ದೀಯಲ್ಲೋ! ನಿಜ ಹೇಳು" ಎಂದೆ.

"ಹೇಳ್ತೀನಿ ಮಿಸ್, ಈ ಭೌತಶಾಸ್ತ್ರ ನನ್ನ ಪಾಲಿಗೆ ಭೂತಶಾಸ್ತ್ರವಾಗಿದೆ. ಇದು ನಾಲ್ಕನೇ ಸಲ ಪರೀಕ್ಷೆ ಬರೀತ ಇರೋದು. ಯಾರೋ ತಿರುಪತಿ ತಿಮ್ಮಪ್ಪನಿಗೆ ಕೂದಲು ಮುಡಿ ಕೊಡುವುದಾಗಿ ಹರಸಿಕೋ, ಪಾಸಾಗುತ್ತೆ ಎಂದರು. ಅದಕ್ಕೇ ಬೆಳೆಸಿದೆ. ನನ್ನ ಕೂದಲು ಇಷ್ಟು ಉದ್ದ ಬೆಳೆದಿರೋದು ನೋಡಿ ನನ್ನ ಅಂಕಲ್ ‘ಪಾಂಡವರ ಅಜ್ಞಾತವಾಸ’ ನಾಟಕದಲ್ಲಿ ಸೈರಂಧ್ರೀ ಪಾರ್ಟ್ ಮಾಡು ಅಂದರು. ಅಷ್ಟೊತ್ತಿಗೆ ಪರೀಕ್ಷೆಯೂ ಮುಗಿದಿರುತ್ತದೆ ಅಂತ ಒಪ್ಪಿಕೊಂಡೆ" ಎಂದು ನಾಚುತ್ತ ನುಡಿದ.

"ಸರಿ, ಶಿಷ್ಯೋತ್ತಮ, ಆ ತಿಮ್ಮಪ್ಪ ನಿನ್ನನ್ನು ರಕ್ಷಿಸಲಿ" ಎಂದು ಆಶೀರ್ವದಿಸಿ ಉತ್ತರ ಪತ್ರಿಕೆಗಳ ಕಡತ ಹೊತ್ತು ಪ್ರಾಂಶುಪಾಲರ ಕೊಠಡಿಯತ್ತ ಧಾವಿಸಿದೆ.

***

ಗುರು ನಮನ

– ರೇಣುಕಾ ದೇಸಾಯಿ

ಆಷಾಢ ಶುದ್ಧ ಪೂರ್ಣಿಮೆಯ ದಿನ ಗುರುಪೂರ್ಣಿಮೆ. ಯುಗ ಯುಗಗಳಿಂದಲೂ ಜ್ಞಾನವು ಗುರು ಪರಂಪರಾಗತವಾಗಿ ಒಂದು ಪೀಳಿಗೆಯಿಂದ ಇನ್ನೊಂದು ಪೀಳಿಗೆಗೆ ಹರಿದುಬರುತ್ತಿದೆ. ಗುರುಪೂರ್ಣಿಮೆಯಂದು ಈ ಗುರು ಪರಂಪರೆಗೆ ನಾವು ಕೃತಜ್ಞತೆ ವ್ಯಕ್ತಪಡಿಸುತ್ತೇವೆ. ಅಲ್ಲದೆ ಜ್ಞಾನ ಮತ್ತು ಪ್ರೇಮವನ್ನು ಜೊತೆಯಾಗಿ ಸಂಭ್ರಮದಿಂದ ಆಚರಿಸುವ ದಿನವೂ ಹೌದು. ಈ ದಿನಕ್ಕೆ ವ್ಯಾಸ ಪೂರ್ಣಿಮಾ ಎಂದೂ ಕರೆಯುತ್ತಾರೆ. ಮಹರ್ಷಿ ವ್ಯಾಸರು ಹುಟ್ಟಿದ ದಿನ.

ಮಹರ್ಷಿ ವ್ಯಾಸರು ನಾಲ್ಕು ಮುಖಗಳಿಲ್ಲದ ಬ್ರಹ್ಮ, ಎರಡೇ ತೋಳುಗಳು ಇರುವಂತಹ ಮತ್ತೊಬ್ಬ ವಿಷ್ಣು, ಹಣೆಯಲ್ಲಿ ಕಣ್ಣಿಲ್ಲದಂತಹ ಶಿವ. ಅವರೇ ಭಗವಾನ್ ಬಾದರಾಯಣ ಅಥವಾ ವ್ಯಾಸರು. ಮಹರ್ಷಿ ವ್ಯಾಸರು ಮಹಾಭಾರತ, ಉಪನಿಷತ್ ರಚನಾಕರ್ತರು., ವೇದದ ರಾಶಿಯನ್ನು ನಾಲ್ಕು ಭಾಗಗಳನ್ನಾಗಿ ವಿಂಗಡಿಸಿ ಬೋಧಿಸಿದವರು. ಈ ಪರಂಪರೆಯನ್ನು ಮುಂದುವರಿಸಿದ್ದರಿಂದ ಅವರು ವೇದವ್ಯಾಸ ಎಂಬ ಹೆಸರನ್ನು ಪಡೆದರು. ಇವರು ಮಹರ್ಷಿ ಪರಾಶರರ ಮಗ. ಮಹರ್ಷಿ ಪರಾಶರರು ಅಖಂಡ ಭಾರತದಲ್ಲಿ ಸಂಚರಿಸಿ ವಿವಿಧ ಮಹರ್ಷಿಗಳಿಂದ ರಚಿತವಾದ ಎಲ್ಲಾ ಮಂತ್ರಗಳನ್ನು ಸಂಗ್ರಹಿಸಿದರು. ಅವುಗಳನ್ನು ವಿಭಾಗಿಸಿ ಸಮರ್ಪಕಗೊಳಿಸುವ ಜವಾಬ್ದಾರಿಯನ್ನು ತಮ್ಮ ಮಗ ವ್ಯಾಸರಿಗೆ ವಹಿಸಿದರು. ವ್ಯಾಸ ಮಹರ್ಷಿಗಳು ತಮ್ಮ ನಾಲ್ಕು ಜನ ಶಿಷ್ಯರಿಗೆ ಸೂಕ್ತ ಮಾರ್ಗದರ್ಶನ ನೀಡಿ ಅವರಿಗೆ ಈ ಹೊಣೆಯನ್ನು ವಹಿಸಿದರು. ಆ ನಾಲ್ಕು ಜನ ಶಿಷ್ಯರು ಆಷಾಢ ಹುಣ್ಣಿಮೆಯ ದಿನದಂದು ಅವರ ಗುರುಗಳಾದ ವ್ಯಾಸರನ್ನು ಪೂಜಿಸಿ ನಮಸ್ಕರಿಸಿ ಈ ಮಹಾನ್ ಕಾರ್ಯವನ್ನು ಪ್ರಾರಂಭಿಸಿದರು. ಆದ್ದರಿಂದಲೇ ಈ ದಿನವನ್ನು ವ್ಯಾಸ ಪೂರ್ಣಿಮೆ ಎಂದು ಆಚರಿಸಲಾಗುತ್ತದೆ ಮತ್ತು ಈ ಶುಭ ದಿನದಂದು ಪರಮ ಜ್ಞಾನವನ್ನು ನೀಡಿದ ಗುರುಗಳಿಗೆ ವಿಶೇಷ ಪೂಜೆ ಸಲ್ಲಿಸುವುದು ವಾಡಿಕೆಯಾಗಿ ಬಂದಿದೆ.

ಮುಂದೆ ವೇದಗಳನ್ನು ಸಾಮಾನ್ಯರು ಓದಿ ತಿಳಿಯಲು ಸಾಧ್ಯವಾಗುವದಿಲ್ಲ ಎಂದು ಅರಿತ ವೇದವ್ಯಾಸರು ವೇದದ ಸಾರಾಂಶವನ್ನು ಸರಳವಾಗಿ 18 ಪುರಾಣಗಳಲ್ಲಿ ಹಾಗೂ ಉಪನಿಷತ್ತಿನ ಸಾರವನ್ನು ತರ್ಕಬದ್ಧವಾಗಿ ಬ್ರಹ್ಮಸೂತ್ರ ರೂಪದಲ್ಲಿ ರಚಿಸಿದರು, ಅದನ್ನು 'ವೇದಾಂತ ಸೂತ್ರಗಳು' ಎಂದು ಕರೆಯುತ್ತಾರೆ. ಮಹರ್ಷಿ ವ್ಯಾಸರು 1,00,000 ಶ್ಲೋಕಗಳನ್ನು ಹೊಂದಿರುವ ಶ್ರೇಷ್ಠ ಗ್ರಂಥವಾದ ಮಹಾಭಾರತವನ್ನೂ ರಚಿಸಿದರು. ಇಂದಿಗೂ ಇಂತಹ ಮತ್ತೊಂದು ದೊಡ್ಡ ಗ್ರಂಥ ವಿಶ್ವದಲ್ಲಿ ರಚಿತವಾಗಿಲ್ಲ. ಅಚ್ಚರಿಯೆನಿಸಿದರೂ ಒಬ್ಬ ವ್ಯಕ್ತಿಯಾಗಿ ಇಂತಹ ಅನೇಕ ಮಹಾನ್ ಕಾರ್ಯಗಳನ್ನು ಮಾಡಿದವರು ವೇದವ್ಯಾಸರು. ವ್ಯಾಸರ ಪೂರ್ವ ಹೆಸರು ಕೃಷ್ಣದ್ವೈಪಾಯನ. ಇವರ ತಂದೆ ಪರಾಶರ ಮಹರ್ಷಿಗಳು. ಪರಾಶರ ಮಹರ್ಷಿಗಳ ತಂದೆ ಶಕ್ತಿ ಮಹರ್ಷಿಗಳು. ಇವರು ಮಹಾನ್ ತಪೋನಿಧಿ. ಶಕ್ತಿ ಮಹರ್ಷಿಗಳ ತಂದೆ ವಶಿಷ್ಠ ಮಹರ್ಷಿಗಳು. ಇದೊಂದು ಶ್ರೇಷ್ಠ ಮಹರ್ಷಿಗಳ ನಾಲ್ಕು ತಲೆಮಾರು. ಇಂದು ಮಹರ್ಷಿ ವೇದವ್ಯಾಸರಿಗೆ ಪೂಜೆ ಸಲ್ಲಿಸಿದರೆ ಈ ಮಹಾನ್ ಗುರುಪರಂಪರೆಗೆ ಪೂಜೆ ಸಲ್ಲಿಸಿದಂತೆ ಆಗುತ್ತದೆ.

ನಮೋಸ್ತುತೇ ವ್ಯಾಸ ವಿಶಾಲಬುದ್ಧೇ,
ಫುಲ್ಲಾರವಿಂದಾಯತಪತ್ರ ನೇತ್ರ
ಯೇನತ್ವಯಾಭಾರತ ತೈಲಪೂರ್ಣ,
ಪ್ರಜ್ವಾಲಿತೋ ಜ್ಞಾನಮಯಾಃಪ್ರದೀಪಃ – ಎಂದು ವ್ಯಾಸರಿಗೆ ನಮ್ಮ ನಮನ ಸಲ್ಲಿಸೋಣ.

‘ಅಕ್ಷರ ಮಾತ್ರಂ ಕಲಿಸಿದಾತಂ ಗುರು’, ‘ಮನೆಯೇ ಮೊದಲ ಪಾಠಶಾಲೆ, ಜನನಿ ತಾನೇ ಮೊದಲ ಗುರುವು’ – ‘ಗು’ ಎಂದರೆ ಅಜ್ಞಾನ, ಕತ್ತಲು. ‘ರು’ ಎಂದರೆ ತೊಲಗಿಸು, ನಿವಾರಿಸು. ಹಾಗಿದ್ದರೆ ಗುರು ಎಂದರೆ ಯಾರು? ಪ್ರೇರಣಾದಾಯಕರಾದವರು, ಸೂಚಕರಾಗಿರುವವರು, ಸತ್ಯವನ್ನು ಅರುಹಿದವರು, ಮಾರ್ಗದರ್ಶಕರಾಗಿರುವವರು, ಶಿಕ್ಷಣವನ್ನು ನೀಡುವವರು, ಬೋಧನೆ ಮಾಡುವವರು – ಈ ಆರು ಜನರನ್ನು ಗುರುಗಳು ಎಂದು ಸ್ಮರಿಸಲಾಗುತ್ತದೆ. ಗುರು ಎಂಬ ಪದವು ಸಾಧಕನ ಮನಸ್ಸಿನಲ್ಲಿ ತಂದೆಯಲ್ಲಿನ ರಕ್ಷಣೆ, ತಾಯಿಯಲ್ಲಿನ ಪ್ರೀತಿ, ಚೈತನ್ಯ ಸ್ವರೂಪಿಯಾದ ಭಗವಂತನನ್ನು ನೆನಪಿಗೆ ತಂದುಕೊಡುತ್ತದೆ.

ಬಂಧುಗಳಾದವರು ಮಿಂದು ಉಂಡು ಹೋಹರು
ಬಂಧನವ ಕಳೆಯಲರಿಯರು
ಗುರುವಿಂದ ಬಂಧನವಳಿಗು ಸರ್ವಜ್ಞ

ಎಂದು ಗುರುವಿನ ಮಹಿಮೆಯನ್ನು, ಗುರು ಯಾತಕ್ಕೆ ಬೇಕು ಎನ್ನುವದನ್ನು ಬಹು ಅರ್ಥಗರ್ಭಿತವಾಗಿ ಸರ್ವಜ್ಞರು ತಮ್ಮ ತ್ರಿಪದಿಯಲ್ಲಿ ಹೇಳಿರುವರು.

ಗುರುವಿನ ಕೆಲಸ ಕ್ಲಿಷ್ಟಕರ. ಯಾಕೆಂದರೆ ಒಬ್ಬ ವ್ಯಕ್ತಿಯನ್ನು ಜಾಗರೂಕನನ್ನಾಗಿ ಮಾಡಲು, ಅವನನ್ನು ನಿದ್ರಾವಸ್ಥೆಯಿಂದ ಎಬ್ಬಿಸಲು ಗುರು ಬೇಕಾಗುತ್ತದೆ. ಆದರೆ ನಮಗೆ ನಿದ್ರೆ ಅತ್ಯಂತ ಪ್ರಿಯಕರವಾಗಿದೆ. ನಿದ್ರೆಯಲ್ಲಿ ಸುಂದರ ರಮಣೀಯವಾದ ಕನಸು ಕಾಣುತ್ತಿರುತ್ತೇವೆ. ಅದೇನಾದರೂ ಭಂಗವಾದರೆ, ಭಂಗಪಡಿಸಿದವರೆಲ್ಲಾ ನಮಗೆ ಶತ್ರುಗಳಂತೆ ಕಾಣುತ್ತಾರೆ. ಹೀಗಾಗಿ ಗುರುವಿನ ಕೆಲಸ ಕ್ಲಿಷ್ಟಕರ. ಆದರೆ ಗುರುವಿನ ಆಶೀರ್ವಾದದ ಸಾಕ್ಷತ್ಕಾರ ಉಂಟಾದರೆ ಮನುಷ್ಯನ ಅಜ್ಞಾನ ಹೋಗಿ ಸುಜ್ಞಾನಿ ಆಗುತ್ತಾನೆ. ಹೀಗೆ ಗುರುವಿನ ಅನುಗ್ರಹ ಪಡೆದ ಗುರು ಶಿಷ್ಯರ ಸಾವಿರಾರು ಕಥೆಗಳು ನಮ್ಮ ಪುರಾಣ ಪುಣ್ಯಕಥೆಗಳಲ್ಲಿ ಕಾಣಸಿಗುತ್ತವೆ.

ಆದಿಗುರು ಶಂಕರರು ತಮ್ಮ ‘ಗುರು ಅಷ್ಟಕ’ದಲ್ಲಿ “ನಿನಗೆ ಅತೀ ಸುಂದರ ಶರೀರವಿರಲಿ, ಸುಂದರವಾದ ಸತಿ ಇರಲಿ, ಯಶಸ್ಸು ಬಂದೊದಗಿರಲಿ, ಅಧಿಕಾರ ಹಣ ಸಂಪತ್ತು ಏನೇ ನಿನ್ನ ಬಳಿ ಇರಲಿ, ನಿನ್ನ ಮನಸ್ಸು ಗುರುವಿನ ಪಾದ ಪದ್ಮದಲ್ಲಿ, ಗುರುವಿನ ಚರಣದಲ್ಲಿ ಕೇಂದ್ರೀಕೃತವಾಗದಿದ್ದರೆ ನಿನ್ನ ಬಳಿಯಿರುವ ಯಾವುದೂ ಉಪಯೋಗವಿಲ್ಲದಂತೆ ಆಗುವುದು” ಎಂದು ಹಲವಾರು ದೃಷ್ಟಾಂತಗಳನ್ನು ಕೊಟ್ಟು ಗುರುವಿನ ಮಹತ್ವವನ್ನು ಲೋಕಕ್ಕೆ ಸಾರಿ ಸಾರಿ ಹೇಳಿರುವರು. ಎಲ್ಲವನ್ನೂ ಒಳಗೊಂಡ ಯಾವುದಾದರೂ ಸಿದ್ಧಾಂತವಿದ್ದರೆ ಅದು ಅದ್ವೈತ ಸಿದ್ಧಾಂತ. ಜೀವ ದೇವರಲ್ಲಿ ಬೇಧ ಕಾಣದ ಸಕಲ ಜೀವಿಗಳೆಲ್ಲಾ ಸಮಾನರು, ಜ್ಞಾನಕ್ಕೆ, ಅರಿವಿಗೆ ಯಾವುದೇ ಬಂಧನಗಳಿಲ್ಲ ಎಂದು ಸಾರಿದ ಮಹಾಯೋಗಿ ಶ್ರೀ ಶಂಕರರು. ಎಲ್ಲಕ್ಕಿಂತಲೂ ಮಿಗಿಲಾಗಿ ಜ್ಞಾನವೇ ಶ್ರೇಷ್ಠ, ಎಲ್ಲವೂ ಬ್ರಹ್ಮ, ಈ ಜಗತ್ತು ಕೇವಲ ಭ್ರಮೆ, ನಿನ್ನನ್ನು ನೀನು ಅರಿತುಕೋ, ಮತ್ತೊಬ್ಬರನ್ನು ಬದಲಾಯಿಸುವುದನ್ನು ಬಿಟ್ಟು ನೀನು ಬದಲಾದರೆ ಪರಿಪೂರ್ಣತೆ. ಭ್ರಮಾಲೋಕದಿಂದ ಸುಖವಿಲ್ಲ – ಹೀಗೆ ಶಂಕರರು ಜನಸಾಮಾನ್ಯರಿಗೆ ಅನೇಕ ಸಂದೇಶಗಳನ್ನು ನೀಡಿದ್ದಾರೆ, ಮಾರ್ಗದರ್ಶಕರಾಗಿದ್ದಾರೆ, ಬೋಧಕರಾಗಿದ್ದಾರೆ. ಇಂತಹ ಜಗದ್ಗುರುಗಳಿಗೆ ಗುರುಪೂರ್ಣಿಮೆಯಂದು ನಮನ ಸಲ್ಲಿಸೋಣ.

ಶ್ರುತಿ ಸ್ಮೃತಿ ಪುರಾಣಾನಾಂ ದೇವಾಲಯಂ
ಕರುಣಾಲಯಂ ನಮಾಮಿ ಭಗವತ್ಪಾದಂ
ಶಂಕರಂ ಲೋಕ ಶಂಕರಂ

***

ಪರಿಹಾರ

– ಹು.ವಾ. ಶ್ರೀಪ್ರಕಾಶ್

ನಮ್ಮ ಬೀದಿಯಲ್ಲಿ ಒಬ್ಬರು ಬಾಡಿಗೆ ಮನೆಯವರು ಬಂದ. ಮೇಲೆ ವಾತಾವರಣ ಬಹಳಷ್ಟು ಹಾಳಾಗಿಬಿಟ್ಟಿದೆ. ಅವರ ಬಗೆಗೆ ಎಲ್ಲರದೂ ಒಂಥೊಂದು ದೂರು ಇದ್ದದ್ದೇ.

"ಅಲ್ಲ. ನಮ್ಮ ಗಿಡದ ಹೂವು ನಮಗೇ ಸಿಗೋದಿಲ್ಲ ಈಗ. ಮೊನ್ನೆ ನಾವು ಹೊರಗೆ ಹೋಗಿದ್ದಾಗ ಪಕ್ಕದ ಖಾಲೀ ಸೈಟಿನ ನುಗ್ಗೇಕಾಯಿ ಏಲ್ಲಾ ಅವಳ ತಮ್ಮ ನ ಹತ್ರ. ಕುಯ್ಸಿದಾಳೆ"

"ಹೌದು, ಆ ಬಾಡಿಗೆ ಮನೆಯವರದ್ದು ಯಾವಾಗಲೂ ಒಂದಲ್ಲಾ ಒಂದು ಕಿರಿಕಿರಿ. ಕಾರು ರಸ್ತೆಯಲ್ಲಿ ಅಡ್ಡ ನಿಲ್ಲಿಸ್ತಾರೆ. ಸ್ವಲ್ಪ ಬದಿಯಲ್ಲಿ ನಿಲ್ಲಿಸ್ರಿ ಅಂತ ಎಷ್ಟು ಸರ್ತಿ ಹೇಳಿದೀನಿ."

"ನಾಯಿ ಸಾಕಲಿ, ಆದರೆ ಯಾರಯಾರೋ ಮನೆ ಮುಂದೆ ಕಕ್ಕಸ್ ಮಾಡಿಸ್ತಾರಲ್ಲ, ಗಲೀಜು"

"ಅಬ್ಬಾ.. ಆ ಮಕ್ಕಳು ಅದೇನು ತಂಟೆ..ಕೆಟ್ಟಬುದ್ಧಿ, ಕಲ್ಲು ತಗೊಂಡು ಕಾರ್ ಮೇಲೆ ಗೀಚ್ತಾವೆ..."

"ಡಿಸೋಜಾ ಮನೆ ಮುಂದಿನ ಮರದ ಹಲಸಿನ ಹಣ್ಣು ಯಾರೋ ತೆಗೆದಿದ್ದಾರಂತೆ.. ಇನ್ನ್ಯಾರು ಅವಳೇ ತಮ್ಮನ ಹತ್ರ ತೆಗೆಸಿರ್ತಾಳೆ. ಈಗ ಡಿಸೋಜ ೫೦೦೦ ರೂ ಸಿಸಿಟಿವಿ ತಂದು ಹಾಕೀಸ್ತಾ ಇಧ್ದಾರಂತೆ."

ಹೀಗೆ ಪುಂಖಾನುಪುಂಖವಾಗಿ ಒಬ್ಬೊಬ್ಬರಿಂದ ಒಂದೊಂದು ರೀತಿಯ ದೂರು ಅವರು ಬಂದ ಲಾಗಾಯ್ತುನಿಂದ ಕೇಳಿ ಬರುತ್ತಲೇ ಇದೆ.

ಆ ಮನೆ ಓನರ್ ಈ ಮನೆ ಬಾಡಿಗೆಗೆ ಕೊಟ್ಟು ನಮಗೆಲ್ಲ ತಲೆನೋವು ತಂದು ಮುಂಬೈಯಲ್ಲಿ ಹಾಯಾಗಿದ್ದಾನೆ. ಬೆಕ್ಕಿಗೆ ಗಂಟೆ ಕಟ್ಟುವವರು ಯಾರು ಅನ್ನುವ ಹಾಗೆ ಸಮಸ್ಯೆಗೆ ಪರಿಹಾರ ಕಾಣದೆ ಎಲ್ಲರೂ ಅವರೊಡನೆ ಜಗಳಾಡಿ ಬೇಸತ್ತು ಗೊಣಗಿಕೊಂಡು ಸುಮ್ಮನಾಗಿಬಿಟ್ಟಿದ್ದಾರೆ.

ಆ ಬಾಡಿಗೆಯವನು ಒಬ್ಬ ವ್ಯಾಪಾರಿ, ಹೆಂಡತಿ ಗಯ್ಯಾಳಿ. ಆವಳಿಗೊಬ್ಬ ತಮ್ಮ, ಆಗಾಗ ಬರುತ್ತಿರುತ್ತಾನೆ. ಇಬ್ಬರು ಗಂಡು ಮಕ್ಕಳೂ ಭಾರೀ ಉಡಾಳರು.

ಪಕ್ಕದ ಮನೆ ಶ್ರೀಕಂಠ ಬೆಳಗ್ಗೆ ವಾಕಿಂಗ್ ಹೋಗುವಾಗ ಈ ವಿಷಯವೆಲ್ಲ ಹೇಳಿ ಅವನ ಅಸಹನೆ ತೋಡಿ ಕೊಳ್ಳುತ್ತಿರುತ್ತಾನೆ. ಅವನ ಪಕ್ಕದ ಮನೆಯೇ ಈ ಬಾಡಿಗೆದಾರ ಬಿಸಿನೆಸ್‌ಮನ್‌ದು. "ನಮ್ಮ ಕರ್ಮ,.ಇವನೇನು ಮನೆ ಬಿಟ್ಟು ಹೋಗೋದಿಲ್ಲ. ಸಣ್ಣಪುಟ್ಟ ಕಿರಿಕಿರಿ, ನಿರಂತರ ಸಹಿಸಿಕೊಂಡಿರಲೇಬೇಕು. ರಾತ್ರಿ ಹನ್ನೊಂದಾದ್ರೂ ದೊಡ್ಡದಾಗಿ ಟೀವಿ ಹಾಕ್ಕೊಂಡು ಗಲಾಟೆ ಮಾಡ್ತಾ ಇರ್ತಾರೆ" ಆಂತ ಬೇಸರಪಟ್ಟ.

ಒಮ್ಮೆ ನಮ್ಮ ಬೀದಿಯ ಕೊನೆಯಲ್ಲಿರುವ ಜ್ಯೋತಿಷಿ ಭೀಮಾಚಾರ್‌ರವರ ಬಳಿಗೆ, ನನಗೂ ಅಸಕ್ತಿಯ ವಿಷಯವಾದ ಜ್ಯೋತಿಷ್ಯಕ್ಕೆ ಸಂಬಂಧಿಸಿದಂತೆ ಏನನ್ನೋ ಕೇಳಲು ಹೋಗಿದ್ದೆ. ಅವರು ಮತ್ತು ಅವರ ಫತ್ನಿಯ ಬಳಿ ಹೀಗೇ ಮಾತಾಡುತ್ತಿರುವಾಗ ಬಾಡಿಗೆ ಮನೆಯವರ ಸುದ್ದಿ ಬಂತು. ಅವರ ಬಗ್ಗೆ ಬಹಳ ದೂರುಗಳು ಬರುತ್ತವೆಂದು ಅವರ ಪತ್ನಿ ಹೇಳಿ, “ನಿಮಗೂ ಅಂತಹ ಅನುಭವ ಆಗಿದೆಯೇ” ಎಂದು ಕೇಳಿದರು.

“ವೈಯಕ್ತಿಕವಾಗಿ ನನಗೆ ಯಾವ ತೊಂದರೆ ಆಗಿಲ್ಲ. ಒಮ್ಮೊಮ್ಮೆ ಅವರ ನಾಯಿ ನಮ್ಮ ಮನೆ ಮುಂದೆಯೂ ಗಲೀಜು ಮಾಡಿರುತ್ತದೆ” ಅಂದೆ.

"ಇವರು ಬಹಳ ಸಹನೆ, ಯಾರೊಟ್ಟಿಗೂ ಜಗಳ ಆಡುವವರಲ್ಲ" ಅಂತ ಭೀಮಾಚಾರ್ ತಮ್ಮ ಪತ್ನಿಯತ್ತ ನೋಡಿ ನಕ್ಕರು.

ಕೆಲವು ದಿನ ಕಳೆದಿತ್ತು. ಪಕ್ಕದ ಮನೆ ಶ್ರೀಕಂಠ ಬಹಳ ಖುಷಿಯಲ್ಲಿ ಮನೆಗೆ ಬಂದ.

“ಏನೋ” ಅಂದೆ.

“ಸದ್ಯ ತೊಲಗ್ತಾ ಇದ್ದಾರೆ ಬಾಡಿಗೆ ಮನೆಯವ್ರು” ಅಂದ.

“ಹೌದಾ" ಅಂತ. ಆಶ್ಚರ್ಯ ವ್ಯಕ್ತಪಡಿಸಿದೆ.

"ಹೌದು ಕಣೋ.. ಮೊನ್ನೆ ಬಾಡಿಗೆಯವನು ಭೀಮಾಚಾರ್ ಹತ್ರ ಹೋಗಿದ್ದನಂತೆ. ಯಾಕೋ ಇತ್ತೀಚೆಗೆ ವ್ಯವಹಾರದಲ್ಲಿ ಸಮಸ್ಯೆ, ಹಣಕಾಸು ಸರಿಯಾದ ಸಮಯಕ್ಕೆ ಬರ್ತಾ ಇಲ್ಲ ಅಂತ. ಅದಕ್ಕೇ ಭೀಮಾಚಾರ್ ಜಾತಕ ನೋಡಿ ಶುಕ್ರನಿಗೆ ರಾಹು ಸಂಬಂಧ ಬಂದಿದೆ. ಈ ನೆಲ ಮನೆ ನಿಮಗೆ ಆಗಿಬರುವುದಿಲ್ಲ. ಈ ಮನೆ ಬಿಟ್ಟು ಮಹಡಿ ಮನೆಗೆ ಹೋಗುವುದೇ ಇದಕ್ಕೆ ಪರಿಹಾರ” ಅಂದರಂತೆ. ಹಾಗಾಗಿ ಮುಂದಿನ ತಿಂಗಳು ಮನೆ ಖಾಲಿ ಮಾಡ್ತಾರಂತೆ " ಅಂದ.

ಸುಲಭವಾಗಿ ಪರಿಹಾರ ಆಯ್ತಲ್ಲ ಅಂತ ನಕ್ಕೆ!

***

ಮೌನ ಸನ್ಮಾನ

– ಶಾಂತಿ ವಾಸು

ಮಗ್ಗುಲು ಬದಲಿಸಿ, ಹಂಬಲಿಸಿ, ಕಾದು,
ದೊರೆಯಿತಿಂದೆನಗೆ ಮೌನ ಸನ್ಮಾನ...
ಮೌನ ಮೌನ ಮೌನ
ಸಾಮ್ರಾಜ್ಯದ ಅಧಿಪತಿ ಈಗ ನಾ...

ಚಲಿಸುವ ಮೋಡಗಳ ದಾಟಿ, ಚಲಿಸದೆ ನಿಂತುದ
ಮೀರಿ ಮೇಲೇರಿದಲ್ಲಿ ಸಿಗುವ ಧೀರ ಮೌನ...
ಸಿಟ್ಟಿಲ್ಲ, ಸಿಡುಕಿಲ್ಲ ಹಂಗಿಲ್ಲದ ಹಕ್ಕಿಯ ವಿಶಾಲ
ರೆಕ್ಕೆಗೆ ಆಶ್ರಯ ನೀಡಿದ ನೆಮ್ಮದಿಯ ಮೌನ...

ಹಲವು ಧ್ರುವಗಳ ಹೊಂದಿ ಸಾಗುವ ಜೀವನ
ಯಾನಕೆ, ಕೃತಕ ಸೃಷ್ಟಿಯ ಗಂಭೀರ ಮೌನ...
ಹಾರುವಾಗ ಆಗಸದಿ ದೊರೆಯಿತು, ದೊರಕಿತೆನಗೆ,
ಮರೆತು ಮುಂದೆ ಸಾಗಿದ್ದ ಸತ್ಯಮೌನ...

ಅನ್ಯತೆಯ ಅನನ್ಯ ಕಲ್ಪನೆಯಲಿ ಉಬ್ಬಿ ತೇಲಲು,
ಗಾಢವಾಯಿತು ಪಯಣ ಪುಳಕಿತ ಮೌನ...
ಶಾಶ್ವತತೆಯ ಕೂಡುವಾಸೆಯಲೇ, ಹಸ್ತ ಚಾಚಿ
ಕರೆವ ವಿದೇಶ ಸ್ಪರ್ಶದನುಭವ ತಂದ ಆಶಾಮೌನ...

ವಿನೋದ, ಉಲ್ಲಾಸ, ಸಂಭ್ರಮದ ಎಲ್ಲೆ ದಾಟಿ,
ಆಸ್ವಾದಿಸಲು ಸಮಭಾವದ ಸತ್ವಮೌನ...
ಅಂತರಂಗದಾಳದ ಒಳನೋಟದಿ,
ಅನಾವರಣಗೊಳುವ ದೈವತ್ವ ತತ್ವಮೌನ...

ಸ್ಥಿರ ಉಲ್ಲಾಸದ ಸ್ಥಾಯಿ ಭಾವ, ಉಚ್ಛ್ರಾಯದಲಿ
ನೆಲೆ ನಿಂತು ನನ್ನೆದೆಯ ಮುಸುಕಿದ ಆ ಮೌನ...
ಇದೇ ಇದೇ ಇಲ್ಲಿರುವೆ, ಅಲ್ಲಿರುವೆನೆನುವ
ಗುರುವನ್ನು ಶಾವಾಳಗೆ ಕಾಣಿಸುವ ಆಧ್ಯಾತ್ಮ ಮೌನ...

***

ಮರೆಯಬಾರದ ಹೊಸಗನ್ನಡದ ಕವಿಗಳು

ನವೋದಯದ ಪ್ರಬಲ ದನಿ, ಜಾನಪದ ವಿದ್ವಾಂಸ, ಸ್ವಾತಂತ್ರ್ಯ ಹೋರಾಟಗಾರ, ನುಡಿಸೇವಕ

ಬೆಟಗೇರಿ ಕೃಷ್ಣಶರ್ಮ (ಆನಂದಕಂದ)

– ಮಹಾಬಲ

ಎನಿತು ಇನಿದು ಈ ಕನ್ನಡ ನುಡಿಯು
ಮನವನು ತಣಿಸುವ ಮೋಹನ ಸುಧೆಯು!

ಗಾನವ ಬೆರೆಯಿಸಿ
ವೀಣೆಯ ದನಿಯೊಳು
ವಾಣಿಯ ನೇವುರ
ನುಡಿಸುತೆ ಕುಣಿಯಲು
ಮಾಣದೆ ಮೆರೆಯುವ ಮಂಜುಲ ರವವೋ?
ಎನಿತು ಇನಿದು ಈ ಕನ್ನಡ ನುಡಿಯು !

ರಂಗನ ಮುರಲಿಯ
ಹಿಂಗದ ಸರದಲಿ
ಹೆಂಗಳೆಯರು ಬೆಳ
ದಿಂಗಳಿರುಳಲಿ
ಸಂಗೀತವನೊರೆದಂಗವಿದೇನೋ?
ಎನಿತು ಇನಿದು ಈ ಕನ್ನಡ ನುಡಿಯು!

ಗಿಳಿಗಳು ಉಲಿಯುವ
ಮೆಲುಮಾತುಗಳೋ
ಕಳಕಂಠಗಳಾ
ಚೆಲುವಿನ ಕುಕಿಲೊ?
ಅಳಿಗಳ ಬಳಗದ ಬೆಳಗಿನ ಉಲಿಯೋ?
ಎನಿತು ಇನಿದು ಈ ಕನ್ನಡ ನುಡಿಯು!

ಒಂದು ಕಾಲದಲ್ಲಿ ಜನರ ನಾಲಗೆಯಲ್ಲಿ ನಲಿದಾಡುತ್ತಿದ್ದ ಈ ಭಾವಪೂರ್ಣ ಹಾಗೂ ಕನ್ನಡ ನುಡಿಯ ಮೇಲೆ ಅಭಿಮಾನ ಉಕ್ಕಿಸುವಂತಹ ಗೀತೆಯನ್ನು ಬರೆದವರು ನವೋದಯ ಕಾಲದ ಪ್ರಸಿದ್ಧ ಕವಿಗಳೂ ಜನಪದ ಸಾಹಿತ್ಯದ ಅಧ್ಯಯನಶೀಲರೂ, ಸ್ವಾತಂತ್ರ ಹೋರಾಟಗಾರರೂ, ಪತ್ರಕರ್ತರೂ, 'ಆನಂದಕಂದ' ಎಂಬ ಕಾವ್ಯನಾಮದಿಂದ ಜನಜನಿತರಾಗಿದ್ದವರೂ ಆದ ಬೆಟಗೇರಿ ಕೃಷ್ಣಶರ್ಮ ಅವರು.

ಜೀವನ:

ಬೆಟಗೇರಿಯವರು ಬೆಳಗಾವಿ ಜಿಲ್ಲೆಯ ಗೋಕಾಕ ತಾಲೂಕಿನ ಬೆಟಗೇರಿ ಗ್ರಾಮದಲ್ಲಿ 1900ರ ಏಪ್ರಿಲ್ 18ರಂದು ಜನಿಸಿದರು. ತಂದೆ ಶ್ರೀನಿವಾಸರಾಯರು, ತಾಯಿ ರಾಧಾಬಾಯಿ.

ಕೃಷ್ಣಶರ್ಮರದ್ದು ಒಂದು ಹೋರಾಟದ ಬದುಕು. ಅಣ್ಣ ಹನುಮಂತರಾಯ 18ನೆಯ ವರ್ಷಕ್ಕೇ ತೀರಿಕೊಂಡರು. ಸ್ವತಃ ಕೃಷ್ಣಶರ್ಮರಿಗೆ 14ನೆಯ ವಯಸ್ಸಿನಲ್ಲಿ ವಿಷಮಶೀತ ಜ್ವರ ಹಾಗೂ 15ನೆಯ ವಯಸ್ಸಿಗೆ ಪ್ಲೇಗ್‌ನಿಂದ ಬಳಲಿ ಜೀವನುದ್ದಕ್ಕೂ ದುರ್ಬಲ ಕೈ-ಕಾಲುಗಳನ್ನು ಹೊಂದಬೇಕಾಯಿತು. 1928ರಲ್ಲಿ ತುಳಸೀಬಾಯಿಯೊಂದಿಗೆ ಮದುವೆ. ಕೃಷ್ಣಶರ್ಮರು 56ನೆಯ ವಯಸ್ಸಿನವರಿದ್ದಾಗ ಮಗಳು ಹಾಗೂ ಮರು ವರ್ಷವೇ ಪತ್ನಿ ತೀರಿಹೋದರು.

5ನೇ ತರಗತಿವರೆಗೆ ಬೆಟಗೇರಿಯಲ್ಲಿ ಪ್ರಾಥಮಿಕ ಶಿಕ್ಷಣ, ನಂತರ ಕಂಪಿಸುವ ಕೈ-ಕಾಲುಗಳೊಂದಿಗೇ ದೂರದ ಮುಮದಾಪುರಕ್ಕೆ ದಿನಾಲು ತೆರಳಿ ಪ್ರೌಢ ಶಿಕ್ಷಣ ಪೂರ್ಣಗೊಳಿಸಿದರು. ಮುಂದೆ ಬೆಳಗಾವಿಯಲ್ಲಿ ಮುಲ್ಕಿ ಪರೀಕ್ಷೆ ತೇರ್ಗಡೆಯಾದರು. 1918ರಲ್ಲಿ ಬೆಳಗಾವಿಯ ಮುನಿಸಿಪಾಲಿಟಿಯಲ್ಲಿ ಕೆಲಸ ಸಿಕ್ಕಿತು. ಅದು ಮನೆಮನೆಗಳಿಗೆ ಹೋಗಿ ಇಲಿ ಹಿಡಿಯುವ ಕೆಲಸ. ನಂತರ ಈ ಕೆಲಸ ತೊರೆದು ಕಿತ್ತೂರಿನಲ್ಲಿ ಸಂಸ್ಕೃತ ಅಧ್ಯಯನ ಮಾಡಿ ಶಿಕ್ಷಕರಾದರು. ಮತ್ತೆ ಕೆಲಸ ತೊರೆದು ಧಾರವಾಡ, ನಂತರ ಬೆಂಗಳೂರಿನಲ್ಲಿ ಕೆಲಸ ಮಾಡಿ, ಮತ್ತೆ ಧಾರವಾಡಕ್ಕೆ ಮರಳಿ 'ಜಯಂತಿ' ಪತ್ರಿಕೆಯ ಸಂಪಾದಕರಾದರು.

ಉತ್ತರ ಕರ್ನಾಟಕದ ಭಾಗದಲ್ಲಿ 1900ರ ಮೊದಲ ನಾಲ್ಕು ದಶಕಗಳಷ್ಟು ಕಾಲದಲ್ಲಿ ಮರಾಠಾ ಸಂಸ್ಥಾನದ ಆಳ್ವಿಕೆಯ ಕಾರಣ ಮರಾಠಿಯು ಕನ್ನಡದ ಮೇಲೆ ಡೌಲು ನಡೆಸಿತ್ತು. ಇಂಥ ವಿಷಮ ಸನ್ನಿವೇಶದಲ್ಲಿ ಆನಂದಕಂದರೂ ಸೇರಿದಂತೆ ಹಲವಾರು ಗೆಳೆಯರ ಗುಂಪಿನ ಸದಸ್ಯರು ಕನ್ನಡ ಭಾಷೆ ಹಾಗೂ ಸಂಸ್ಕೃತಿಯ ಪುನರುತ್ಥಾನದ ಕಾರ್ಯವನ್ನು ಸಮರ್ಥವಾಗಿ ನಿರ್ವಹಿಸಿದರು ಎಂಬುದು ಉಲ್ಲೇಖನಾರ್ಹ.

ಕೃತಿಲೋಕ:

ಭಾವಗೀತ, ನಲ್ವಾಡುಗಳು ಸೇರಿದಂತೆ ಒಟ್ಟು 14 ಕವನ ಸಂಕಲನಗಳು, ಸಂಸಾರದ ಚಿತ್ರ ಹಾಗೂ ಬಡತನದ ಬಾಳು ಸೇರಿದಂತೆ ಒಟ್ಟು 8 ಕಥಾ ಸಂಕಲನಗಳು, ಸುದರ್ಶನ, ರಾಜಯೋಗಿ ಸೇರಿದಂತೆ ಒಟ್ಟು 5 ಕಾದಂಬರಿಗಳು, ಬೆಳವಡಿ ಮಲ್ಲಮ್ಮ, ಬೆಂದ ಹೃದಯ, ಮುಂಡರಗಿಯ ಗಂಡುಗಲಿ, ಪಂಚಗಂಗಾ (ಆಕಾಶವಾಣಿ ತರಂಗ ರೂಪಕಗಳು) ಕನ್ನಡ ರಾಜ್ಯ ರಮಾರಮಣ-ಚರಿತ್ರೆ, ಕನ್ನಡ ಜನಪದ ಸಾಹಿತ್ಯ ಹಾಗೂ ಬೀಸುಕಲ್ಲಿನ ಪದಗಳು ಇವರ ಕೃತಿಗಳು. ಪೂಜಾತತ್ವ, ಲೋಕನೀತಿ ಸೇರಿದಂತೆ ಒಟ್ಟು 11 ಸಂಪಾದಿತ ಕೃತಿಗಳು, ಅಷ್ಟೇ ಅಲ್ಲದೆ ಮಕ್ಕಳ ಸಾಹಿತ್ಯ, ವಿಮರ್ಶೆ-ಸಂಶೋಧನೆ ವಲಯದಲ್ಲೂ ಹತ್ತು ಹಲವು ಕೃತಿಗಳನ್ನು ರಚಿಸಿದ್ದಾರೆ.

"ನನ್ನ ನೆನಪುಗಳು" ಬೆಟಗೇರಿಯವರ ಆತ್ಮಚರಿತ್ರೆಯ ಹೆಸರು.

ಬೆಟಗೇರಿಯವರ ಕಾವ್ಯ ವಿಶಿಷ್ಟವಾದದ್ದು. ಅವರು ನವೋದಯ ಕಾಲಘಟ್ಟದ ಪ್ರಬಲ ದನಿ. ಜಾನಪದೀಯ ಮೌಲ್ಯವನ್ನು ಪ್ರತಿಬಿಂಬಿಸುವ ಅವರ ಒಂದು ಕವನದ ಸಾಲುಗಳಿವು:

"ಗೋದಿ ಬೀಜಕ್ಕಂತ ಗೋಕಾಂವಿಗ್ಹೋಗಿದ್ದೆ
ಸಾದಗಪ್ಪಿನ ಸವಿಹೆಣ್ಣ
ಸಾದಗಪ್ಪಿನ ಸವಿಹೆಣ್ಣ ನೋಡುತಲೆ
ಗೋದಿ ಬಿತ್ತಿಗಿಯ ಮರತೆನೊ"

ಮತ್ತೊಂದು ಕವನದ ಸಾಲುಗಳು ಇವು:

ನಮ್ಮ ಹಳ್ಳಿಯೂರs ನಮಗ ಪಾಡs

ಯಾತಕವ್ವಾ ಹುಬ್ಬಳ್ಳಿ–ಧಾರ್ವಾಡs

ಊರ ಮುಂದ ತಿಳಿನೀರಿನ ಹಳ್ಳs

ಬೇವು ಮಾವು ಹುಲಗಲ ಮರಚೆಳ್ಳs

ದಂಡಿಗುಂಟ ನೋಡು ನೆಳ್ಳs ನೆಳ್ಳs

ನೀರ ತರುವಾಗ ಗೆಣತ್ಯಾರ ಜೋಡs.

ಯಾತಕವ್ವಾ ಹುಬ್ಬಳ್ಳಿ–ಧಾರ್ವಾಡs. .

ಕವಿಯ ಹುಟ್ಟೂರಿನ ಹಂಬಲ ಯಾವ ಪಂಪನಿಗೂ ಕಡಿಮೆಯದೇನೂ ಅಲ್ಲ.

'ಮಾಯದ ನೋವು' ಎಂಬ ಶೋಕಗೀತೆಯಲ್ಲಿ ಸರ್ದಾರ್ ವಲ್ಲಭಭಾಯ್ ಪಟೇಲರನ್ನು ಕವಿ ನೆನೆಸಿಕೊಳ್ಳುವ ರೀತಿ ಇದು:

ಶಕ್ತಿದೈವತದ ಬಲಗೈಯ ಕರವಾಲವೇ,
ಮುಕ್ತಿಯಲಿ ಹಗೆಯ ಬಂಧಿಸುವಿಂದ್ರಜಾಲವೇ,
ದಿಕ್ಕು–ದಿಕ್ಕುಗಳ ರಕ್ಷಿಸಿದೇಕ ದಿಗ್ಗಜವೆ
ಭರತರಾಷ್ಟ್ರದ ಧೈರ್ಯಪುರುಷ ಕೀರ್ತಿಧ್ವಜವೆ!

ಭಾಯಿ, ವಲ್ಲಭಭಾಯಿ, ಭಾರತಿಯ ಕಣ್ಮಣಿ
ನಿನ್ನನೂ ಕಬಳಿಸಿದಳೇ ಮೃತ್ಯುರಾಣಿ?

ಕರ್ನಾಟಕ ವಿಶ್ವವಿದ್ಯಾಲಯವು ಕೃಷ್ಣಶರ್ಮರಿಗೆ ಗೌರವ ಡಿ.ಲಿಟ್ ಪದವಿ ನೀಡಿ ಗೌರವಿಸಿದೆ. ಕರ್ನಾಟಕ ಸಾಹಿತ್ಯ ಅಕಾಡೆಮಿ ಪ್ರಶಸ್ತಿ, ಜಾನಪದ ಸಮ್ಮೇಳನದ ಅಧ್ಯಕ್ಷತೆ, ವೈದ್ಯಕೀಯ ಸಾಹಿತ್ಯ ಸಮ್ಮೇಳನದ ಅಧ್ಯಕ್ಷತೆ ಮುಂತಾದ ಗೌರವಗಳು ಸಂದಿವೆ. ಕರ್ಣಾಟಕ ಸರಕಾರ ಬೆಟಗೇರಿ ಕೃಷ್ಣಶರ್ಮ ಟ್ರಸ್ಟ್ ಸ್ಥಾಪಿಸುವ ಮೂಲಕ ಅವರ ಸಾಧನೆಗಳನ್ನು ಹೊಸ ಪೀಳಿಗೆಗೆ ಪರಿಚಯಿಸುವ ಕೆಲಸ ಮಾಡುತ್ತಿದೆ. ಈ ಟ್ರಸ್ಟ್ ಆನಂದಕಂದರ ಸಮಗ್ರ ಕಾವ್ಯವನ್ನು "ಬೆಳುವಲದ ಸುಗ್ಗಿ" ಎಂಬ ಹೆಸರಿನಲ್ಲಿ ಪ್ರಕಟಿಸಿ ಸ್ತುತ್ಯವಾದ ಕೆಲಸ ಮಾಡಿದೆ.

ಕೃಷ್ಣಶರ್ಮರು ಧಾರವಾಡದ ತಮ್ಮ ಮನೆಯಲ್ಲಿ 1982ರ ಅಕ್ಟೋಬರ್ 30ರಂದು ಭೌತಿಕವಾಗಿ ನಮ್ಮಿಂದ ದೂರವಾದರು.

ಕನ್ನಡ ನೆಲದ ಇಂಥ ಬಹುಮುಖ ಸಾಧಕರನ್ನು ಸದಾ ಸ್ಮರಿಸುವುದು ಎಲ್ಲ ನುಡಿಪ್ರೇಮಿಗಳ ಆದ್ಯ ಕರ್ತವ್ಯವಾಗಿದೆ.

***

ಸುಸ್ತು ಶಾಸ್ತ್ರ

– ಜಿ.ವಿ. ನಿರ್ಮಲ

ಏನಾದ್ರೂ ಹೇಳಿ. ಈಗೀಗ ವಾಸ್ತು ಶಾಸ್ತ್ರಕ್ಕೆ ಸಿಕ್ಕಾಪಟ್ಟೆ ಪ್ರಚಾರ, ವಿಪರೀತ ಮಹತ್ವ, ಇದರ ವ್ಯಾಪ್ತಿ ಪ್ರಜ್ಞಾವಂತರಿಂದ ಅಜ್ಞಾನಿಗಳವರೆಗೆ, ಅಕ್ಷರಸ್ಥರಿಂದ ಅನಕ್ಷರಸ್ಥರವರೆಗೆ, ವಿಧಾನಸೌಧದಿಂದ ಗುಡಿಸಿಲಿನವರೆಗೆ ಹಬ್ಬಿದೆ. ಭಾರತದಲ್ಲಿ ಯಾರಿಗಾದರೂ ಕ್ರಿಕೆಟ್ ಆಟದ ಬಗ್ಗೆ ಗೊತ್ತಿಲ್ಲ ಎಂದರೆ ಇದ್ಯಾವುದೋ ಅನ್ಯ ಗ್ರಹದಿಂದ ಬಂದಿರುವ ಪ್ರಾಣಿ ಎಂದು ಕೆಕ್ಕರಿಸಿ ನೋಡುವಂತೆ ವಾಸ್ತು ಶಾಸ್ತ್ರವೂ ದಿನದಿನಕ್ಕೆ ತನ್ನ ಸ್ಥಾನಮಾನವನ್ನು ಏರಿಸಿಕೊಂಡು, ಅತಿ ಎತ್ತರಕ್ಕೇರಿ ಸರ್ವಾಂತರ್ಯಾಮಿಯಾಗಿದೆ.

ಸ್ವಲ್ಪ ಸಮಯದ ಹಿಂದೆ ನಮ್ಮ ಮನೆಯೊಂದು ಬಾಡಿಗೆಗೆ ಇತ್ತು. ನಮ್ಮ ಹಾಲಿನವ ಒಬ್ಬ ಹವ್ಯಾಸಿ ಬ್ರೋಕರ್. ಅವನು ಆ ಮನೆಯ ಮುಂಬಾಗಿಲು 'ನಂದಿಯ ಬಾಗಿಲೇ' ಎಂದು ಕೇಳಿದ. ನಾನು ಬಾಗಿಲನ್ನು ತಯಾರಿಸಿರುವುದು ನಂದಿ ಮರದಿಂದಲೇ ಎಂದು ಕೇಳುತ್ತಿರುವನೇ? ಅದು ನನಗೆ ಗೊತ್ತಿಲ್ಲವಲ್ಲ ಎಂದು ಕಣ್ಣುಕಣ್ಣು ಬಿಡುತ್ತಾ ನಿಂತೆ. ಮರುಕ್ಷಣವೇ ಅವನು 'ಮನೆಯ ತಲೆಬಾಗಿಲು ಉತ್ತರಕ್ಕಿದೆಯೇ? ಹಾಗಿದ್ರೆ ಅದು ನಂದಿ ಬಾಗಿಲು' ಎಂದ. ಹೀಗೆ ನನಗೆ ಮೊತ್ತಮೊದಲ ವಾಸ್ತು ಶಾಸ್ತ್ರದ ಪಾಠವಾಯಿತು.

ಮತ್ತೊಂದು ದಿನ ಟಿವಿ ವಾಹಿನಿಯಲ್ಲಿ ಸಾಲಂಕೃತ ಮಹಾಶಯರೊಬ್ಬರು ಭವಿಷ್ಯ ನುಡಿಯುತ್ತಿದ್ದರು. ಏನು ಹೇಳುತ್ತಿರುವರೋ ಎನ್ನುವ ಕುತೂಹಲದಿಂದ ಸ್ವಲ್ಪ ಕೇಳಿಸಿಕೊಂಡೆ. ಪ್ರಶ್ನೆ ಕೇಳಿದ ಹೆಣ್ಣು ಧ್ವನಿ ತನ್ನ ಮಗನಿಗೆ ಓದು ಹತ್ತುತ್ತಿಲ್ಲವೆಂದು ಪೇಚಾಡಿ, ಕಾರಣವೇನಿರಬಹುದೆಂದು ಕೇಳಿದರು. ಕೂಡಲೆ ಭವಿಷ್ಯಕಾರರು 'ನಿಮ್ಮ ಮನೆಯ ತಲೆಬಾಗಿಲು ಯಾವ ದಿಕ್ಕಿನಲ್ಲಿದೆ?' ಎಂದು ಕೇಳಿದರು. ಆ ಫೋನ್‌ವಾಣಿ ದಿಕ್ಕು ಹೇಳಿದ ಕೂಡಲೇ, 'ಅದಕ್ಕೇ ನಿಮ್ಮ ಮಗನಿಗೆ ಓದು ಹತ್ತುತ್ತಿಲ್ಲ' ಎಂದು ಹೇಳೇಬಿಟ್ಟರು. ನನಗೆ ಇದೆಂತಹ ವಾಸ್ತು ಶಾಸ್ತ್ರ ಎಂದು ಗಲಿಬಿಲಿಯಾಗಿ ಸುಸ್ತಾಗಿದ್ದೂ ನಿಜ. ಹೀಗೆ ವಾಸ್ತು ಶಾಸ್ತ್ರದ ಬಗ್ಗೆ ಹೇಳುತ್ತಾ, ಕೇಳುತ್ತಾ ಹೋದರೆ ಎಷ್ಟೋ ಬಾರಿ ಸುಸ್ತಾಗುತ್ತದೆ. ಅಲ್ಲವೇ? ಅದಕ್ಕೇ ಈಗ ನಾನು ನೇರವಾಗಿ ಸುಸ್ತು ಶಾಸ್ತ್ರವನ್ನೇ ನಂಬುತ್ತೇನೆ.

ಇದೀಗ ಸುಸ್ತು ಶಾಸ್ತ್ರವೆಂದರೇನು ಎಂದು ಕಣ್ಣು ಬಿಡುವ ಸರದಿ ನಿಮ್ಮದಾಯಿತೆ? ಒಳ್ಳೆಯದು. ಸುಸ್ತು ಶಾಸ್ತ್ರ ನನ್ನದೇ ಹೊಸ ಅವಿಷ್ಕಾರ. ಅದರ ಬಗ್ಗೆ ಹೇಳಲು ನನಗೆ ಮಾತ್ರ ಸಾಧ್ಯ. ಪೇಟೆಂಟ್ ಪಡೆಯುವ ಆಲೋಚನೆಯೂ ಇದೆ. ಆದರೆ ಅಂತಹ ಗುಟ್ಟೇನೂ ಇಲ್ಲ ಬಿಡಿ. ನಿಮ್ಮ ಮುಂದೆ ಹೇಳಿ, ನಿಮ್ಮೆಲ್ಲರ ಅಭಿಪ್ರಾಯ ಪಡೆದ ನಂತರ ಸುಸ್ತು ಶಾಸ್ತ್ರವೂ ವಾಸ್ತುಶಾಸ್ತ್ರದ ಒಂದು ಭಾಗವೇ ಅಥವಾ ಅದಕ್ಕಿಂತ ಉತ್ತಮವೇ ಎಂದು ಎಲ್ಲರೂ ಒಟ್ಟಾಗಿ ನಿರ್ಧರಿಸೋಣ. ಈಗ ಜನರ ಹಿತಕ್ಕಿಂತ ಜನಾಭಿಪ್ರಾಯವೇ ಮುಖ್ಯವಲ್ಲವೇ?

ಮೊದಲ ನಿಯಮ ಮನೆಯ ತಲೆಬಾಗಿಲಿನ ದಿಕ್ಕು ನಿರ್ಧರಿಸುವುದು. ಅದು ಯಾವುದೇ ದಿಕ್ಕಿನಲ್ಲಿದ್ದರೂ ಸರಿ ಆಂಬುಲೆನ್ಸ್ ಅಥವಾ ಯಾವುದೇ ಗಾಡಿಯನ್ನು ತಲೆಬಾಗಿಲ ಬಳಿ ತರಲು ನೇರ ರಸ್ತೆ ಇರಲೇಬೇಕು. ತುರ್ತು ಪರಿಸ್ಥಿತಿಯಲ್ಲಿ ಮನೆಯವರನ್ನು ಆಸ್ಪತ್ರೆಗೆ ಸೇರಿಸುವಾಗ ಯಾವುದೇ ಬಗೆಯ ತೊಂದರೆಯಾಗಬಾರದು ಎನ್ನುವುದೇ ಇದರ ಹಿಂದಿರುವ ಉದ್ದೇಶ. ಇತ್ತೀಚಿಗೆ ನಡೆದ ಒಂದು ಪ್ರಸಂಗ. ಒಂದು ಮನೆಯ ತಲೆಬಾಗಿಲು ಅಪ್ಪಟ ವಾಸ್ತು ಶಾಸ್ತ್ರದಂತೆ ಸರಿಯಾದ ದಿಕ್ಕಿನಲ್ಲಿದ್ದು ಅದನ್ನು ತಲುಪಲು ಸಣ್ಣ ಓಣಿಯಲ್ಲಿ ಹೋಗಬೇಕಾಗಿತ್ತು. ಧಡೂತಿಯಾಗಿದ್ದ

ಮನೆಯ ಯಜಮಾನ ಅಸ್ವಸ್ಥನಾಗಿ ಸಾವು–ಬದುಕುಗಳ ನಡುವೆ ಓಲಾಡುತ್ತಾ, ನರಳಾಡುತ್ತಿದ್ದಾಗ ಆತನನ್ನು ಮನೆಯೊಳಗಿಂದ ಹೊತ್ತು ತಂದು ವಾಹನದಲ್ಲಿ ಮಲಗಿಸುವ ಹೊತ್ತಿಗೆ ಆತನ ಜೀವ ಮಾತ್ರವಲ್ಲ, ಆತನ ತೂಕದ ದೇಹ ಹೊತ್ತವರದ್ದೂ ಅರೆಜೀವವಾಗಿತ್ತು. ಆಸ್ಪತ್ರೆ ತಲುಪುವುದರೊಳಗೆ ನಿರ್ಜೀವವಾದ ದೇಹವನ್ನು ಮತ್ತೆ ವಾಪಸ್ಸು ಮನೆಯೊಳಗೆ ತರುವುದೂ ಅಷ್ಟೇ ಸಾಹಸದ ಕೆಲಸವಾಯ್ತು. ಅದಕ್ಕಾಗಿ ಮನೆಯ ಗೇಟಿನಿಂದ ಮನೆಯ ತಲೆಬಾಗಿಲಿಗೆ ಇರುವ ರಸ್ತೆಯಲ್ಲಿ ತಿರುವುಗಳು, ಓಣಿಗಳು ಇರಲೇಬಾರದೆನ್ನುವುದೂ, ಸಾಕಷ್ಟು ಹತ್ತಿರದಲ್ಲಿ ಇರಬೇಕೆನ್ನುವುದೂ ಸುಸ್ತು ಶಾಸ್ತ್ರದ ಅಧಿನಿಯಮ.

ಈಗೀಗ ಮನೆಯೊಳಗೆ ಅಲ್ಲಲ್ಲಿ ತಗ್ಗು–ಎತ್ತರಗಳಿದ್ದು ಮೆಟ್ಟಿಲುಗಳಿರುತ್ತವೆ. ಇದು ಸುಸ್ತು ಶಾಸ್ತ್ರದಂತೆ ಅಶುಭ. ಇತ್ತೀಚೆಗೆ ವೈದ್ಯಲೋಕದ ಹಲವಾರು ಸಂಶೋಧನೆಗಳಿಂದ, ಕಾಳಜಿಯಿಂದ ಮನುಷ್ಯನ ಆಯಸ್ಸು ವೃದ್ಧಿಸಿರುವುದು ಎಲ್ಲರಿಗೂ ತಿಳಿದಿರುವ ಸತ್ಯವೇ. ಹೀಗೆ ಅಧಿಕವಾದ ಆಯುಸ್ಸಿನ ತಾಪತ್ರಯಗಳಲ್ಲಿ ಕಣ್ಣು ಮಂಜಾಗುವುದು, ಕಿವಿ ಮಂದವಾಗುವುದು, ಮಂಡಿ, ಕಾಲು, ಕೀಲು ನೋವುಗಳಾಗುವುದು ಕಟ್ಟಿಟ್ಟ ಬುತ್ತಿ. ವಯೋವೃದ್ಧರಿಗೆ ಮನೆಯ ಮೂರೂಕಡೆ ಮೆಟ್ಟಿಲುಗಳಿದ್ದರೆ ಕ್ಷಣಕ್ಷಣವೂ ಓಡಾಡುವುದೇ ಪ್ರಮಾದವೆನಿಸುತ್ತದೆ. ಇನ್ನು ಅಂಬೆಗಾಲಿಡುವ ಮಗುವಿಗೆ, ಆಡುವ ಮಕ್ಕಳಿಗೆ, ವಯಸ್ಸಿನ ಅಹಂನಲ್ಲಿ ಮೊಬೈಲ್ ಹಿಡಿದೇ ಓಡಾಡುವ ಯುವಜನಾಂಗ ಹಾಗೂ ಗಡಿಬಿಡಿಯ ಗೃಹಿಣಿಯರಿಗೆ ಈ ಮೆಟ್ಟಿಲುಗಳು ಸುಖವೇ? ಆದ್ದರಿಂದ ಸಪಾಟಾದ ನೆಲವೇ ಶ್ರೇಷ್ಠವೆನ್ನುತ್ತದೆ ಸುಸ್ತು ಶಾಸ್ತ್ರ. ಮಹಡಿ ಮೆಟ್ಟಿಲುಗಳಿಗೂ ಕೈಹಿಡಿಕೆಗಳಿರಲೇಬೇಕು ಎನ್ನುವುದು ಸುಸ್ತು ಶಾಸ್ತ್ರದಲ್ಲಿ ಕಡ್ಡಾಯ.

ಇನ್ನು ಮನೆಯ ನೆಲ ಅತಿ ನುಣುಪಾಗಿ ಜಾರುವಂತಿರಲೇಬಾರದು ಎನ್ನುವುದು ಸುಸ್ತ್ರು ಶಾಸ್ತ್ರದ ಮುಂದಿನ ನಿಯಮ. ನೋಡಲು ಚೆಂದವೆಂದು ದುಬಾರಿಯಾದ, ನುಣ್ಣಗೆ ಪಳಪಳ ಹೊಳೆಯುವ ನೆಲ 'ದುಡ್ಡು ಕೊಟ್ಟು ದುಃಖ ಕೊಂಡಂತೆ' ಎನ್ನುವ ಗಾದೆಯಂತೆ. ಮನೆಯವರು ಗಡಿಬಿಡಿಯಿಂದ ಓಡಾಡುವಾಗ ಜಾರಿ ಬಿದ್ದರೆ ಮೂಳೆ ಮುರಿಯುವುದು ಖಚಿತ. ನೆಲಕ್ಕೂ ದುಡ್ಡು, ಬಿದ್ದು ಮೂಳೆ ಮುರಿದರೆ ಆಸ್ಪತ್ರೆಗೂ ದುಡ್ಡು. ಇದನ್ನು ಡಬಲ್ ಧಮಾಕಾ ಎನ್ನುತ್ತದೆ ಸುಸ್ತು ಶಾಸ್ತ್ರ.

ಇನ್ನು ಮನೆಯ ಕೋಣೆಗಳಿಗೆ ಗಾಳಿ, ಬೆಳಕು ಧಾರಾಳವಾಗಿರಬೇಕು ಎನ್ನುವುದನ್ನು ಸುಸ್ತು ಶಾಸ್ತ್ರವೂ ಒಪ್ಪುತ್ತದೆ. ಆದರೆ ಚಿಕ್ಕ ಚಿಕ್ಕ ನಿವೇಶನಗಳಲ್ಲಿ ಒತ್ತೊತ್ತಿಗೆ ಮನೆ ಕಟ್ಟುವಾಗ ಮನೆಯೊಳಗೆ ಧಾರಾಳವಾಗಿ ಬೆಳಕು, ತಾಜಾ ಗಾಳಿ ತೂರಲು ಸಾಧ್ಯವೇ ಇಲ್ಲ. ಮನೆಯ ಹೊರಗಿನ ಗಾಳಿಯೂ ಅಂತಹ ಶುದ್ಧವಿಲ್ಲ ಎಂದು ವಾದಿಸಬಹುದು. ಹಾಗೆಂದು ಸದಾಕಾಲ ಹವಾ ನಿಯಂತ್ರಿತ ವಾತಾವರಣ ಆರೋಗ್ಯಕ್ಕೆ ಹಾನಿಕರ. ಸದಾಕಾಲ ಕೃತಕ ದೀಪದಡಿ ಇರುವುದೂ ಆರೋಗ್ಯಕ್ಕೆ, ವಿಶೇಷವಾಗಿ ಕಣ್ಣಿನ ಆರೋಗ್ಯಕ್ಕೆ ಹಾನಿಕಾರಕ. ಆದ್ದರಿಂದ ಮನೆಯ ಒಂದು ಕೊಠಡಿಯಾದರೂ ಹವಾ ನಿಯಂತ್ರಣವಿಲ್ಲದೆ ಮುಕ್ತ ವಾತಾವರಣಕ್ಕೆ ತೆರೆದುಕೊಂಡಿದ್ದು, ಹಗಲು ಹೊತ್ತು ಸಾಕಷ್ಟು ಸೂರ್ಯನ ಬೆಳಕು ಬರುವಂತಿರಬೇಕು. ಇದು ಸುಸ್ತು ಶಾಸ್ತ್ರದ ಮತ್ತೊಂದು ನಿಯಮ.

ಮನೆಗೆ 'ಓಪೆನ್ ಕಿಚನ್' ಈಗಿನ ಫ್ಯಾಷನ್. ಇದು ಗೃಹಿಣಿಗೆ ಮಾಡುವ ವಿಶೇಷ ಸನ್ಮಾನ. ಆಕೆ ಅಲ್ಲಿಂದಲೇ ಟಿವಿ ನೋಡಲಿ ಎಂದು ಮಾಡುವ ವ್ಯವಸ್ಥೆ ಎಂದರೂ ನನಗೆ ಅಲ್ಲೇ ಅನುಮಾನದ ಕುಡಿ ಒಡೆಯುತ್ತದೆ. ಸುಸ್ತು ಶಾಸ್ತ್ರವಂತೂ ಇದು ಶುದ್ಧ ಅವ್ಯವಸ್ಥೆ ಎಂದು ಸಾರುತ್ತದೆ. ಇಷ್ಟೇ ಸಾಲದೆನ್ನುವಂತೆ ಇಂದಿನ ಗೃಹಿಣಿಯರಿಗೂ 'ಎಡಗೈಲಿ ಮೊಬೈಲು, ಬಲಗೈಲಿ ಸೌಟು' ಎನ್ನುವುದೇ ಜೀವನ. ಅವರಿಗೂ ಸರಸ್ವತಿ, ಲಕ್ಷ್ಮಿಯರಿಗಿರುವಂತೆ ನಾಲ್ಕು

ಕೈಗಳಿದ್ದರೆ ಸುಖವಿರುತ್ತಿತ್ತೇನೋ? 'ಮಲ್ಟಿ ಟಾಸ್ಕಿಂಗ್' ಸರ್ಕಸ್ ಮಾಡುವಾಗ ಅಂದರೆ ಫೋನ್‌ನಲ್ಲಿ ಮಾತಾಡುತ್ತಾ, ಟಿವಿ ನೋಡುತ್ತಾ ಅಡುಗೆ ಮಾಡುವಾಗ ಕಾಫಿಗೆ ಒಗ್ಗರಣೆ ಹಾಕಿ, ಸಾರಿಗೆ ಸಕ್ಕರೆ ಹಾಕಿದರೆ ಆಶ್ಚರ್ಯವಿಲ್ಲ. ಜೊತೆಗೆ ಅತಿಥಿಗಳು ಬಂದಾಗ ಅಡುಗೆಮನೆ ರಂಪ ಕಾಣಿಸಿದರೂ ಗೃಹಿಣಿಗೇ ಹೆಚ್ಚು ಮುಜಗರ. ಅದಕ್ಕೂ ನೇರವಾಗಿ ಹೊಣೆಯಾಗುವುದು ಗೃಹಿಣಿಯೇ ಅಲ್ಲವೇ? ಈ ತಳಮಳದಲ್ಲಿ ಆಕೆ ಅಡುಗೆ ಮನೆಯನ್ನು ಉಜ್ಜಿ-ಉಜ್ಜಿ ತೊಳೆದು ಸುಸ್ತಾಗುವುದಂತೂ ಖಂಡಿತ. ಅದಕ್ಕೆ ನಮಗೆ ತಿಳಿದವರೊಬ್ಬರು ಅಡುಗೆಮನೆಯನ್ನು ಪ್ರದರ್ಶನಕ್ಕಿಟ್ಟಂತೆ ನೀಟಾಗಿಟ್ಟು, ಊಟ ತಿಂಡಿಗಳಿಗೆ 'ಕೇಟರಿಂಗ್' ಮೊರೆಹೋಗಿದ್ದಾರೆ. ಅಡುಗೆಮನೆ ಕಟ್ಟಿಸದಿದ್ದರೇ ಒಳ್ಳೆಯದಿತ್ತು ಎನ್ನುತ್ತಿದ್ದಾರೆ ಮತ್ತೊಬ್ಬರು. ಮತ್ತೊಬ್ಬ ಅತಿ ಶ್ರೀಮಂತರು ಮನೆಯೊಳಗೆ ಒಂದು 'ಶೋ ಕಿಚನ್' ಕಟ್ಟಿ, ಎಲ್ಲಾ ಮಾಡರ್ನ್ ಸಾಧನಗಳನ್ನೂ ಅಲ್ಲಿಟ್ಟು, ಮನೆಗೆ ಬಂದವರೆದುರು ಪ್ರದರ್ಶನ ಮಾಡಲೆಂದೇ ಮೀಸಲಿಟ್ಟಿದ್ದಾರಂತೆ. ಮನೆಯ ಹಿಂದೆಲ್ಲೋ ಮತ್ತೊಂದು ಸಾಧಾರಣ ಅಡುಗೆ ಮನೆ ಕಟ್ಟಿಸಿ ದಿನನಿತ್ಯದ ಅಡುಗೆ ಮಾಡುತ್ತಾರಂತೆ.

ಹಾಂ, ಮನೆಯ ಹಿಂದೆಲ್ಲೋ ಎಂದೇಟಿಗೆ ನನಗೆ ನಮ್ಮಜ್ಜಿ ಮನೆಯ ಅಂಗಳದಲ್ಲಿದ್ದ 'ಕುಟ್ಟೋ ಮನೆ'. ನೆನಪಾಗುತ್ತಿದೆ. 'ಕುಟ್ಟೋ ಮನೆ' ಎಂದಾಕ್ಷಣ ಅದು ತಾನಾಗಿ ಎದ್ದು ಬಂದು ಎಂದಿಗೂ, ಯಾರನ್ನೂ ಕುಟ್ಟುವುದೂ ಇಲ್ಲ. ಗಾಬರಿಯಾಗಬೇಡಿ. ಅದು ಜನರನ್ನು ಕುಟ್ಟಿ ಸದೆ ಬಡೆಯಲೆಂದೇ ಕಟ್ಟಿಸಿರುವ ಮನೆಯೇ ಎಂದೂ ವಿಚಿತ್ರವಾಗಿ ಚಿಂತಿಸದಿರಿ. ಬಹುಶಃ ಈಗ ಅತಿಯಾಗಿ ದುಡ್ಡುಳ್ಳ ಜನ ಅಂತಹ ಮನೆಯನ್ನೂ ಕಟ್ಟುತ್ತಾರೇನೋ? ನಿಜ ವಿಷಯವೇನೆಂದರೆ ನಮ್ಮಜ್ಜಿ ಕಾಲದ ಮನೆಯ ಅಂಗಳದಲ್ಲಿ ಒಂದು ಒರಳು ಹಾಗೂ ಕಲ್ಲಿನ ಅಟ್ಟಣಿಗೆಗಳಿದ್ದ ಪುಟ್ಟ ಕೋಣೆ ಇತ್ತು. ಮನೆಮಂದಿಗೆಲ್ಲಾ ಸಾಕಾಗುವಷ್ಟು ಸಾರಿನ ಪುಡಿ, ಮೆಣಸಿನ ಪುಡಿಗಳನ್ನು ಅಲ್ಲಿಯೇ ಕುಟ್ಟುತ್ತಿದ್ದರು. ಅದಕ್ಕೇ ಆ ಹೆಸರು. ಒಮ್ಮೊಮ್ಮೆ ಕರಿದ ತಿಂಡಿಗಳನ್ನೂ ಮಾಡುತ್ತಿದ್ದರು. ಅಂಗಳದಲ್ಲಿ ದೂರದಲ್ಲಿದ್ದುದರಿಂದ ಮೆಣಸಿನಕಾಯಿಯ ಘಾಟು, ಕರಿದ ಎಣ್ಣೆಯ ವಾಸನೆ ಮನೆಯೊಳಗೆ ಬರುತ್ತಿರಲಿಲ್ಲ. ಈಗ ಇಂತಹ 'ಕುಟ್ಟೋ ಮನೆ'ಗಳ ಅವಶಕ್ಯತೆ ಇಲ್ಲವೇ ಇಲ್ಲ. ಅಷ್ಟೊಂದು ಪುಡಿ ಸಡಿಗಳನ್ನು ಮಾಡುವವರ್ಯಾರು? ಮಾಡಿದರೂ ಮಿಕ್ಸಿ ಇದೆಯಲ್ಲಾ? ಒರಳು, ಅಂಗಳ, ಅಟ್ಟ, ಕುಟ್ಟು, ಕರಿ ಎಲ್ಲವೂ ಈಗ ಕೇವಲ ನಿಘಂಟುವಿನ ಗಂಟಲಲ್ಲೇ. ಹೇಗಾದರೂ ನನ್ನ ಸುಸ್ತು ಶಾಸ್ತ್ರದಂತೆ ಈಗಿನ ಕಾಲದ 'ಓಪೆನ್ ಕಿಚನ್'ಗಳೂ ಒಳ್ಳೆಯದಲ್ಲ. 'ಹಿಡನ್ ಕಿಚನ್' ಮಾಡಿದರೆ ಗೃಹಿಣಿಗೆ ಅತ್ಯಂತ ಸುರಕ್ಷೆ ಕೊಟ್ಟು, ಸನ್ಮಾನ ಮಾಡಿದಂತೆ. ಅದಕ್ಕೊಂದು ಬಾಗಿಲು ತಗಲ್ಹಾಕಿದರೆ ಮತ್ತೂ ಮೇಲು. ಬೆಕ್ಕು ಬಾರದಂತೆ ಬಾಗಿಲು ಹಾಕಬಹುದು. ಮಿಕ್ಸರ್, ಕುಕ್ಕರ್ ಶಬ್ದಗಳನ್ನೂ ತಡೆಹಿಡಿಯಬಹುದು.

ಇನ್ನು ಶೌಚಾಲಯಕ್ಕೆ ಹೋಗೋಣ ಬನ್ನಿ. ಅಯ್ಯೋ, ಬನ್ನಿ ಎಂದರೆ ಅದರ ಬಗ್ಗೆ ತಿಳಿದುಕೊಳ್ಳಲು ಬನ್ನಿ ಎಂದಷ್ಟೇ ಅರ್ಥ. ಮತ್ತೇನೂ ಯೋಚಿಸಬೇಡಿ. ಈಗೀಗ ಶೌಚಾಲಯಗಳ ಬಗ್ಗೆ ಹಿಂದೆಂದೂ ಇಲ್ಲದ ಅಕ್ಕರೆ. ಕೋಣೆ-ಕೋಣೆಗೂ, ಪ್ರತ್ಯೇಕ ಶೌಚ 'ಆಲಯ' ಇರಬೇಕೆನ್ನುವುದು ಸಾಕಷ್ಟು ಜನರ ಅಭಿಪ್ರಾಯ. ಅವುಗಳಿಗೆ ಹಾಕುವ ಪರಿಕರಗಳ ಬಣ್ಣ, ವಿನ್ಯಾಸಗಳನ್ನು ನಿಶ್ಚಯಿಸುವುದರಲ್ಲಿ ಮನೆ ಜನಗಳಲ್ಲಿ ಸಾಕಷ್ಟು ತಕರಾರು, ತರ್ಕ, ವಾದ, ವಿವಾದಗಳಾಗುತ್ತವೆ. ಕೊನೆಗೆ ಗಂಡ-ಹೆಂಡತಿಯರ ವಿವಾಹ ವಿಚ್ಛೇದನದ ತನಕ ತಲುಪಿದರೂ ಆಶ್ಚರ್ಯವಿಲ್ಲ. ಎಷ್ಟು ಶೌಚಾಲಯಗಳಿರಬೇಕು ಎನ್ನುವುದರಿಂದ ಪ್ರಾರಂಭವಾಗುವ ಚರ್ಚೆ ಯಾವ ದಿಕ್ಕಿನಲ್ಲಿ ಶೌಚಕ್ಕೆ ಕೂಡಬೇಕು? ಸ್ನಾನಕ್ಕೆ ಟಬ್ ಇರಬೇಕಾ, ಶವರ್ ಸಾಕಾ? ಗೀಸರ್ ಯಾವ ಬ್ರಾಂಡ್? ಸ್ನಾನದ ಭಾಗಕ್ಕೆ ಗಾಜಿನ ತೆರೆಯಾ, ಬಟ್ಟೆಯ ತೆರೆಯಾ? ಶವರ್‌ನ ನಲ್ಲಿ ಹೇಗಿರಬೇಕು? ಎಷ್ಟು ನಲ್ಲಿಗಳಿರಬೇಕು? ನೀರು ಎಲ್ಲಿಯವರೆಗೆ ಹರಿಯಬೇಕು? ಎಷ್ಟು ದೀಪಗಳಿರಬೇಕು? ಬಿಸಿ ನೀರಿನ ಉಷ್ಣತೆ ಎಷ್ಟಿರಬೇಕು? ಸೋಲಾರ್ ಹೀಟರ್ ಬೇಕಾ? ಅದನ್ನು ಎಲ್ಲಿಡಬೇಕು? ಅದರ ಗಾತ್ರ ಎಷ್ಟಿರಬೇಕು? ವಾಶ್ ಬೇಸಿನ್‌ನ ಸ್ಥಳ, ಆಕಾರ, ವಿನ್ಯಾಸ ಹೀಗೆ ಸಾಕಷ್ಟು

ಚರ್ಚೆಗಳಾಗಲೇಬೇಕು. ಶೌಚಾಲಯದ ಬಗ್ಗೆ ಮತ್ತೊಂದು ಮಾತನ್ನು ಎಲ್ಲರೂ ಒಪ್ಪುತ್ತಾರೆ. ಅಲ್ಲಿ ಮಾಡುವ ಕೆಲಸಗಳನ್ನು ಬೇರೆಯವರಿಗೆ ಗುತ್ತಿಗೆ ಕೊಡುವುದು ಸಾಧ್ಯವಿಲ್ಲ. ಅವರವರವ ಸ್ನಾನ, ಶೌಚಗಳನ್ನು ಅವರವರೇ ಮಾಡಬೇಕಲ್ಲವೇ?

ಶೌಚ ಮತ್ತು ಸ್ನಾನದ ಮನೆಗಳನ್ನು ಅಂದವಾಗಿಟ್ಟುಕೊಳ್ಳುವುದು, ಜಾರದಂತೆ ಎಚ್ಚರಿಕೆ ವಹಿಸುವುದು ಅತಿ ಕಷ್ಟದ ಕೆಲಸ. ಜಾರದಂತಿರಲು ಈಗೀಗ ಕಲ್ಲುಹಾಸುಗಳನ್ನು ಉಪಯೋಗಿಸಬಹುದು ಎನ್ನುತ್ತಾರೆ ಪ್ರಾಜ್ಞರು. ಆದರೆ ಶೋಕಿಯೇ ಬೇಕೆಂದವರು ಜಾರದಂತಿರಲು ವಿಧವಿಧವಾದ ದುಬಾರಿ 'ಆ್ಯಂಟಿ ಸ್ಲಿಪ್' ಕಾಲೊರಸುಗಳು ಲಭ್ಯವಿವೆ ಎನ್ನುತ್ತಾರೆ. ಏನೇ ಇದ್ದರೂ ಎಲ್ಲರಿಗೂ ಶೌಚಾಲಯಗಳು ಚೊಕ್ಕಟವಾಗಿರಬೇಕು. ಹಾಗಿರಲು ಅವುಗಳನ್ನು ಶುಚಿ ಮಾಡುವುದು ಕಡ್ಡಾಯ. ಆದರೆ ಶುಚಿಮಾಡುವ ಶ್ರಮ ಯಾರಿಗೆ ಬೇಕು? ಹಾಗಾಗಿ ಜಾಸ್ತಿ ಶೌಚಾಲಯಗಳದ್ದಾಗ ಯಾವ ಯಾವ ಶೌಚಾಲಯವನ್ನು ಯಾರ್ಯಾರು ಚೊಕ್ಕಟಗೊಳಿಸಬೇಕೆಂದು ಗೃಹಪ್ರವೇಶದ ಮೊದಲಲ್ಲ, ಮನೆ ಕಟ್ಟುವ ಮೊದಲೇ ನಿಶ್ಚಯಿಸಿಕೊಳ್ಳಬೇಕು. ಇದು ಸುಸ್ತು ಶಾಸ್ತ್ರದ ನಿಯಮ. ಏಕೆಂದರೆ ಕಟ್ಟುವಾಗ ಇರುವ ಉತ್ಸಾಹ ಆಮೇಲೆ ಇರುವುದಿಲ್ಲ ಎನ್ನುವುದು ಖಚಿತ. ಮನೆಗೆಲಸದವರೂ ಒಪ್ಪುವುದಿಲ್ಲ ಎನ್ನುವ ವಿಷಯವೂ ತಿಳಿದಿರುವುದೇ. ಶುಚಿ ಮಾಡಲು ಇತ್ತೀಚಿಗೆ ಕಾಂಟ್ರಾಕ್ಟ್ ನೀಡಬಹುದು. ಆದರೆ ಖರ್ಚಿನ ಬಗ್ಗೆಯೂ ಚಿಂತೆ ಮಾಡಬೇಕಲ್ಲವೆ? ಅದರ ಬದಲು ಸುಸ್ತು ಶಾಸ್ತ್ರವನ್ನು ಮೊರೆಹೊಕ್ಕು, ಈ ಸಮಸ್ಯೆಯನ್ನು ಮೊದಲೇ ಬಗೆಹರಿಸಿಬಿಟ್ಟರೆ ಅನವಶ್ಯಕವಾಗಿ ಹೆಚ್ಚು ಶೌಚಾಲಯಗಳನ್ನು ಕಟ್ಟುವುದೂ ತಪ್ಪುತ್ತದೆ, ಖರ್ಚೂ ಉಳಿಯುತ್ತದೆ. ನೋಡಿದಿರಾ ವಾಸ್ತುವಿಗಿಂತ ಸುಸ್ತು ಶಾಸ್ತ್ರವೇ ಗೆಲುವಿನತ್ತ ಸಾಗುತ್ತಿದೆಯಲ್ಲವೇ?

ಇನ್ನು ದೇವರ ಮನೆಯ ಚಿಂತೆ. ದೇವರಿಗೆ ಶರಣಾಗುವುದು ಕೊನೆಯಲ್ಲಿ ತಾನೇ? ಇದರ ಬಗ್ಗೆ ಸುಸ್ತು ಶಾಸ್ತ್ರ ವಿಶೇಷವಾಗಿ ಏನೂ ಹೇಳುವುದಿಲ್ಲ. ಈಗಾಗಲೇ ಹೇಳಿರುವ ಎಲ್ಲಾ ವಿಷಯಗಳನ್ನೂ ಅರ್ಥ ಮಾಡಿಕೊಳ್ಳುವಷ್ಟರಲ್ಲಿ ಮನೆ ಕಟ್ಟುವವರಿಗೆ ದೇವರ ಮನೆಯ ಬಗ್ಗೆ ತನ್ನಷ್ಟಕ್ಕೆ ತಾನೇ ತಿಳಿವಳಿಕೆ ಬಂದಿರುತ್ತದೆ. ಅವರವರ ಬುದ್ಧಿಗೆ, ಭಾವಕ್ಕೆ ತಕ್ಕಂತೆ ದೇವರನ್ನು ಆರಾಧಿಸುವ ಸ್ವಾತಂತ್ರ್ಯ ನೀಡುತ್ತದೆ ಸುಸ್ತು ಶಾಸ್ತ್ರ. ದೇವರಲ್ಲಿ ಭಕ್ತಿಯೊಂದಿದ್ದರೆ ಸಾಕು. ಮನೆಯವರೆಲ್ಲ ಒಮ್ಮತದಿಂದ(?) ದೇವರ ಕೋಣೆಯ ವಾಸ್ತು ನಿಶ್ಚಯಮಾಡುವಂತಾದರೆ ಸುಸ್ತು ಶಾಸ್ತ್ರ ಸಾರ್ಥಕ. ಈಗ ನೀವೇ ನಿರ್ಧರಿಸಿ. ಗೆಲ್ಲುವುದು ವಾಸ್ತು ಶಾಸ್ತ್ರವೇ? ಸುಸ್ತು ಶಾಸ್ತ್ರವೇ?

ವಿಶೇಷ ಟಿಪ್ಪಣಿ: ವಾಸ್ತುಶಾಸ್ತ್ರದ ಕ್ಷಮೆ ಕೇಳಿ.

***

ಕಿರು ಪ್ರವಾಸದ ಕಿರು ವರದಿ

ಆಹಾ ಅಹೋಬಿಲಂ

– ಶೀಲಾ ಅರಕಲಗೂಡು

ಕಳೆದ ವಾರ, ಅಂದರೆ 15, ಜುಲೈ 2023ರಂದು, ಈ ಹೊತ್ತಿಗೆ ನಾನಿದ್ದದ್ದು ಅಹೋಬಿಲಂನಲ್ಲಿ. ನಾನು ಮನಸ್ಸಿನಲ್ಲೇ ಕೇಳಿಕೊಂಡಿದ್ದೆ, 'ಬರಲಾ ನಿನ್ನಲ್ಲಿಗೆ ಅಹೋಬಿಲಂ?' ಎಂದು. 'ಬಾರೆಲಾ, ಬಾರೆಲಾ, ಬೇಗನೇ ಬಾರೆಲಾ' ಎಂದು ಅಹೋಬಿಲಂ ನನ್ನನ್ನು ಪ್ರೀತಿಯಿಂದ ಬರಮಾಡಿಕೊಂಡಿತ್ತು.

ಅತ್ಯಂತ ಸುಂದರದ ಅನುಭವಗಳನ್ನು ಕೊಟ್ಟಿತು, ಅಂತರಂಗವನ್ನು ತಟ್ಟಿತು, ವಿವಿಧ ಭಾವಗಳನ್ನರಳಿಸಿ ಮುದಗೊಳಿಸಿತು ಅಹೋಬಿಲಂ ಹಾಗೂ ಅಹೋಬಿಲಂನಲ್ಲಿನ ನವನರಸಿಂಹನ ಸ್ವಯಂಭು ಸ್ವರೂಪಗಳು. ಈ ಬಗ್ಗೆ ಅಲ್ಪಸ್ವಲ್ಪ ನಿಮ್ಮೊಂದಿಗೆ ಹಂಚಿಕೊಳ್ಳಬೇಕೆನಿಸಿ ಈ ಲೇಖನ ಬರೆದಿದ್ದೇನೆ.

ಭಾರತ ಅದೆಂಥ ಸುಂದರ ಹಾಗೂ ದಿವ್ಯ ದೇಶ!

ದಕ್ಷಿಣ ಭಾರತವನ್ನು ಪರ್ಯಾಯ ದ್ವೀಪ ಎನ್ನುತ್ತಾರೆ. ಮೂರುಕಡೆ ಸಮುದ್ರದ ನೀರಿನಿಂದಾವೃತವಾಗಿದ್ದು, ಮತ್ತೊಂದೆಡೆ ಭೂಪ್ರದೇಶವಿದೆ. ಹಾಗೆ ನೋಡಿದರೆ, ನಮ್ಮ ಭಾರತದ ಉತ್ತರಕ್ಕೆ ಹಿಮಾಲಯದ ಬೆಟ್ಟಗಳು, ಪೂರ್ವಕ್ಕೆ ಪೂರ್ವ ಘಟ್ಟದ ಉನ್ನತ ಪರ್ವತ ಶ್ರೇಣಿಗಳದ್ದು, ಪಶ್ಚಿಮದಲ್ಲಿ ಪಶ್ಚಿಮ ಘಟ್ಟದ ಪರ್ವತ ಶ್ರೇಣಿಗಳಿವೆ. ಒಂದು ಬಗೆಯಲ್ಲಿ ಇಡೀ ಭಾರತವನ್ನೇ ರಕ್ಷಣಾ ರೂಪದಲ್ಲಿ ಈ ಬೆಟ್ಟಗಳು ಸುತ್ತುವರೆದಂತೆ ಭಾಸವಾಗುತ್ತದೆ. ಅಷ್ಟೇ ಆಗಿದ್ದರೆ ಅಂತಹ ವಿಶೇಷವೆನಿಸುತ್ತಿರಲಿಲ್ಲವೇನೋ ಆದರೆ, ಈ ಬೆಟ್ಟಗಳ ಮೇಲೆ ಭಗವಂತ ವಿವಿಧ ಬಗೆಯಲ್ಲಿ ತನ್ನ ಸ್ವರೂಪ ವನ್ನು ತೋರಿಸಿ, ಸ್ವಯಂಭು ಆಗಿ ಅವತರಿಸಿ, ಅಲ್ಲಿ ನೆಲೆಸಿರುವುದು ನಿಜಕ್ಕೂ ನಮ್ಮನ್ನು ಪುಳಕಗೊಳಿಸುತ್ತದೆ. ಪ್ರತಿಯೊಂದು ಸ್ಥಳಕ್ಕೂ ಒಂದೊಂದು ಪೌರಾಣಿಕ ಕಥೆಯಿದ್ದು, ಅವುಗಳ ಸತ್ಯತೆಯನ್ನು ನಿರೂಪಿಸುವಂತಹ ಮಹಿಮೆಯುಳ್ಳ ಸ್ಥಳಗಳನ್ನು ನಾವಲ್ಲಿ ಕಾಣಬಹುದು. ಯುಗ ಯುಗಾಂತರಗಳು ಕಳೆದರೂ, ಅವು ತಮ್ಮ ಅಸ್ತಿತ್ವವನ್ನು ತೋರುತ್ತಾ ಇಂದಿಗೂ ಜನಗಳನ್ನು ಆಕರ್ಷಿಸುತ್ತಿರುವುದು ನಮ್ಮ ಭಾರತೀಯ ಸಾಂಸ್ಕೃತಿಕ ಹಿರಿಮೆ ಗರಿಮೆಗೆ ಹಿಡಿದ ಕನ್ನಡಿ ಎನಿಸುತ್ತದೆ. ಅಂತಹ ದಿವ್ಯಾನುಭೂತಿಯನ್ನು ನೀಡಿದ್ದು ಅಹೊಬಿಲಂ ಕೂಡಾ.

ಅಹೋಬಿಲಂ ಆಂಧ್ರ ಪ್ರದೇಶದ ಕರ್ನೂಲು ಜಿಲ್ಲೆಯಲ್ಲಿರುವ ಒಂದು ಗ್ರಾಮ. ಅದಕ್ಕೆ ಹೊಂದಿಕೊಂಡು ನಿಂತಿದೆ ಉನ್ನತ ಪರ್ವತ ಶಿಖರಗಳು. ಕತ್ತೆತ್ತಿ ನೋಡಿದರೆ ಹಸಿರು ಹೊದ್ದ ಈ ಪರ್ವತಗಳು ಮುಗಿಲೆತ್ತರಕ್ಕೆ ನಿಂತು ಭೂಮಿಗೂ ಸ್ವರ್ಗಕ್ಕೂ ನಡುವಿನ ಏಣಿಯಂತೆ ಭಾಸವಾಗುತ್ತದೆ.

ಯುಟ್ಯೂಬ್‌ನಲ್ಲಿ ನೋಡಿದರೆ ನವ ನರಸಿಂಹ ದೇವಾಲಯಗಳ ವಿವರಗಳು, ಚಿತ್ರಗಳು ಸಾಕಷ್ಟು ದೊರಕುತ್ತವೆ. ಆದರೆ ಆ ಸ್ಥಳಗಳಿಗೆ ಹೋದಾಗ ಅಲ್ಲಿನ ಪರಿಸರದಲ್ಲೊಂದಾಗಿ ಮುಖಾಮುಖಿ ಆದಾಗ ಆಗುವ ಅನುಭವವೇ ಬೇರೆ.

ಪ್ರಹ್ಲಾದ–ಹಿರಣ್ಯಕಶಿಪುವಿನ ಕಥೆಯನ್ನು ನಾವೆಲ್ಲ ಚಿಕ್ಕಂದಿನಿಂದ ಕೇಳಿದ್ದೇವೆ. ಹಿರಣ್ಯಕಶಿಪುವಿನ ವಧೆಯನ್ನು ನರಸಿಂಹ ಮಾಡಿದ ಬಗೆಯನ್ನು ಕೇಳಿ ತಿಳಿದಿದ್ದೇವೆ. ಸತ್ಯಯುಗದಲ್ಲಿ ನಡೆದ ಆ ವೃತ್ತಾಂತದ ಸ್ಥಳವನ್ನು ಪ್ರತ್ಯಕ್ಷ ನೋಡಿದಾಗ ಆಗುವ ಅನುಭೂತಿ, ಅನುಭವಿಸಿಯೇ ತಿಳಿಯಬೇಕಾದದ್ದು.

ಉಗ್ರಂ ವೀರಂ ಮಹಾವಿಷ್ಣುಂ ।
ಜ್ವಲಂತಂ ಸರ್ವತೋಮುಖಂ ।
ನೃಸಿಂಹ ಭೀಷಣಂ ಭದ್ರಂ ।
ಮೃತ್ಯು ಮೃತ್ಯು ನಮಾಮ್ಯಹಂ ॥

ವಿಷ್ಣು, ಉಗ್ರ ನರಸಿಂಹನ ರೂಪ ತಾಳಿ, ಕಂಬದಿಂದ ಹೊರಬಂದು ತನ್ನ ನಖಗಳಿಂದ ಹಿರಣ್ಯಕಶಿಪುವಿನ ಕರುಳು ಬಗೆದು ಸಾಯಿಸಿದ್ದನ್ನು ಓದಿ ತಿಳಿದಿದ್ದೇವೆ. ಆ ಸ್ಥಳದಲ್ಲಿ ಈಗ ಜ್ವಾಲಾನರಸಿಂಹ ದೇವಾಲಯವಿದೆ. ಅಲ್ಲಿಗೆ ಹೋಗಲು ದಟ್ಟ ಕಾನನದ ನಡುವೆ ಚಾರಣದ ಮೂಲಕ ಮೇಲೆ ಹತ್ತಿ ಹೋಗಬೇಕು. ದೇವಾಲಯದ ಜೊತೆಗೆ ಆ ಸ್ತಂಭವನ್ನೂ ಎತ್ತರದಲ್ಲಿ ನೋಡಬಹುದು. ಅದನ್ನು ಉಗ್ರ ಸ್ತಂಭ ಎನ್ನುತ್ತಾರೆ.

ಹಾಗೆಯೇ ಕಾಡಿನಲ್ಲಿ, ಅಡ್ಡತಿಡ್ಡ ರಸ್ತೆಯಲ್ಲಿ ಸುಮಾರು 20 ಕಿಮೀ ದೂರ ಜೀಪಿನಲ್ಲಿ ಮೈ ಕೈಯೆಲ್ಲ ನಜ್ಜುಗುಜ್ಜು ಮಾಡಿಕೊಂಡು ಹೋಗಿ ನೋಡಬೇಕಾದದ್ದು ಪಾವನ ನರಸಿಂಹ ದೇವಾಲಯ. ಸುಂದರ ಪ್ರಕೃತಿಯ ನಡುವೆ ನೆಲೆಸಿರುವ ಪಾವನ ನರಸಿಂಹನನ್ನು ಕಂಡಾಗ ಮೈ ಕೈ ನೋವೆಲ್ಲ ಮಾಯವಾಗಿ ನಾವೂ ಪಾವನರಾದಂಥ ಭಾವ!

ಉಳಿದಂತೆ, ಮಾಲೋಲ ನರಸಿಂಹ ದೇವಾಲಯ, ವರಾಹ ನರಸಿಂಹ ದೇವಾಲಯ, ಭಾರ್ಗವ ನರಸಿಂಹ ದೇವಾಲಯ, ಛತ್ರವಟ ನರಸಿಂಹ ದೇವಾಲಯ, ಯೋಗಾನಂದ ನರಸಿಂಹ ದೇವಾಲಯ, ಕಾರಂಜ ನರಸಿಂಹ ದೇವಾಲಯ ಹಾಗೂ ಅಹೋಬಲ ನರಸಿಂಹ ದೇವಾಲಯ. ಇವೆಲ್ಲವುಗಳ ದರ್ಶನ ಭಾಗ್ಯವನ್ನು ಪಡೆದವು. ಜೊತೆಗೆ ಬಾಲಕ ಭಕ್ತ ಪ್ರಹ್ಲಾದ ಅಧ್ಯಯನ ಮಾಡಿದ ಪಾಠಶಾಲೆಯೂ ಅಲ್ಲಿದೆ. ಎಲ್ಲ ದೇವಾಲಯಗಳಿಗೂ ಬೇರೆ ಬೇರೆ ಪೌರಾಣಿಕ ಹಿನ್ನೆಲೆ ಇದೆ. ಈ ಎಲ್ಲ ದೇವಾಲಯಗಳು ತಮ್ಮದೇ ವೈಶಿಷ್ಟ್ಯ ಹೊಂದಿದ್ದು ಸುಂದರವಾಗಿವೆ.

ನವ ನರಸಿಂಹ ದೇವಾಲಯಗಳಷ್ಟೇ ಸೊಗಸಾದ ಶ್ರೀ ಲಕ್ಷ್ಮೀ ನರಸಿಂಹ ದೇವಾಲಯವೂ ಮನ ಸೂರೆಗೊಳ್ಳುವಷ್ಟು ಮನೋಹರವಾಗಿದೆ. ಸಂಜೆಯಲ್ಲಿ ಹೋದಾಗಲೇ ಒಂದು ರೀತಿ. ಅದೂ, ಧಾರೆ ಧಾರೆಯಾಗಿ ಮಳೆ ಸುರಿದು ತಂಪಾದ ಹವೆಯಲ್ಲಿ ದೇವಾಲಯದ ವಿಶಾಲವಾದ ಆವರಣದಲ್ಲಿ ಮನಸೂ ತಂಪೋ ತಂಪು.

ಬೆಳಗ್ಗೆ ಐದೂವರೆಗೇ ತಯಾರಾಗಿ, ಅದೇ ದೇವಾಲಯಕ್ಕೆ ಹೋದಾಗ ಅದರ ಸೌಂದರ್ಯ ಮತ್ತೊಂದೇ ರೀತಿಯಲ್ಲಿ ಕಂಗೊಳಿಸುತ್ತದೆ. ಅಲ್ಲಿ ವಿಶ್ವ ರೂಪದರ್ಶನ ವಾದ ನಂತರವೇ ಗರ್ಭಗುಡಿಯ ದೇವರ ಮುಂದಿನ ಪರದೆ ಸರಿಯುತ್ತದೆ. ವಿಶ್ವರೂಪ ದರ್ಶನವೆಂದರೆ ಮತ್ತೇನಲ್ಲ, ಶುಭ್ರ ಶ್ವೇತ ವರ್ಣದ ಹಸು ಕರುಗಳು ಕೊರಳ ಘಂಟೆಗಳನ್ನು ತೂಗುತ್ತಾ, ಕುಣಿಕುಣಿದು ಬರುವಂತೆ ಹೆಜ್ಜೆ ಹಾಕುತ್ತಾ, ಹೊರಗಡೆಯಿಂದ ದೇವಾಲಯದೊಳಗೆ ಬರುತ್ತವೆ. ಬಂದು ಗರ್ಭಗುಡಿಯ ಮುಂಭಾಗದಲ್ಲಿ, ನೆಲದ ಮೇಲೆ ಬಡಿಸಿರುವ ಸಿದ್ಧಪಡಿಸಿದ ಘಟ್ಟಿ ಪಾಯಸದಂತಹ ಆಹಾರವನ್ನು ಸಂತೃಪ್ತಿಯಿಂದ ಸೇವಿಸಿ ಹೊರಹೋಗುತ್ತವೆ. ನೆರೆದಿರುವ ಜನರೆಲ್ಲ ಎರಡೂ ಬದಿಗಳಲ್ಲಿ ಸಾಲಿನಲ್ಲಿ ಕಾದು ನಿಂತಿದ್ದು, ಈ ದೃಶ್ಯವನ್ನು ನೋಡಿ ಪುಳಕಿತಗೊಳ್ಳುತ್ತಾರೆ.

ಕೇವಲ ಒಂದೂವರೆ ದಿನಗಳಲ್ಲಿ ಈ ಎಲ್ಲವನ್ನು ನೋಡಿ, ಆನಂದಿಸಿ ನಾವು ಹಿಂದಿರುಗಿದೆವು.

ಮತ್ತಿನ್ನೇಕೆ ತಡ? ನೀವೂ ಹೊರಡಿ ಅಹೋಬಿಲಂಗೆ. ಶ್ರೀ ನರಸಿಂಹ ನಿಮ್ಮನ್ನು ಕರೆಯುತ್ತಿರುವುದು ಕೇಳಿಸುತ್ತಿದೆ ತಾನೇ?

***

ಇದನ್ನೂ ಆಚೆ ಹಾಕು

– ಅನ್ನಪೂರ್ಣ ಸುಬ್ಬರಾವ್

ಏನೋ ಹುಡುಕಕ್ಕೆ ಅಂತ ಹೋಗಿ ಹುಡುಕಿದ್ದು ಸಿಗದೆ ಬೇಡವಾದ್ದೇ ಸಿಕ್ತಾಸಿಕ್ತಾ ಸಹನೆ ಅನ್ನೋದು ಮೀರಿ ಹೋಗ್ತಿತ್ತು. "ಏನು ಕರ್ಮನೋ, ಎಲ್ಲಾ ಇರುತ್ತೆ ಮನೇಲಿ, ಬೇಕಾದಾಗ ಒಂದೂ ಸಿಗಲ್ಲ, ಹುಡ್ಕಿ ಹುಡ್ಕಿ ಸಾಯ್ಬೇಕು, ತಲೆ ಕೆಟ್ಹೋಗುತ್ತೆ" ಅಂತ ಗೊಣಗಾಡ್ಕೊಂಡು, ಅಸಹನೆಯಿಂದ ತಲೆಮೇಲೆ ಕೈ ಹೊತ್ತು ಸುಮ್ನೆ ಒಂದ್ಕಡೆ ಕೂತ್ಬಿಟ್ಟೆ.

ಪೇಪರ್ ಓದುತ್ತಾ ಅಲ್ಲೇ ಕೂತಿದ್ದ ಇವ್ರು,, "ಅದೇನ್ ಗೊಣಗ್ತೀಯೋ ಏನೋ, ಅದೇನೂ ಅಂತ ಹೇಳ್ಬಾರ್ದ ನಾನೂ ಹುಡುಕ್ತೀನಿ" ಅಂದ್ರು.. ಇಟ್ಟಿರೋವ್ನು ನಾನು. ನನ್ನ ಕೈಗೇ ಸಿಕ್ತಿಲ್ಲ. ನೀವೆಲ್ಲೀಂತ ಹುಡುಕ್ತೀರಾ? ಆಗ್ದೆ ಇರೋ ಕೆಲ್ಸ. ಬೇಡವಾದವೆಲ್ಲ ಬಿದ್ದಿವೆ. ಬೇಕಾದ್ದೇ ಇಲ್ಲ. ಎಲ್ಲ ಎತ್ತಿ ಆಚೆ ಬಿಸಾಕ್ಬೇಕು ಅನ್ನೋಷ್ಟ್ ಕೋಪ ಬರುತ್ತೆ. ಎಲ್ಲಿ ನೋಡಿದ್ರೂ ಕೆಲ್ಸಕ್ಬಾರ್ದ ಸಾಮಾನೇ. ತಲೆ ಕೆಟ್ಹೋಗುತ್ತೆ..!!" ಅಂದೆ.

ತಕ್ಷಣ ಇವ್ರು, "ನಿನ್ನ ಮಾತು ನಿಜ ನೋಡು. ಕೆಲ್ಸಕ್ಕೆ ಬರ್ದೇ ಇರೋದನ್ನ ಮೊದ್ಲು ಆಚೆ ಎಸೀಬೇಕು. ಎಷ್ಟೋ ಸಾಮಾನು ಕಮ್ಮಿ ಆಗುತ್ತೆ, ನಿಂಗೆ ಕೆಲ್ಸನೂ ಕಮ್ಮಿ ಆಗುತ್ತೆ. ಇದನ್ನೂ ಎಸ್ದುಬಿಡು" ಅಂದ್ರು..

ನಾನು ಕೆಲ್ಸ ಮಾಡ್ತಾ ಇದ್ದೋಳು ತಿರುಗಿ ನೋಡ್ದೆ, "ನನ್ನನ್ನೇನ್ ಕೇಳೋದು, ಬೇಡ ಅನ್ಸಿದ್ದನ್ನು ನೀವೇ ಎತ್ತಿ ಬಿಸಾಕಿದ್ರಾಯ್ತು.. ನಂಗೆ ಬೇರೆ ಕೆಲ್ಸ, ನೀವೇ ಬಿಸಾಕಿ" ಅಂದೆ.

ಅವರಿಂದ ಉತ್ತರವೇ ಬರಲಿಲ್ಲ..!!

"ಯಾಕ್ರೀ ಸುಮ್ನನಾದ್ರಿ..!! ನಿಮ್ಗಾಗಲ್ಲ ಅಂದ್ರೆ, ಪಕ್ಕಕ್ಕಿಟ್ಟಿರಿ. ಆಮೇಲ್ ನಾನೇ ಬಿಸಾಕ್ತೀನಿ" ಅಂದೆ. ಸುಮ್ನೆ ಆಚೆ ಹೊರಟೋದ್ರು. ನನ್ನ ಕೆಲ್ಸ ಎಲ್ಲ ಮುಗಿಸಿ ಆಚೆ ಬಂದೆ. ಸೋಫಾ ಮೇಲೆ ಮೌನವಾಗಿ ಕೂತಿದ್ರು. "ಎಲ್ಲಿಟ್ಟಿದ್ದೀರಪ್ಪ ಬಿಸಾಕೋದು ..?" ಅಂದೆ.

"ಏನಿಲ್ಲ ಬಿಡು" ಅಂದ್ರು. ಯಾಕೋ ಸಪ್ಪಗಾದ್ರು ಅನ್ನಿಸ್ತು. "ಯಾಕ್ರೀ ಏನಾಯ್ತು? ಇದ್ದಕಿದ್ದಾಗೆ ಮೌನವಾದ್ರಲ್ಲ".

"ಏನಿಲ್ಲ, ನಾನೇನೋ ಕೆಲ್ಸಕ್ಕೆ ಬರ್ದೇ ಇರೋದನ್ನ ಆಚೆ ಬಿಸಾಕು ಅಂತ ನಿಂಗೆ ಹೇಳ್ದೆ". ಅದೇನು ಅಂತ ಕೂಡ ಕೇಳ್ದೆ. ನೀವೇ ಬಿಸಾಕೀಂತ ನೀನಂದೆ. ನಂಗೆ ಏನ್‌ಹೇಳ್ಬೇಕು ಅಂತ ಗೊತ್ತಾಗ್ಲಿಲ್ಲ, ಅದಕ್ಕೆ ಇಲ್ಲಿ ಬಂದು ಕೂತೆ" ಅಂತಂದ್ರು.

"ಮತ್ತೆ ನೀವು ಹೇಳಿದ್ದಾದ್ರು ಏನೂ..? ಇದನ್ನೂ ಬಿಸಾಕು ಅಂದ್ರಿ?"

"ನಾನು ಹೇಳಿದ್ದು ನನ್ನನ್ನೇ ಬಿಸಾಕು ಅಂತ. ಕೆಲ್ಸಕ್ಕೆ ಬರ್ದೇ ಇರೋದು "ವೇಸ್ಟ್ ಬಾಡಿ" ಅಂತ ತಮಾಷೆಗೆ ಹೇಳಿದ್ದು" ಅಂದ್ರು.

ನಾನೂ ಪೆದ್ದು ಮುಂಡೇದು. ತಡವಾಗಿ ಅರ್ಥ ಆಯ್ತು ಅವರು ಹೇಳಿದ್ದು. ರೀ. ಇದು ತಮಾಷೇನಾ ಅಂದವಳು...!!

ಇಬ್ರಿಗೂ ಬೇಜಾರಾಗ್ಬಾರ್ದು ಅಂತ ನಾನು, "ಅಷ್ಟೇ ತಾನೇ!! ನೀವೊಬ್ರೆ ಅಲ್ಲಪ್ಪಾ, ಕೆಲ್ಸಕ್ಕೆ ಬರ್ದೇ ಇರೋರು, ನಾನೂ ಇದ್ದೀನಿ ನಿಮ್ಮ ಜೊತೇಲಿ. ನನ್ನನ್ನೂ ಆಚೆ ಹಾಕ್ಬೇಕು, ಹಾಕ್ತೀರಾ.. ಅಷ್ಟು ಸುಲಭನಾ.!!. ನಿಮ್ಮನ್ನ ನಾನ್ ಆಚೆ ಹಾಕಕ್ಕಾಗಲ್ಲ. ನನ್ನನ್ನ ನೀವೂ ಆಚೆ ಹಾಕಕ್ಕಾಗಲ್ಲ. ಇದೇ ಜೀವನ ರೀ....ಇಷ್ಟು ದಿನ ಹಾಗೇ ತಾನೇ ಸಾಗಿದ್ದು. ಇನ್ನು ಮುಂದೇನೂ ಹಾಗೇ ಸಾಗುತ್ತೆ. ಇನ್ನೂ ನಿಮಗೆ ಅರ್ಥ ಆಗಿಲ್ಲ ನೋಡಿ. ಕೆಲ್ಸಕ್ಕೆ ಬರ್ದೆ ಇರೋದು ಅನ್ನೋ ಪ್ರಶ್ನೆನೇ ಬರಲ್ಲ. ನಿಮಗಾಗಿದ್ದು ನೀವ್ ಮಾಡಿ, ನನಗಾಗಿದ್ದು ನಾನ್ ಮಾಡ್ತೀನಿ ಅಷ್ಟೇ..!! ಅದ್ರಲ್ಲೇನಿದೆ" ಅಂದವಳು...

"ಯಾಕ್ರೀ ನೆನ್ನೆ ನಾನಂದ ಮಾತಿಗೆ ಬೇಜಾರಾಯ್ತಾ..?" ಅಂದೆ.

"ಇಲ್ಲಪ್ಪ.. ಅದು ನನ್ನ ತಲೇಲೆ ಇಲ್ಲ" ಅಂದ್ರು.

"ಮತ್ತೆ ಯಾಕೆ, ನಾನ್‌ತಾನೇ ಏನಂದೆ? ಸುಮ್ನೆ ಕೂತಿರ್ತೀರ, ಇಷ್ಟೂ ಮಾಡಕ್ಕಾಗಲ್ವ ಅಂದೆ. ಅದನ್ನೇ ಮನಸಲ್ಲಿ ಇಟ್ಕೊಂಡು ಈ ಥರ ಮಾತಾಡೋದು ಸರೀನಾ..? ಹೇಳಿ. ಯಾರಾದ್ರೂ ಏನಾದ್ರೂ ಹೇಳೋಕ್ ಮುಂಚೆ ನೀವೇ ನಿಮ್ಮ ಕೈಲಾಗೋ ಕೆಲ್ಸ ಮಾಡ್ಕೊಂಡು, ಯಾರ ಕೈಲೂ ಹೇಳಿಸ್ಕೊಳ್ದೆ ಇರ್ಲಿ" ಅಂತ ಸೂಕ್ಷ್ಮವಾಗಿ ಹೇಳ್ದೆ.

"ಇದೇ.. ಇದೇ ಮಾತು ನಿನ್ನಿಂದ ಬರುತ್ತೆ ಅಂತಲೇ ಏನೂ ಮಾತಾಡ್ದೆ ನಾನು ಆಚೆ ಬಂದಿದ್ದು. ನೀನಿಲ್ಲದ ಒಂದು ಕ್ಷಣಾನೂ ಊಹೆ ಮಾಡ್ಕೊಳ್ಳಕ್ಕು ನನ್ನಿಂದ ಆಗಲ್ಲಮ್ಮ, ನಿನ್ನನ್ನ ಆಚೆ ಹಾಕೋದಾ...!! ನಾನೂ ಹೋಗಲ್ಲ," ಅಂದ್ರು. ಮುಖ ಹುಳ್ಳಗೆ ಮಾಡ್ಕೊಂಡು.

ಎಷ್ಟು ಸಹಜ ಅಲ್ವಾ...!!

ಉದ್ಯೋಗದಲ್ಲಿ ತೊಡಗಿದ್ದಾಗ ಮನೆ ಮಕ್ಕಳು ಅಂತ ಸಮಯ ಮೀರಿ ದುಡೀತಾರೆ. ನಿವೃತ್ತಿ ಆದ್ಮೇಲೆ ಕೆಲ್ಸ ಇಲ್ಲ ಬದುಕಿಲ್ಲ ಸುಮ್ನೇ ಇದ್ದೀನಲ್ಲ ಅಂತ ಇಲ್ಲದ್ದೆಲ್ಲ ಯೋಚ್ನೆ ಮಾಡ್ತಾರೆ. ಮಾತುಮಾತಿಗೂ ಸಿಡುಕ್ತಾರೆ .ಮನಸು ಎಷ್ಟು ಸೂಕ್ಷ್ಮ ಆಗಿರುತ್ತೆ ಅಂದ್ರೆ ಏನು ಮಾತಾಡಿದ್ರೂ ತಪ್ಪಾಗಿ ಕಾಣುತ್ತೆ. ನಮ್ಮನ್ನು ಯಾರೂ ಗಮನಿಸ್ತಿಲ್ಲ ಅಂತ ಅವರಿಗೆ ಅವರೇ, ನಾನು ವೇಸ್ಟ್ ಬಾಡಿ, ಕೆಲ್ಸಕ್ಕೆ ಬಾರದೆ ಇರೋನು ಅಂತೆಲ್ಲ ಕೀಳರಿಮೆ ಬೆಳೆಸ್ಕೊಂಡು, ರಿಟೈರ್ಡ್ ಆಗಿ ಮನೇಲಿ ಕೂತಿದ್ದೀನೀ ಅಂತ ಉದಾಸೀನ ಮಾಡ್ತಿದ್ದಾರೆ ಅಂತ ತಮ್ಗೆ ತಾವೇ ಅಂದ್ಕೊತಾರೆ.

ಇದು ನಮ್ಮನೆ ಕಥೆ ಆದ್ರೆ..

ಮೊನ್ನೆ ನನ್ನ ಗೆಳತಿ ಮನೆಗೆ ಹೋಗಿದ್ದೆ. ಅವ್ಳು ನನ್ನನ್ನು ನೋಡಿ ಸಂತೋಷಪಟ್ಟಳು. .ಮುಖದ ಮೇಲೆ ನಗು ಏನೋ ಬಂತು. ಆದ್ರೂ ಏನೋ ನೋವಲ್ಲಿದ್ದಾಳೆ ಅನ್ನಿಸ್ತು.. "ಯಾಕೇ.. ಏನಾಯ್ತು..? ಹುಷಾರಿದ್ದಿ ತಾನೆ" ಕೇಳ್ದೆ.

"ಹುಷಾರಿದ್ದೀನಿ ಕಣೆ. ಯಾಕೋ ಮನಸ್ಸೇ ಸರಿಯಿಲ್ಲ, ಬೇಜಾರು" ಅಂದ್ಲು.. ಅವ್ಳು ನನ್ನ ಹತ್ರ ಯಾವುದನ್ನೂ ಮುಚ್ಚಿಡಲ್ಲ. ಎಲ್ಲಾನೂ ಮನಸು ಬಿಚ್ಚಿ ಹೇಳ್ಕೋತಾಳೆ.. ಯಾಕೋ ಇವತ್ತು ಏನೂ ಹೇಳ್ಲಿಲ್ಲ.. ನಾನೂ ಬಲವಂತ ಮಾಡ್ಲಿಲ್ಲ. ಲೋಕಾರೂಢಿ ಮಾತುಕತೆ ಆಯ್ತು. ನಾನೂ ಹೊರಟೆ. ನನ್ನನ್ನು ಕಳಿಸಲು ಆಚೆ ಬಂದವಳು, ಕೈ ಹಿಡ್ಕೊಂಡು, "ಇವತ್ತು ಏನಾಯ್ತು ಗೊತ್ತೇನೆ" ಅಂದ್ಲು..

“ಕೊನೆಗೂ ಬಾಯ್ ಬಿಟ್ಯಲ್ಲ, ಹೇಳು” ಅಂದೆ.

“ದಿನಾ ಮಾಡೋ ಹಾಗೇ ಬೆಳಗ್ಗೆ ಇವ್ರಿಗೆ ತಿಂಡಿ ಮಾಡ್ಕೊಟ್ಟೆ. ಅವರಿಗಿಷ್ಟ ಆಗ್ಲಿಲ್ಲ ಅನ್ಸುತ್ತೆ. ಒಂದು ತುತ್ತು ತಿಂದು ಕೈ ತೊಳ್ಕೊಂಡ್ ಎದ್ದೋದ್ರು. ಯಾಕ್ರೀ ಎದ್ದೋದ್ರಿ ಚೆನ್ನಾಗಿಲ್ವ.? ಬೇರೆ ಏನಾದ್ರೂ ಮಾಡ್ಕೊಡ್ಲಾ ಅಂದ್ರೆ ಏನೂ ಬೇಡ ಅಂದ್ರು..

“ದಿನಾ ಹಾಗೇ ಮಾಡ್ತೀನ? ಏನೋ ಒಂದಿನ ಕೆಡುತ್ತೆ, ಅನುಸರಿಸ್ಕೋ ಬೇಕಪ್ಪ. ಒಂದು ದಿನದ್ದಾ ಅಂದೆ, ಅಷ್ಟೇ ಕಣೆ, ಅದಕ್ಕೇನಂದ್ರು ಗೊತ್ತಾ..?”

“ನಾನೂ ನೋಡ್ತಾ ಇದ್ದೀನಿ. ನೀನು ಮುಂಚಿನ ಥರ ಇಲ್ಲ. ರಿಟೈರ್ಡ್ ಆಗಿ ಮನೇಲಿ ಕೂತಿದ್ದೀನಿ ಅಂತ ತುಂಬ ಉದಾಸೀನ ಮಾಡ್ತಿದ್ದೀಯ. ನಂಗೇನೂ ಗೊತ್ತಾಗಲ್ಲ ಅಂದ್ಕೊಂಡಿದ್ದೀಯ” ಅಂತ ಮುಖದ ಮೇಲೆ ಹೊಡ್ದ ಹಾಗೆ ಅಂದ್ಬಿಟ್ರು, ತುಂಬ ನೋವಾಯ್ತು” ಅಂತ ಕಣ್ಣಲ್ಲಿ ನೀರು ಹಾಕ್ಕೊಂಡ್ಲು. ನಂಗೂ ಯಾಕೋ ತುಂಬ ಬೇಜಾರಾಯ್ತು..

ಮೊನ್ನೆ ನಮ್ಮನೇಲಿ ಆಗಿದ್ ಘಟನೆ ಕಣ್ ಮುಂದೆ ಬಂತು.

"ಹೋಗ್ಲಿ ಬಿಡೆ ಬೇಜಾರ್ ಮಾಡ್ಕೋಬೇಡ, ಎಲ್ಲರ ಮನೆಲೂ ಇದ್ದದ್ದೇ” ಅಂದೇ.

"ಸಣ್ಣಪುಟ್ಟದ್ದಕ್ಕೆಲ್ಲ ರೇಗ್ತಾರೆ ಕಣೇ. ಎಷ್ಟೂಂತ ಸಹಿಸೋದು. ಯಾವತ್ತೂ ಹಾಗೆ ಮಾಡಿಲ್ಲ. ನಂಗೂ ಬೇಜಾರಾಗಲ್ವ ಹೇಳು” ಅಂದ್ಲು.

“ಮನೇಲಿರ್ತಾರಲ್ಲ ಅವರಿಗೆ ಹಾಗನ್ಸೋದು ಸಹಜ. ನಾವೂ ಅವ್ರಿಗೆ ಬೇಜಾರಾಗೋಹಾಗೆ ಮಾತಾಡ್ಬಾರ್ದು. ಆದಷ್ಟೂ ಸಮಾಧಾನವಾಗಿ ಇರ್ಬೇಕು..” ಅಂತ ಹೇಳಿ, ನಮ್ಮನೆಯಲ್ಲಾದ ಮಾತುಕತೆ ಅವಳಿಗೆ ಹೇಳ್ದೆ. ಸ್ವಲ್ಪ ಸಮಾಧಾನ ಆದ್ಲು. ನಾನೂ ಮನೆಗೆ ಬಂದೆ.

ಇದನ್ನೆಲ್ಲ ಸಹಿಸ್ಕೊಳ್ಳೋಕೆ ನಮಗೆಷ್ಟು ತಾಳ್ಮೆ ಇದ್ರೂ ಸಾಲ್ದು. ನಾವೂ ಇವರ ಥರ ಅನ್ನೋಕ್ಕಾಗುತ್ತಾ..!! ಆಗಲ್ವೆ..!! ಮಾತಾಡದೇ ಮೌನವಾಗಿರೋದೊಂದೆ ನಮಗೆ ದಾರಿ.

ಇಳಿ ವಯಸ್ಸಿನಲ್ಲಿ ಇಂಥ ಆಲೋಚನೆ ಬರೋದು ಸಹಜ.. ಇವರಿಗೇ ಅಲ್ಲ. ಎಷ್ಟೋ ಮನಸುಗಳಿಗೆ ಬಂದಿರಬಹುದು. ಕೆಲವು ಕಲ್ಲು ಮನಸಿನವ್ರು ಹಿರಿಯರು ಅನ್ನೋದನ್ನು ನೋಡ್ದೆ, ನೋವಾಗೋ ಹಾಗೆ ಬೈಯ್ಯೋದನ್ನು ಕೇಳಿದ್ದೀವಿ. ಬೈಗುಳ ಕೇಳಿಸ್ಕೊಂಡಾಗಲೆ ಬೇಜಾರಾಗಿ ಇಂಥಾ ಮಾತುಗಳನ್ನು ಆಡಿಬಿಡ್ತಾರೆ. ಆದ್ರೆ ಹೆಂಗಸರಿಗೆ ಸಹನೆ ಜಾಸ್ತಿ. ಬಾಯಿಗೆ ಬಂದ್ರು ನಾಲಿಗೆ ತಡೆದುಬಿಡುತ್ತೆ. ಗಂಡಸರು ಹಾಗಲ್ಲ. ಅವರಿಗೆ ಕೆಲವೊಂದು ಸುಳಿವು ಸೂಕ್ಷ್ಮಗಳೇ ಗೊತ್ತಾಗಲ್ಲ. ಇದ್ರಿಂದ ಯಾರಿಗಾದ್ರೂ ನೋವಾಗುತ್ತೆ ಅನ್ನೊ ಅರಿವು ಕೂಡ ಇಲ್ಲದೇ ಆಡಿಬಿಡ್ತಾರೆ. ಎಲ್ಲರೂ ಹಾಗೇ ಅಂತ ನಾನು ಹೇಳಲ್ಲ. ಸೂಕ್ಷ್ಮ ಮನಸಿನವರ ಮನಸ್ಥಿತಿ ಇದು. ಆದ್ರೆ ಇದೇ ವಾಸ್ತವ, ಅಂತ ಯಾಕೆ ಅಂದ್ಕೊಳಲ್ಲ. ಅದರ ಅರಿವೂ ಅವರಿಗೆ ಇರಬೇಕು. ಜೊತೆಗೆ ಮನಸೂ ಮಾಗಬೇಕು. ದಿನೇದಿನೇ ಗಟ್ಟಿ ಆಗ್ತಾ ಹೋದಾಗ್ಲೆ ನೋವು ಕಡಿಮೆ ಆಗೋದು.

ಗಂಡಸರೇನೋ ನಿವೃತ್ತಿ ಆಗಿ ಮನೆಗೆ ಬರ್ತಾರೆ. ಹೆಂಗಸರಿಗೆ ಯಾವ ನಿವೃತ್ತಿ? ಕೊನೇವರ್ಗೂ ಮಾಡ್ತಾನೆ ಇರೋದೇ. ಇಲ್ಲಿ ಇಬ್ಬರೂ ಸಮಭಾಗಿಗಳೆ?

ಯಾರೂ ಮನಸಿಗೆ ನೋವು ಮಾಡಿಕೊಳ್ಳದೆ ಅವರವರಿಗೆ ಆಗೋ ಕೆಲ್ಸದಲ್ಲಿ ತೊಡಗಿಸಿಕೊಂಡು ಖುಷಿಯಾಗಿ ಇದ್ರಾಯ್ತು., ಇದು ನಮಗೆ ಮಾತ್ರ ಅಲ್ಲವಲ್ಲ, ಪ್ರಕೃತಿ ನಿಯಮ ಎಲ್ಲರಿಗೂ ಆದದ್ದೇ ನಮಗೂ..!! ವಾಸ್ತವಕ್ಕೆ ತಲೆ ಬಾಗಲೇಬೇಕಲ್ವ, ಅದೇ ಸತ್ಯ...!!

***

ಕನಸುಗಳಿರದ ಮಿಂಚಿನ ಸೀರೆಯಾಕೆ

– ರಾಧಿಕಾ ವಿ ಗುಜ್ಜರ್

ಗಿರಾಕಿ ಹುಡುಕಿ ಬಲೆಗೆ ಹಿಡಿಯುವಾಗ
ಇವಳೇ ಗಿರಾಕಿಯಾದಳು ಗಸ್ತು ಪೋಲೀಸಿಗೆ
ಬೆಳಗಿನ ಹನ್ನೊಂದಾದರೂ ಹಲ್ಲುಜ್ಜಿಲ್ಲ
ಥಮ ಥಮಿಸುವ ಮಿಂಚಿನ ಸೀರೆಯಾಕೆ

ರವಿಕೆಯಲ್ಲಿನ ಹಣದ ಚೀಲ ತಡವಿ
ಎಣಿಸುತ್ತಿಹಳು ಹೊರನಡೆವ ಹೆಜ್ಜೆ
ಮಾಮೂಲಿ ನೀಡುತ್ತಿದ್ದರೂ ಪೇದೆಗೆ
ಮೂರು ತಿಂಗಳಿಗೊಮ್ಮೆಯಿದು, ಮಾಮೂಲೇ

ಕಟಕಟೆಗೆ ನಿಲ್ಲಿಸಿದರೆ ಕೈಮುಗಿವಳು
ನ್ಯಾಯಮೂರ್ತಿಯಲ್ಲಿ ನಂಬಿಕೆ ಅವಳದು
ಮಕ್ಕಳ ತಾಯಿಯಾಗಿ ವಾಸನಾ ಗುದ್ದಾಟ
ವಿಮುಖ ಮುಖ ಮುಚ್ಚುವುದೇಕೆ ಅಕಟಕಟ

ಸೊಬಗೇರದ, ಸಂಸಾರವಿರದ ಖೇದವೇ?
ಸೋಸಿ ಬಸಿದ ಒಲವ ಗಂಗೆ ಕದಡಿತೇ?
ತನ್ನವ ಧಿಕ್ಕರಿಸಿದ ದೇಹ, ದಂಡವೇ?
ಬಂಡವಾಳವಾಗಿ ಕಾಯವೇ ಮುಂಗಟ್ಟೆಯೇ?

ಮರಳಲಾಗದ ಕಾಮದ ಚಟ್ಟವೇರಿದಾಕೆಯ
ಸುಟ್ಟ ಕನಸುಗಳ ಅಸ್ಥಿ ವಿಸರ್ಜನೆ ನಿತ್ಯ

***

ಸಣ್ಣ ಕತೆ

ಗೆಸ್ಟ್ ರೂಮ್

– ನಾಗಮಂಗಲ ಶಾಂತಾ

"ಅಜ್ಜಿ.. ಅಜ್ಜಿ.. ಬಾ, ನಿನಗೆ ನಮ್ಮ ಹೊಸ ಮನೆ ತೋರಿಸ್ತೀನಿ, ಎಷ್ಟು ಚೆನ್ನಾಗಿದೆ ಗೊತ್ತಾ", ಹತ್ತು ವರ್ಷದ ಸಿಂಧು ಕಮಲಮ್ಮನ ಕೈ ಹಿಡಿದು ಎಳೆಯುತ್ತಿದ್ದಳು. ಒಳ್ಳೆಯ ಜರಿ ಲಂಗ ತೊಟ್ಟು, ಕಳೆಕಳೆಯಾಗಿ ದೃಷ್ಟಿ ತಾಗುವಂತಿದ್ದ ಸಿಂಧುವನ್ನು ನೋಡಿ ಕಮಲಮ್ಮನಿಗೆ ಮುದ್ದು ಉಕ್ಕಿ ಬಂತು. ಸಿಂಧುವಿಗೆ ಅಜ್ಜಿ ಅಂದರೆ ಮೊದಲಿಂದಲೂ ಬಹಳ ಅಕ್ಕರೆ. ಅಜ್ಜಿ ತಮ್ಮ ಹಳ್ಳಿಯಿಂದ ಬೆಂಗಳೂರಿನ ತಮ್ಮ ಮನೆಗೆ ಅಪರೂಪಕ್ಕೆ ಬಂದರು ಅಂದರೆ, ಬಂದ ದಿನದಿಂದ ಅದು ಅಜ್ಜಿಯ ಸೆರಗಿನ ಹಿಂದೇ ಇರುತ್ತಿತ್ತು. ಅದೇ ಸಿಂಧುವಿನ ಅಪ್ಪ, ಅಂದರೆ ಕಮಲಮ್ಮನವರ ಏಕಮಾತ್ರ ಪುತ್ರ ಪ್ರಕಾಶ ಹೊಸದಾಗಿ ಕಟ್ಟಿಸಿದ ಮನೆಯ ಗೃಹಪ್ರವೇಶ ಇವತ್ತು. ಅದಕ್ಕೆಂದೇ ಕಮಲಮ್ಮನವರು ಹಳ್ಳಿಯಿಂದ ಹಿಂದಿನ ದಿನವಷ್ಟೇ ಬಂದಿಳಿದಿದ್ದರು.

ಹೊಲ, ಮನೆ, ದನ, ಕರು ಎಲ್ಲಾ ಇದ್ದ ಮನೆಗೆ ಸೊಸೆಯಾಗಿ ಬಂದಿದ್ದ ಕಮಲಮ್ಮನವರ ಬದುಕೆಲ್ಲಾ ಹಳ್ಳಿಯಲ್ಲೇ ಕಳೆದಿತ್ತು. ಈಗ್ಗೆ ನಾಲ್ಕೈದು ವರ್ಷಗಳಾಗಿತ್ತು ಪತಿ ತೀರಿಕೊಂಡು. ಆಮೇಲೂ ಅವರು ಹಳ್ಳಿಯಲ್ಲೇ ಇದ್ದು ವ್ಯವಹಾರ ನಿಭಾಯಿಸಿಕೊಂಡು ಹೋಗುತ್ತಿದ್ದರು. ಗಂಡ ಇದ್ದಾಗ ದನ ಕರುಗಳೆಲ್ಲಾ ಇದ್ದವು. ಅವರು ಹೋದಮೇಲೆ ನೋಡಿಕೊಳ್ಳಲು ಕಷ್ಟ ಅಂತ ಎಲ್ಲಾ ಕೊಟ್ಟುಬಿಟ್ಟಿದ್ದರು. ಅಲ್ದೆ ಒಬ್ಬಳಿಗೆಷ್ಟು ಹಾಲು, ಮೊಸರು ಬೇಕು ಅನ್ನೋದು ಒಂದು ಕಾರಣ. ಒಂದಷ್ಟು ಹೊಲ, ಸ್ವಂತದ ಮನೆ ಇತ್ತು. ಕಾಲದಿಂದ ಇದ್ದ ಆಳು-ಕಾಳುಗಳು, ಹೊಕ್ಕು ಬಳಕೆಯ, ಗೊತ್ತು-ಪರಿಚಯ ಇರೋ ಊರು-ಜನ. ನಂಬಿಕೆಯ ಜನ. ಕಮಲಮ್ಮನವರಿಗೆ ಗಂಡ ಇಲ್ಲ ಎನ್ನುವ ದುಃಖ, ಒಂಟಿತನವನ್ನು ಬಿಟ್ಟರೆ, ಕೈತುಂಬಾ ಕೆಲಸವೇ. ಜೊತೆಗೆ ಕಮಲಮ್ಮನಿಗೆ ಕೂತು ಕಾಲಕಳೆಯುವ ಅಭ್ಯಾಸವೂ ಇರಲಿಲ್ಲ. ಬಿಡುವಿನ ವೇಳೆಯಲ್ಲಿ ಹತ್ತಿ-ಬತ್ತಿ ಅಂತಾ, ಹಳೇಸೀರೆಗಳನ್ನು ಹರಿದು ಕ್ರೋಶಾದಲ್ಲಿ ಕಾಲೊರೆಸಿಕೊಳ್ಳೋ ಮ್ಯಾಟ್‌ಗಳನ್ನು ಹೆಣೀತಾ.. ಕಾಲ ಕಳೆಯೋರು. ಎಷ್ಟೇ ಹತ್ತಿರದ ಮದುವೆ ಮುಂಜಿಗಳಾದರೂ, ಅವರು ತುಂಬಾ ದಿನ ಊರು ಬಿಡುತ್ತಿರಲಿಲ್ಲ. ಹಾಗೆಯೇ ಮಗನ ಮನೆ ಗೃಹಪ್ರವೇಶಕ್ಕೂ ಹಿಂದಿನ ದಿನವಷ್ಟೇ ಬಂದಿದ್ದರು. ಮಗ-ಸೊಸೆ ಇಬ್ರೂ ಕಾಗದ ಬರೆದು, ಫೋನಲ್ಲಿ ಮಾತಾಡಿ ಒಂದು ವಾರ ಮೊದಲು ಬನ್ನಿ ಅಂತಾ ಕರೆದೇನೋ ಇದ್ದರು. ಆದರೆ ಕಮಲಮ್ಮನವರು ಮಾತ್ರ – "ಈಗಿನ ಕಾಲದಲ್ಲಿ ಮುಂಚಿತವಾಗಿ ಹೋಗಿ ಮಾಡೋದಾದರೂ ಏನಿರತ್ತೆ? ಎಲ್ಲಾ ಕಾಂಟ್ರಾಕ್ಟ್ ಕೊಟ್ಟು ಕೈ ಬೀಸಿಕೊಂಡು ಓಡಾಡೋ ಕಾಲದಲ್ಲಿ. ಇಲ್ಲಿ ಹಳ್ಳಿಮನೆಲಾದರೆ ಕೈತುಂಬಾ ಜಂಬ್ರ, ಬಿಟ್ಟು ಹೋದ್ರೆ ಕೆಡತ್ತೆ" ಅಂತಾ ಹೇಳಿ, ಅವರು ಹಿಂದಿನ ದಿನವಷ್ಟೇ ಬಂದಿದ್ದರು. ಮಗ ಮನೆ ಕಟ್ಟಿಸ್ತಾ ಇದ್ದಾನೆ ಅಂತಾ ಗೊತ್ತಿದ್ರೂ, ಒಮ್ಮೆಯೂ ಕಟ್ಟಿಸುವಾಗ ಹೋಗಿ ನೋಡಿರಲಿಲ್ಲ.

ಮನೆ ಕಟ್ಟಿಸಲು ಶುರುಮಾಡಿ, ಅರ್ಧ ಮುಕ್ಕಾಲು ಕೆಲಸ ಮುಗಿದಿರುವಾಗ, ದುಡ್ಡು ಸಾಲದೇ ಬಂದು, ಹಳ್ಳಿಗೆ ಬಂದಿದ್ದನಲ್ಲ. "ಅಪ್ಪನೂ ಇಲ್ಲ, ಇನ್ಯಾಕೆ ಹೊಲ ಗದ್ದೆ. ನೀನ್ ತಾನೆ ಎಷ್ಟು ದಿನಾ ಅಂತ ಗಟ್ಟಿಯಾಗಿರ್ತೀಯ ಇಲ್ಲೇ ಇದ್ದು ಇವನ್ನೆಲ್ಲಾ ನೋಡ್ಕೊಳ್ಳಾಕೆ. ಇವತ್ತಲ್ಲ ನಾಳೆ ನೀನು ನಮ್ಮ ಹತ್ರಕ್ಕೆ ಬರಲೇಬೇಕು. ಆಳುಗಳದ್ದು ಯಾವ ನಂಬಿಕೆ. ಮಾರಿಬಿಡೋಣ. ಮೇಲೆ ಎರಡೇ ರೂಮು ಸಾಕು ಎಂದುಕೊಂಡಿದ್ವಿ, ಈಗ ಇನ್ನೊಂದು ರೂಮು ಹಾಕಿಸಿಬಿಡ್ತೀನಿ. ನೀನು ಬಂದಾಗ ಇರಕ್ಕೆ ಆಗತ್ತಮ್ಮ. ಈಗಲೇ ಕೆಲಸ ನಡೀತೀರೋವಾಗಲೇ ಮಾಡ್ಸಿಬಿಡೋಣ ಅಂತಾ. ಏನಂತೀಯಾ?" ನನ್ನನ್ನೇ ಪ್ರಶ್ನೆ ಕೇಳಿ ನಿಲ್ಲಿಸಿದ. ನಾನು ಹೇಳಕ್ಕೇನಿತ್ತು? ಅಥವಾ ಅವನಿಗೇ ನನ್ನ

ಉತ್ತರದ ನಿರೀಕ್ಷೆ ಇತ್ತೋ ಇಲ್ಲವೋ. ನಾನು ಏನಾದ್ರೂ ಹೇಳೋ ಮೊದಲೇ "ನೋಡಮ್ಮ ಹಳ್ಳಿ ಹೊಲ ಮಾರಿಬಿಡೋಣ. ಎಲ್ಲಾ ಅಲ್ಲ. ನಿಂಗೂ ಹೊತ್ತು ಹೋಗಬೇಕಲ್ಲ. ಸ್ವಲ್ಪ ಇಟ್ಕೊಳ್ಳೋಣ. ಆಮೇಲೆ ನೋಡೋಣ ಅಲ್ವೇನಮ್ಮ?" ಎಂದ ಮಗ, ಮಾತಿನ ಕೊನೆಗೆ ಮನೆಕಟ್ಟೋಕೆ ಶುರುಮಾಡುವಾಗ ಇರೋ ಎಸ್ಟಿಮೇಟ್, ಗೋಡೆ ಮೇಲೇರ್ತಾ-ಏರ್ತಾ ಅದೂ ಏರಿಬಿಡ್ತಲ್ಲಮ್ಮಾ" ಎಂದು ಒಂದು ಕೊಸರನ್ನೂ ಸೇರಿಸಿದ.

ಹೊಲ ಮಾರಿಬಿಡೋಣ ಅಂತಾ ಎಷ್ಟು ಸಲೀಸಾಗಿ ಹೇಳ್ತಾ ಇದ್ದಾನಲ್ಲ ಇವನು? ಮದುವೆ ಆಗಿ ಈ ಮನೆಗೆ ಬಂದಾಗ ಮಾವನವರದ್ದು ಅಂತಾ ಇದ್ದದ್ದು ಪಿತ್ರಾರ್ಜಿತದ ಕಾಸಗಲ ಹೊಲ. ಯಜಮಾನರು ಆಮೇಲೆ ರೂಢಿಸಿದ್ದು. ಎಷ್ಟೋ ಸಾರಿ ಮಾರಾಟಕ್ಕೆ ಬಂದ ಹೊಲ ಕೊಳ್ಳಕ್ಕೆ ದುಡ್ಡು ಸಾಲದೆ ಹೋದಾಗ, ನನ್ನ ಬಳೆ ಸರ ಬ್ಯಾಂಕಲ್ಲಿ ಅಡ ಇಟ್ಟು ದುಡ್ಡು ಹೊಂದಿಸಿದ್ದಿದೆ. ಯಜಮಾನರಂತೂ, "ಕಮಲೂ, ಹೇಳ್ಬೇಕು ಅಂದ್ರೆ, ಇದೆಲ್ಲಕ್ಕೂ ನೀನೇ ಯಜಮಾನ್ತಿ. ಅನ್ನಕೊಡೊ ಭೂಮಿ, ನಿನ್ನ ಹಾಗೆ ಅನ್ನಪೂರ್ಣೆನೇ" ಅಂತಾ ಹೇಳೋರು. ಆಗೆಲ್ಲಾ ನಂಗೂ ಏನೋ ಒಂಥರಾ ಹೆಮ್ಮೆ. ಮನಸ್ಸು ಅರಳೋದು. ಇಷ್ಟು ದಿನ ಊಟ ಮಾಡ್ತಿರೋದು ಅದೇ ಭೂಮಿದೆ ಅನ್ನ. ಇವನೂ ಚಿಕ್ಕೋನಾಗಿದ್ದಾಗ, ಸೊಪ್ಪಿನ ಕಡ್ಲೆ, ಅವರೆಕಾಯಿ ಕಾಲದಲ್ಲೆಲ್ಲಾ ಅವರಪ್ಪನ ಜೊತೆ ಬೆಳಗ್ಗೆ ಹೊತ್ತಿಗೆ ಮುಂಚೇನೇ ಎದ್ದು, ಕಣ್ಣು ಹೊಸಕ್ಕೋತಾ ಹೋಗಿ ಕಿತ್ತು ತರ್ತಾ ಇದ್ದ. ಮನೆ ಮುಂದಿನ ಜಗಲಿಕಟ್ಟೆಲಿ ಕೂತು ಸೊಪ್ಪಿನ ಕಡ್ಲೆ ತಿಂತಿದ್ದ. ಇವನು ಬೆಳೆದು, ಕಾಲೇಜ್ ಓದಿ ಕೆಲಸ ಸಿಕ್ಕಿದ್ದೂ ಇದರಿಂದಲೇ. ಇದನ್ನು ಮಾರ್‌ಬಿಡೋಣ ಅಂತಾನಲ್ಲ? ಭೂತಾಯಿ ಜೊತೆ ಸಂಬಂಧಾನೇ ಕಡ್ಕೋ ಅಂತಾನಲ್ಲ? ಯಾಕೋ ನಂಗೆ ಸರಿ ಕಾಣಲಿಲ್ಲ. ಹಾಗಂತ ಮಗನಿಗೆ ನೇರವಾಗಿ ಹೇಳಕ್ಕಾಗದೇ, "ಹೌದಪ್ಪ. ಅಷ್ಟಲ್ಲದೇ ನಮ್ಮ ಹಿರಿಯೋರು ಹೇಳಿದ್ರೆ, 'ಮನೆ ಕಟ್ಟಿ ನೋಡು' ಅಂತಾ. ಹೇಗೋ ಆಗತ್ತೆ. ಈಗ ಏಳು ಊಟಕ್ಕೆ" ಎಂದು ನಾನು ಎದ್ದು ಅಡುಗೆಮನೆಗೆ ನಡೆದೆ.

ಮರುದಿನ ಮಗ ಬೆಂಗಳೂರಿಗೆ ಹೊರಟು ನಿಂತ. ಅವನ ಮುಖದ ಮೇಲೆ ನೆನ್ನೆ ಅವನು ಎತ್ತಿದ ವಿಷಯಕ್ಕೆ ನನ್ನ ಉತ್ತರ ಏನು ಎಂದು ಕಾಯುತ್ತಿದ್ದಾನೇನೋ ಎನ್ನುವಂಥ ಭಾವ. ಹೊಲ ಮಾರಾಟ ಮಾಡೋ ಮನಸ್ಸು ನಂಗೆ ಖಂಡಿತಾ ಇರಲಿಲ್ಲ. ಇನ್ನೂ ಕೈಕಾಲು ಗಟ್ಟಿಯಿದ್ವು. ಸಹಾಯಕ್ಕೆ ಆಳು ಕಾಳು, ಅಕ್ಕ ಪಕ್ಕ ಎಲ್ಲಾ ಚೆನ್ನಾಗೇ ಇದ್ದಾರೆ. ಸ್ವತಂತ್ರವಾಗಿ ಜೀವನ ಸಾಗ್ತಾ ಇದೆ. ಈ ಒಂಟಿ ಬದುಕಿಗೆ ಈಗ ಆಸರೆಯಾಗಿರೋದೆ ಈ ಹೊಲದಲ್ಲಿ ಆಳುಗಳ ಜೊತೆ ಒಂದಷ್ಟು ಕೆಲಸ ಮಾಡೋದು. ಅವರ ಮೇಲ್ವಿಚಾರಣೆ ನೋಡೋದು. ನಗರದಲ್ಲಿ ಮಗ-ಸೊಸೆ ಎಷ್ಟೇ ಚೆನ್ನಾಗಿ ನೋಡ್ಕೊಂಡ್ರೂ, 'ತುಟಿ ಹಿಡಿದು ತುಪ್ಪ ಕುಡಿಸಿದರೂ' ಈ ಕೆಲಸದಿಂದ ಬರೋ ನೆಮ್ಮದಿಯ ನಿದ್ದೆ ಬಂದೀತೇ? ಈ ಬಿಡುಬೀಸಾದ ಜೀವನ, ವಿಶಾಲವಾದ ಹೊಲಗದ್ದೆಗಳ ಬಯಲು, ಕತ್ತೆತ್ತಿದರೆ ವಿಸ್ತಾರವಾಗಿ ಕಾಣುವ ಆಕಾಶ, ಬೆಳಗೆದ್ದರೆ ಕಿವಿತುಂಬವ ಹಕ್ಕಿಗಳ ಕಲರವ, ನಗರದ ಮಗನ ಮನೆಯ ಅರುವತ್ತು-ನಲ್ವತ್ತರ ಚೌಕಟ್ಟಿನ ಗಡಿಬಿಡಿಯ ಜೀವನದಲ್ಲಿ ಸಿಗುವುದೇ? ನನ್ನನ್ನು ಹೆತ್ತಮಗನಿಗಿಂತ ಹೆಚ್ಚು ಈ ನೆಲ ಕಟ್ಟಿಹಾಕಿದೆ. ಹಾಗಂತ ಹೊಟ್ಟೆಯ ಮಗನನ್ನು ಬಿಡಕ್ಕಾಗೋಲ್ಲ. ಅವನಿಗೂ ಬೇಜಾರು ಮಾಡಬಾರದು. ಎಂದಿದ್ದರೂ ಅವನೇ ಆಗಬೇಕಾದೋನು. ರಾತ್ರಿಯೇ ನಾನು ಒಂದು ನಿರ್ಧಾರಕ್ಕೆ ಬಂದಿದ್ದೆ.

"ನೋಡು ಮಗು, ಸದ್ಯಕ್ಕೆ ಹೊಲ-ಗಿಲ ಮಾರೋದು ಬೇಡ. ಅದರಲ್ಲಿ ನಂಗೆ ಯಾವಾಗಲೂ ನಿಮ್ಮಪ್ಪನೇ ಕಾಣ್ತಾರೆ. ನನ್ನ ಕಾಲ ಆದಮೇಲೆ ನೀನು ಏನುಬೇಕಾದರೂ ಮಾಡ್ಕೋ. ಎಂತಿದ್ದರೂ ಇರೋನು ನೀನೊಬ್ಬನೇ ವಾರಸುದಾರ. ಈಗ ನಿಂಗೊದಿಷ್ಟು ದುಡ್ಡು ಬೇಕಲ್ಲವೇ? ನೋಡು ಈ ನನ್ನ ಚಿನ್ನದ ಡಾಬು, ಅಡ್ಡಿಗೆ, ಬಳೆ, ಎರಡೆಳೇ ಅವಲಕ್ಕಿ ಸರ ಅಂತಾ, ತೌರಿಂದು, ಯಜಮಾನರು ಮಾಡಿಸಿಕೊಟ್ಟಿದ್ದು ಎಲ್ಲಾ ಇವೆ. ಇಷ್ಟಕ್ಕು ಇನ್ಯಾಕೆ ನಂಗೆ ಒಡವೆ ಹೇಳು?

ಹಾಕೊಳ್ಳೋ ಕಾಲದಲ್ಲಿ ಎಲ್ಲಾ ಹಾಕ್ಕೊಂಡಾಯ್ತು. ನೋಡಿ ಮೆಚ್ಚಬೇಕಾದೋರು ಮೆಚ್ಚಾಯ್ತು. ನಾನು ಒಬ್ಬೇ. ಒಂಟಿ ಹೆಂಗಸು ಇರೊ ಮನೆ. ಇವೆಲ್ಲ ನನ್ನಹತ್ರ ಇರೋದು ಅಪಾಯವೇ. ಇವೆಲ್ಲವನ್ನೂ ಮಾರಿ ದುಡ್ಡು ಹೊಂದಿಸಿಕೊ. ಒಂದ್ ಹತ್ತು-ಹದಿನೈದು ಲಕ್ಷ ಬರಬೋದೇನಪ್ಪ. ಇಷ್ಟೇ ನನ್ನ ಕೈಲಾಗೋದು" ಎಂದು ಹೇಳಿ ಒಡವೆ ಗಂಟನ್ನು ಕೊಟ್ಟು ಕಳಿಸಿದ್ದೆ. ಆಗಲೂ ಮಗ, "ಬಾರಮ್ಮ., ಕಟ್ತಾ ಇರೋ ಮನೆನಾ ಒಂದ್ ಸರ್ತಿ ನೋಡಿ ಬರೋವಂತೆ" ಅಂತಾ ಕರೆದಿರಲಿಲ್ಲ. ನಾನೂ ಹೋಗಿರಲಿಲ್ಲ. ಅವನೇ ಆಗಾಗ್ಗೆ ಎಲ್ಲಿಗೆ ಬಂತು ಮನೆ ಅಂತಾ ತಿಳಿಸ್ತಾ ಇದ್ದನಲ.

ಕೊನೆಗೆ ಒಂದು ದಿನ ಮಗ ಸೊಸೆ, ಸಿಂಧುವಿನ ಜೊತೆ ಬಂದು, ಗೃಹ ಪ್ರವೇಶ ಇಂಥಾ ದಿನ. ನೀನು ಒಂದು ವಾರ ಮೊದಲೇ ಬಾ. ನಾನೇ ಬರ್ತೀನಿ ಬೇಕಾದರೆ ಕರಕೊಂಡು ಹೋಗಕ್ಕೆ- ಎಂದು ಕರೆದು ಹೋಗಿದ್ದ. ನಾನೂ ಹಳ್ಳಿಯಿಂದ ಆಳುಮಗ ನಿಂಗನ್ನ ಜೊತೆ ಮಾಡ್ಕೊಂಡು ಬಾಳೆಗೊನೆ, ಬೂದುಗುಂಬಳ, ಸೀಗುಂಬಳ, ತೆಂಗಿನಕಾಯಿ ಅಂತೆಲ್ಲಾ ಹೊರಸ್ಕೊಂಡು ಬಂದಿಳಿದೆ. ಮಗನ ಹೊಸ ಮನೆ ಭರ್ಜರಿಯಾಗಿತ್ತು. ನೋಡಿ ಸಂತೋಷವೇ ಆಯ್ತು. ಸಿಂಧು ಕೈ ಎಳೀತಾ "ಅಜ್ಜಿ, ಬಾ ಏನ್ ಯೋಚನೆ. ನೋಡು ಇದೇ ಡ್ರಾಯಿಂಗ್ ರೂಮ್. ನೋಡಜ್ಜಿ ಇದಕ್ಕೆ ಹಾಕಿರೋದು ಇಟಾಲಿಯನ್ ಮಾರ್ಬಲ್ ಅಂತೆ. ಅಪ್ಪ ಹೇಳ್ತಾ ಇದ್ರು..ಎಷ್ಟು ಚೆನ್ನಾಗಿದೆ ಅಲ್ವಾ?

ಕಮಲಮ್ಮನವರು, "ಅಯ್ಯೋ ಪುಟ್ಟಿ. ಅವೆಲ್ಲಾ ನಂಗೇನ್ ಗೊತ್ತಾಗತ್ತೇ? ನಮ್ ಕಾಲವೆಲ್ಲಾ ಮೊದಲು ಸಗಣಿ ಸಾರ್ಸಿದ ಮಣ್ಣು ನೆಲ, ಆಮೇಲೆ ಕೆಂಪಗಾರೆ ಮನೇಲೇ ಕಳೀತು. ನೋಡೋಕೇನೋ ಭಾಳ ಚೆನ್ನಾಗಿದೆ. ನಡೆದರೆ ಎಲ್ಲಿ ಮಾಸತ್ತೋ ಅನ್ನೋ ಹಾಗಿದೆ ಕಣೆ ನಿಮ್ಮಪ್ಪ ಕಟ್ಟಿಸಿರೋ ಮನೆ."

ಸಿಂಧು ಕಿವಿಗೆ ಅಜ್ಜಿ ಮಾತುಗಳು ಬೀಳ್ತದ್ವೋ ಇಲ್ಲವೋ? ಅವಳ ಹುಮ್ಮಸ್ಸಿಗೆ ಅಜ್ಜಿಯ ಪ್ರತ್ಯುತ್ತರವೇನೂ ಬೇಕಿರಲಿಲ್ಲ. "ಅಜ್ಜಿ ನಂದು, ರಮೇಶಣ್ಣಂದು ರೂಮು ತೋರಿಸ್ತೀನಿ ಬಾ. ಅದು ಮೇಲಿರೋದು" ಎನ್ನುತ್ತಾ, ಹೆಚ್ಚು ಕಡಿಮೆ ಓಡುತ್ತಲೇ ಮೆಟ್ಟಿಲು ಹತ್ತಿದಳು. ಮೊಮ್ಮಗಳ ಸಂತೋಷ ಕಸಿಯಲಾರದೆ ಕಾಲೆಳೆದುಕೊಂಡು ಕಮಲಮ್ಮನವರೂ ಅವಳ ಹಿಂದೆಯೇ ಹೋದರು. ತನ್ನ ರೂಮನ್ನು, ತನ್ನಣ್ಣನದನ್ನು ತೋರಿಸಿದ ಸಿಂಧು, "ನೋಡಿದ್ಯಾ ಅಜ್ಜಿ. ಈಗ ನಂಗೆ ರಮೇಶಣ್ಣಂಗೆ ಬೇರೆ ಬೇರೇನೇ ರೂಮು. ಕಚ್ಚಾಟವೇ ಇಲ್ಲ. ನಂಗೆ ಹೇಗ್ ಬೇಕೋ ಹಾಗೆ ನೀಟಾಗಿ ಸಾಮಾನು ಜೋಡಿಸಿಟ್ಟಕೋಬಹುದು ಅಲ್ವಾ ಅಜ್ಜಿ" ಸಿಂಧು ಮಾತಾಡ್ತಾನೇ ಇದ್ದಳು. ಪಕ್ಕದಲ್ಲೇ ಮತ್ತೊಂದು ಸಣ್ಣ ಕೊಠಡಿಯೂ ಇತ್ತು. ಕಮಲಮ್ಮನೇ "ಇದ್ಯಾರಿಗೆ ಪುಟ್ಟಿ?" ಅಂದರು. ಮನಸ್ಸು ಯಾವ ಮಂಡಿಗೆ ಮೆಲ್ಲುತ್ತಿತ್ತೋ? ಅಷ್ಟರಲ್ಲಿ "ಅದು ಗೆಸ್ಟ್ ರೂಮು ಅಜ್ಜಿ. ಮನೆಗೆ ಯಾವಾಗಲಾದರೂ, ಬೇರೆ ಊರಿಂದ ಯಾರಾದರು ಬರ್ತಾರಲ್ಲ. ಆಗ ಅವರ ಸಾಮಾನು ಇಟ್ಟುಕೊಳ್ಳೋಕೆ, ಮಲಕ್ಕೊಳೋಕೆ ಅಜ್ಜಿ" ಉತ್ತರಿಸಿದಳು ಸಿಂಧು.

ಕಮಲಮ್ಮನಿಗೆ ಸ್ವಲ್ಪ ಪೆಚ್ಚಾಯಿತು. ಯಾಕೋ ಬಳಲಿಕೆಯಾದಂತಾಯ್ತು. ಹೆಜ್ಜೆ ತಡಿಯಿತು. ಅಲ್ಲೆ ಗೋಡೆಗೆ ಒರಗಿ ನಿಂತುಬಿಟ್ಟರು. ಏನೂ ಅರಿಯದ ಸಿಂಧು, "ಯಾಕಜ್ಜಿ. ಮಹಡಿ ಹತ್ತಿದ್ದಕ್ಕೆ ಸುಸ್ತಾಯ್ತಾ? ಅಷ್ಟೇ ಬಿಡು. ಇನ್ನೇನಿಲ್ಲ. ಮೇಲೆ ಬರೀ ಟೆರೇಸು, ಖಾಲಿ ಜಾಗ. ಬಾ ಕೆಳಗೇ ಹೋಗೋಣ. ಎಲ್ಲಾ ಬರ್ತೀರ್ತಾರೆ. ಹೋಗೋಣ್ವಾ" ಕೇಳಿದಳು. ಅದು ಕಿವಿಗೇ ಬೀಳದವರಂತೆ ಕಮಲಮ್ಮನವರ ಬಾಯಿಂದ "ಸಿಂಧು, ನಿಮ್ಮ ಹೊಸಮನೇಲಿ ಅಜ್ಜಿ ರೂಮ್ ಯಾವ್ದು?" ಎಂಬ ಪ್ರಶ್ನೆ ಹೊರಬಂದಿತ್ತು. ತಬ್ಬಿಬ್ಬೇನೂ ಆಗದ ಸಿಂಧು, "ಅಜ್ಜಿ, ನಿಂಗೇ ಅಂತಾ ರೂಮಿಲ್ಲ. ಒಂದಿನ ಅಮ್ಮ ಇದನ್ನೇ ಅಪ್ಪನ ಹತ್ರ 'ಅಲ್ರಿ, ನಿಮ್ಮಮ್ಮ ಇಲ್ಲಿಗೆ ಬಂದು ಇರಬೇಕಾದ ಕಾಲಕ್ಕೆ ಅವರಿಗೊಂದು

ರೂಮು ಅಂತಾ ಬೇಡ್ವೇ?' ಅಂತೇನೋ ಕೇಳ್ತಿದ್ಲು ಅಜ್ಜಿ. ಅದಕ್ಕೆ ಅಪ್ಪ, 'ಅಯ್ಯೋ, ನಮ್ಮಮ್ಮ ಬಂದ ಕಾಲಕ್ಕೆ ತಾನೇ? ಬಂದರೆ ಗೆಸ್ಟ್ ರೂಮಲ್ಲೇ ಇರ್ತಾಳೆ ಬಿಡು' ಅಂತಾ ಹೇಳ್ತಾ ಇದ್ರು. ನೀನು ಹಳ್ಳಿಯಿಂದ ಬಂದ್ರೆ ಗೆಸ್ಟ್ ರೂಮಲ್ಲೇ ಇರಬೇಕು ಅಜ್ಜಿ" ಅಂತಾ ಮುಗ್ಧವಾಗಿ ಹೇಳಿದಳು. ಪಾಪ! ಆ ಹತ್ತು ವರ್ಷದ ಬಾಲೆಗೆ ಇನ್ನೆಷ್ಟು ಸೂಕ್ಷ್ಮಗಳು ಗೊತ್ತಿರೋಕೆ ಸಾಧ್ಯ.

ಮಗನ ಬೆಣ್ಣೆಯಂತ ಮಾತು ಕೇಳಿ ಹಳ್ಳಿಯ ಹೊಲ ಮನೆ ಮಾರಲಿಲ್ಲವಲ್ಲ. ಕೈಕಾಲು ಬಿದ್ದು ಹೋಗೋತನಕ ನಂದೂ ಅಂತ ಒಂದು ನೆಲೆ ಉಳ್ಕೋತು. ಇಷ್ಟಗಲ ಮನೆ ಕಟ್ಟಿದ್ದಾನಲ್ಲ, ಕೊನೆಗಾಲಕ್ಕಾದರೂ ಬಂದ್ರೆ ನಮ್ಮಮ್ಮಂಗೊಂದು ಕೋಣೆ ಇರಲಿ ಅನ್ನಿಸಲಿಲ್ಲವಲ್ಲಾ.? ನಮ್ಮಮ್ಮಂಗೇ ಇದು ರೂಮು, ಅವಳು ಬರೋವರೆಗೂ ನಮ್ಮನೆಗೆ ಬರೋ ಗೆಸ್ಟ್‌ಗಳ್ಗೂ ಆಗತ್ತೆ ಅಂತಾ ಅನ್ನಿಸದೇ ಹೋಯ್ತಲ್ಲಾ? ಅದಕ್ಕೆ ಬದಲಾಗಿ "ನಮ್ಮಮ್ಮ ಬಂದರೆ ಗೆಸ್ಟ್ ರೂಮಲ್ಲೇ ಇರ್ತಾಳೆ ಬಿಡು ಅಂದನಂತಲ್ಲಾ? ಹೆತ್ತಮ್ಮ ಇವನಿಗೆ ಗೆಸ್ಟ್ ಆಗಿದ್ದು ಯಾವಾಗ? ಮನಸ್ಸು ಸ್ವಲ್ಪ ಹೊತ್ತು ಹೊಯ್ದಾಡಿತು. ತುಸು ಹೊತ್ತು ಏನೋ ಕಳೆದುಕೊಂಡಂತೆ ಅನಿಸಿತು.

ಮನಸ್ಸನ್ನು ತಹಬಂದಿಗೆ ತಂದುಕೊಂಡಳು. ತಾನೇ ಅಂದುಕೊಂಡಳು "ನಾನ್‌ತಾನೆ ಅವನು ಬಾ ಅಂದು ಕರೆದು ಬಿಟ್ಟರೆ ಬಂದುಬಿಡ್ತೇನ್ಯೇ? ನಂಗ್ ತಾನೆ ಆಯ್ತು, ಕೈಕಾಲು ಗಟ್ಟಿಯಿದೆ, ನಂದೇ ನೆಲೆಯಿದೆ ಅನ್ನೋ ಮಮಕಾರ ಬಿಟ್ಟಿದೆಯೇ? ಮೊದಲಿಂದಲೂ 'ಸ್ವತಂತ್ರವೋ ಸ್ವರ್ಗಲೋಕವೋ' ಅಂತಾ ಇದ್ದೋಳಿಗೆ ಒಂದು ಕೋಣೆ ಅಂತಾ ಮಾಡಿದ್ರೂ ಅದು ಬಂಧನವೇ ಆಗ್ತಿರಲಿಲ್ಲವೇ? ಅದೂ ಅಲ್ಲದೆ, ಮೊದಲಂತಸ್ತಲ್ಲಿ ಒಂದು ಕೋಣೆ ಮಾಡಿಕೊಟ್ರೆ ಹತ್ತಿಳಿಯೋದು ಹೇಗೆ? ಹೋಗ್ತಾ ಹೋಗ್ತಾ ವಯಸ್ಸೇನು ಇಳಿಯತ್ಯೇ? ಸದ್ಯಕ್ಕೇನೋ ಗಟ್ಟಿಮುಟ್ಟಾಗಿದ್ದೀನಪ್ಪಾ. ಕಾಲುನೋವು, ಮಂಡಿನೋವು ಅಂತೆಲ್ಲಾ ಬರಲ್ಲಾ ಅಂತೇನು ಖಾತ್ರಿ? ನಮ್ಮ ಹಳ್ಳಿಮನೇಲಿ ಈ ಯಾವ ರಾಮಾಯಣವೂ ಇಲ್ಲ. ಅಂಗಳದಿಂದ ನಾಕು ಮೆಟ್ಲು ಹತ್ತಿ ಒಳಕ್ಕೆ ಹೋದ್ರಾಯ್ತು. ಇನ್ನೆಲ್ಲಾ ಸಮತಟ್ಟಾದ ಜಾಗವೇ. ಆಗೋವರ್ಗೂ ಅಲ್ಲೇ ಇರೋಣ. ಅದೇ ಸಮ. ಅವನು ಕರೆದಾಗ ಬಂದು ಹೋಗಿ ಮಾಡ್ಕಂಡಿರೋದೆ ಸರಿ.

ಒಂಥರಾ ನೋಡಿದ್ರೆ ಅವನು ಹೇಳ್ತಿರೋದು ಸರೀನೇ ಅನ್ಸತ್ತೆ. ಯಾವಾಗಲೋ ನಾಲ್ಕು ದಿನ ಬಂದು ಹೋಗೋಳು ಗೆಸ್ಟೇ ಅಲ್ವೇ? ಈ ಪ್ರಪಂಚಕ್ಕೆ ಬಂದ್ಹೋಗೋದು ಹಾಗೇ ಅಲ್ಲವೇ? ಯಾರೇ ಆಗಲಿ, ನಾಲ್ಕು ದಿನ ಬಂದು ಇರೋವಾಗ ಸಿಗೋ ಅಕ್ಕರಾಸ್ತೆ, ಆದರ, ಇಲ್ಲೆ ಬಂದು ವಕ್ರಸ್ಕೊಂಡೇ ಬಿಡ್ತಾರೆ ಅಂದಾಗ ಇರತ್ಯೆ ?

ಏನೇನೋ ಅವಳ ಬುದ್ಧಿ ಆಲೋಚನೆಗಳ ಕಸರತ್ತಲ್ಲಿ ಮುಳುಗಿತ್ತು. ಬುದ್ಧಿಯ ಮಾತನ್ನು ಕೇಳದ ಮನಸ್ಸು ಮಾತ್ರ ಮಗನಿಗೆ ತಾನು ಗೆಸ್ಟ್ ಅನಿಸಿದ್ದು ಯಾಕೆ ಅಂತಾ ಯೋಚಿಸ್ತಾನೇ ಇತ್ತು.

***

ಲೇಖನ ಮಾಲೆ-೮

ನಾನೂ ನನ್ನ ಸಹಪಾಠಿ ಮಿತ್ರನೂ

ಆ ಸೊಗಸಿನ ಬಂಗಾರದ ನೆನಪುಗಳು

– ಮಾಧುರಿ ಕೃಷ್ಣ

ಆ ದಿನ ನನ್ನನ್ನು ನನ್ನ ಸಹಪಾಠಿ ಮಿತ್ರನ ಮನೆಯೆದುರು ಉದುರಿಸಿದ ಮಗ, 'ಎಂದಿಗಿಂತ ಒಂದು ಗಂಟೆ ಲೇಟಾಗಿ ಪಿಕ್‌ಅಪ್ ಮಾಡಬಹುದು ಇಂದು, ಮಜಾ ಮಾಡು' ಎಂದು ಹೇಳಿದ್ದರಿಂದ ಆರಾಮವಾಗಿ ಕುಳಿತು ಮಾತಾಡುತ್ತಲೇ ಇದ್ದೆ. ಅಂದಿನ ನಮ್ಮ ಮಾತುಕತೆಯ ವಿಷಯವೂ ಅಷ್ಟೇ ತಮಾಷೆಯಾಗಿತ್ತು. ಅವನ ನಡುಪ್ರಾಯಕ್ಕೆ ಬಂದಿದ್ದ ಹೆಣ್ಣು ಮಕ್ಕಳಂತೂ ಪುಟ್ಟ ಬಾಲಕಿಯರಂತೆ ಮುದ್ದಾಗಿ ಕುಳಿತು ಮೈಯೆಲ್ಲ ಕಿವಿಯಾಗಿ, ಕಣ್ಣರಳಿಸಿಕೊಂಡಿದ್ದರು. ನಿಮಿಷವೊಂದೂ ವ್ಯರ್ಥವಾಗದಂತೆ ನನ್ನ ಹುರುಪಿನ ಅತಿರೇಕದಲ್ಲಿ ನಾನು ವಟಗುಟ್ಟುತ್ತಲೇ ಇದ್ದೆ. ಸಹಪಾಠಿ ಮಿತ್ರನೂ ಅಷ್ಟೇ ಉತ್ಸಾಹದಿಂದ ಕುಳಿತಿದ್ದ.

ಆಗಲೇ ಮನಸ್ಸಿನ ಹಿಂಬದಿಗೆ ನೂಕಿ ಇಟ್ಟಿದ್ದ ಆ ವಿಷಯ ಹಠಾತ್ ಮುನ್ನಲೆಗೆ ನೂಕಿಕೊಂಡು ಬಂತು.

"ಅಕಾ! ಇವತ್ತಂತೂ ನಿನಗೇನೋ ಆಗಿರುವುದು ಖಂಡಿತ! ಏನೇನೋ ಮನಸ್ಸಿನಲ್ಲೇ ಜ್ಞಾಪಿಸಿಕೊಂಡು ನಗುತ್ತಲೇ ಇದ್ದೀಯಾ. ಬಾಯಿ ಬಿಟ್ಟು ನಮಗೂ ಸ್ವಲ್ಪ ಹೇಳಿಬಿಡು ಮಾರಾಯಿತಿ". ಮಿತ್ರ ಇನ್ನು ತಡೆಯಲಾಗದವನಂತೆ ಕೇಳಿಯೂ ಬಿಟ್ಟ. ಎರಡೂ ಹಸ್ತ ಹೆಣೆದುಕೊಂಡು, ಗಲ್ಲ, ತುಟಿ ಮೂಗನ್ನು ಒತ್ತಿ ಕುಳಿತಿದ್ದ ನಾನು ಕಣ್ಣಲ್ಲೇ ನಗು ಝಳಪಿಸುತ್ತ ಅವನ ಕಡೆಗೆ ಚೇಷ್ಟೆಯಿಂದ ನೋಡಿದೆ. ನಾನು ನಿಧಾನಿಸಿದಷ್ಟೂ ಅವನಲ್ಲಿ ಅಸಹನೆ ಹೆಚ್ಚತೊಡಗಿತು. ಆ ಹೆಣ್ಣು ಮಕ್ಕಳಂತೂ ಇನ್ನೊಂದು ಕ್ಷಣ ತಡವಾದರೆ ಎದ್ದು ಬಂದು ನನ್ನ ಹೆಗಲು ಒತ್ತಿ ಹಿಡಿದು, ನನ್ನನ್ನು ಗಲಗಲ ಅಲುಗಿಸುತ್ತ, ಹೊಟ್ಟೆಯಲ್ಲಿದ್ದ ಎಲ್ಲವನ್ನೂ ಹೊರ ಹಾಕಿಸುವಂತೆ ಕಂಡರು.

"ಆಯ್ತಪ್ಪ, ಹೇಳುತ್ತೇನೆ, ನಿನಗೂ ಆ ಬಂಗಾರದ ದಿನಗಳು ಚೆನ್ನಾಗಿ ನೆನಪಿರಲೇಬೇಕು. ಅದು ನಮ್ಮ ಕಾಲೇಜು ಜೀವನದ ಕೊನೆಯ ದಿನಗಳು! ಒಟ್ಟಾಗಿ ಮೂರು ವರ್ಷ ಒಬ್ಬರ ಮುಖ ಒಬ್ಬರು ನೋಡುತ್ತಾ ಬಂದ ನಾವುಗಳು ಇನ್ನೆರಡು ತಿಂಗಳಲ್ಲೇ ಶಾಶ್ವತವಾಗಿ ದೂರವಾಗುವ ಸಮಯ ಹತ್ತಿರ ಬರುತ್ತಲಿತ್ತು. ಆದರೂ ಅದೇಕೋ ಕಾಲೇಜ್ ಡೇ ಸುದ್ದಿಯೇ ಕೇಳಿಬರುತ್ತಿರಲಿಲ್ಲ. ನಾವು ವಿದ್ಯಾರ್ಥಿನಿಯರು ಮಾತಾಡಿಕೊಳ್ಳುತ್ತಿದ್ದಂತೆ ನೀವು ಹುಡುಗರೂ ಮಾತಾಡಿಕೊಳ್ಳುತ್ತಿದ್ದಿರಬೇಕು, ಅಲ್ಲವೇ?" ನನ್ನ ನೇರ ಪ್ರಶ್ನೆಗೆ ಮಿತ್ರ ಮೊದಲು ತಲೆ ಅಲ್ಲಾಡಿಸಿದ.

ನಂತರ ಯೋಚಿಸಿಕೊಂಡವನಂತೆ, "ನಾವು ನಮ್ಮೊಳಗೆ ಮಾತ್ರವಲ್ಲ, ಲೆಕ್ಚರರ್‌ಗಳನ್ನೂ ಅಡ್ಡಹಾಕಿ ಕೇಳಿದ್ದುಂಟು. ಅವರೆಲ್ಲಾ 'ಹೌದು ಆಗಬೇಕು, ನೋಡೋಣ' ಎಂದರೇ ಹೊರತು, ಬೇರೇನೂ ಹೇಳುತ್ತಲೇ ಇರಲಿಲ್ಲ. ಅಂಥಾದ್ದರಲ್ಲೇ ಒಂದು ದಿನ ನನಗೆ ಪ್ರಿನ್ಸಿಪಾಲರಿಂದಲೇ ಕರೆ ಬಂತು."

"ಹೌದು! ನೀನು ಕಾಲರ್ ಎತ್ತಿ, ನಮ್ಮಕಡೆ ನೋಡಿ ಕುಣಿಸಿಕೊಂಡು ಹೋಗಿದ್ದು, ನನ್ನ ಕಣ್ಣಿಗೆ ಈಗಲೂ ಕಂಡಂತಿದೆ." ಎಂದೆ. ಮಿತ್ರನ ಹೆಣ್ಣು ಮಕ್ಕಳ ಕಡೆಯಿಂದ ಕಿಸಕ್ಕನೆ ನಕ್ಕ ಶಬ್ದ ಬಂತು.

"ಅಲ್ಲಿ ಏನಾಯ್ತು?" ಮಾತು ನಿಧಾನವಾಗುವುದು ನನಗಿಷ್ಟವಿರಲಿಲ್ಲ.

"ಮೀಟಿಂಗಿಗೆ ತರಿಸಿದ್ದ ಕಾಫಿ ತಿಂಡಿ ಮೊದಲು ತಿನ್ನಲು ಹೇಳಿದರು. ತಿಂದೆ. ಅದು ಮುಗಿಯುತ್ತಿದ್ದಂತೆ ಇಂಗ್ಲೀಷ್ ಲೆಕ್ಚರರ್ ನನ್ನನ್ನೇ ನೋಡುತ್ತಾ, 'ಏನಪ್ಪಾ ಈ ಬಾರಿ ಕಾಲೇಜ್ ಡೇ ಬೇಕಾ ಬೇಡವಾ, ಏನಂತೀಯಾ?' ಎಂದರು. ಬೇಕು, ಸರ್ ಎಂದೆ"

"ಮತ್ತೆ ಕಳೆದ ವರ್ಷ ನಡೀತಲ್ಲ, ಆ ದೊಡ್ಡ ಗಲಾಟೆ!"

"ಅದು ನಾವಲ್ಲ ಸರ್, ಊರಿನ ಪುಂಡರು ಮಾಡಿದ್ದು ಸರ್" ಎಂದೆ. ಆಗಲೇ ನನಗೆ ಫ್ಲಾಶ್ ಆಯಿತು., ಅವರು ನನ್ನನ್ನು ಅಲ್ಲಿಗೆ ಕರೆಸಿದ ಉದ್ದೇಶ.

"ಹೌದಪ್ಪಾ...ಅಷ್ಟೊಂದು ಉತ್ಸಾಹದಿಂದ ಅಯೋಜಿಸಿದ ಪ್ರೋಗ್ರಾಂ ಎಲ್ಲಾ ಆ ಗಲಾಟೆಯಿಂದ ವೇಸ್ಟ್ ಆಯಿತು. ಹೊಸ ಕಾಲೇಜು.. ಟೌನಿನ ಎಲ್ಲರನ್ನೂ ಖುಷಿಪಡಿಸುವ ಎಂದು ಯೋಚಿಸಿದರೆ ಎಲ್ಲ ಸೇರಿ ಗಲಾಟೆಮಾಡಿ ಅರ್ಧದಲ್ಲೇ ನಿಲ್ಲಿಸಬೇಕಾಯಿತು. ನಾವು ಅಧ್ಯಾಪಕರು ತಿಂಗಳು ಕಾಲ ಪ್ರಾಕ್ಟೀಸ್ ಮಾಡಿದ ನಾಟಕ ಸ್ಟೇಜಿಗೆ ಬರಲೇ ಇಲ್ಲ ಅಕಾಡೆಮಿಯ ಯಾವ ಕಾಲೇಜಲ್ಲೂ ಹೀಗಾಗದೆ ನಮಗೆ ಮಾತ್ರ ಶೇಮ್ ಆಯ್ತು." ಪ್ರಿನ್ಸಿಪಾಲರ ಮುಖದಲ್ಲಿ ಆವತ್ತಿನ ದಿನದ ನೋವು ಕಾಣಿಸುತಿತ್ತು.

ಕನ್ನಡ ಲೆಕ್ಚರರ್ ಹೇಳಿದರು, "ನೋಡಪ್ಪ, ನೀನೇನಾದರೂ ಧೈರ್ಯ ಕೊಟ್ಟರೆ ಆಗಬಹುದೇನೋ, ಇದು ನಿಮಗೂ ಕೊನೆಯ ಚಾನ್ಸ್ ..."

ನನಗೆ ಯಾರ ಮುಖವನ್ನೂ ನೋಡುವ ಮನಸ್ಸಾಗಲಿಲ್ಲ. ನೆಲ ನೋಡುತ್ತ ಕುಳಿತೆ. ಇವರೆಲ್ಲ ನನ್ನ ಚಿತಾವಣೆ ಯಿಂದಲೇ ಕಳೆದ ವರ್ಷದ ಗಲಾಟೆ ನಡೆದದ್ದು ಎಂದುಕೊಂಡಿದ್ದಾರೆಯೇ? ಬೇರೆ ಕಾಲೇಜುಗಳಿಂದ ಪುಂಡು ಹುಡುಗರು ಬಂದಿದ್ದು ಇವರಿಗೆಲ್ಲ ಗೊತ್ತಾಗಲೇ ಇಲ್ಲವೇ? ಯಾಕೋ ನನ್ನ ಮನಸ್ಸಿಗೂ ತುಂಬ ಕೆಡುಕೆನಿಸಿತು. ಅಲ್ಲೇ, ಅದೇ ಕ್ಷಣಕ್ಕೇ ಖಡಕ್ಕಾಗಿ ಒಂದು ನಿರ್ಧಾರಕ್ಕೆ ಬಂದೇಬಿಟ್ಟೆ.

"ಆಯ್ತು ಸರ್, ಏನೇ ಆಗಲಿ, ಯಾರೇ ಮಾಡಿದ್ದಿರಲಿ, ಇನ್ನೊಮ್ಮೆ ಈ ರೀತಿ ಆಗಕೂಡದು. ಒಂದೇ ಒಂದು ಸಿಳ್ಳು ಕೂಡಾ ಒಬ್ಬನಿಂದಲೂ ಹೊರಗೆ ಬರಬಾರದು. ಐ ಪ್ರಾಮಿಸ್ ಯೂ ಸರ್ " ಎಂದೆ.

ಪ್ರಿನ್ಸಿಪಾಲ್ ಎದ್ದು ನಿಂತೇಬಿಟ್ಟರು. "ದೇಟ್ಸ್ ಮೈ ಗುಡ್ ಬಾಯ್ "ಎಂದರು. ಶೇಕ್ ಹ್ಯಾಂಡ್ ಮಾಡಿದರು.

ನಮಗೆಲ್ಲ ಈ ಒಳಗೊಳಗಿನ ಸಂಗತಿಗಳು ತಿಳಿಯಲೇ ಇಲ್ಲ. ಮರುದಿನವೇ ಕಾಲೇಜ್ ಡೇ ಸರ್ಕ್ಯುಲರ್ ಬಂದಿತ್ತು. ಎಲ್ಲರಿಗೂ ಖುಷಿಯಾಯಿತು. ಸೆಲೆಕ್ಷನ್, ಪಾರ್ಟಿಸಿಪೇಶನ್, ಪ್ರಾಕ್ಟೀಸ್ ಎಂದು ಕಾಲೇಜಿಡೀ ಸಂಭ್ರಮಕ್ಕೆ ಒಳಗಾದರೂ, ದೂರದಿಂದ ದಿನಾ ಬರುವ ನಮಗ್ಯಾರಿಗೂ ಕಾರ್ಯಕ್ರಮಗಳಿಗೆ ಸೇರಿಕೊಳ್ಳುವ ಉಮೇದಿರಲಿಲ್ಲ. 'ಹಾಗಂತೆ... ಹೀಗಂತೆ ..' ಎಂದು ಮಾತನಾಡುತ್ತಲೇ ಕಾಯತೊಡಗಿದೆವು.

ಆ ದಿನವೂ ಹೆಚ್ಚು ಕಾಯಿಸದೆ ಬೇಗನೇ ಬಂದಿತು. ಮಧ್ಯಾಹ್ನ ಪ್ರಖರನಾಗಿ ಉರಿಯುತ್ತಿದ್ದ ಸೂರ್ಯ ನಾಲ್ಕು ಗಂಟೆಗೇ, ನಮ್ಮ ಕಾಲೇಜಿಂದ ಅರ್ಧ ಕಿಲೋಮೀಟರ್ ದೂರದಲ್ಲಿದ್ದ ಅರಬೀ ಸಮುದ್ರಕ್ಕೆ ತೆಂಗಿನಮರಗಳ ತಲೆಯ

ಮೇಲಿಂದ ಬೇಗಬೇಗ ಇಳಿಯತೊಡಗಿದ. ಅವನ ಕಿರಣಗಳೆಲ್ಲ ಬಂಗಾರದ ಬಣ್ಣಕ್ಕೆ ತಿರುಗತೊಡಗಿ, ಅಂದವಾಗಿ ಅಲಂಕರಿಸಿಕೊಂಡು ಗುಂಪು ಗುಂಪಾಗಿ ನೆರೆಯತ್ತಿದ್ದ ವಿದ್ಯಾರ್ಥಿ ವಿದ್ಯಾರ್ಥಿನಿಯರನ್ನು ಫಳಫಳನೆ ಬೆಳಗಿಸುತ್ತಿದ್ದ. ಕಾಲೇಜಿನ ಎದುರಿನ ವಿಶಾಲ ಮೈದಾನದಲ್ಲೇ ರಂಗವೇದಿಕೆ ನಿರ್ಮಾಣವಾಗಿತ್ತು. ಆ ಕಾಲದ ಇಂಪು ಇಂಪಾದ ಕನ್ನಡ, ಹಿಂದಿ ಚಿತ್ರಗೀತೆಗಳನ್ನು ಮೈಕ್ ಪ್ರಸಾರ ಮಾಡುತಿತ್ತು. ದೂರದ, ಹತ್ತಿರದ ಮುಖ್ಯ ಅತಿಥಿಗಳೂ ಆಗಲೇ ಬಂದುಬಿಟ್ಟಿದ್ದರು. ಅಧ್ಯಾಪಕ ವರ್ಗ ತರತರದ ಸೂಟುಗಳಲ್ಲಿ ಗಮನ ಸೆಳೆಯುತಿದ್ದರು. ಆ ಬಂಗಾರದ ಬೆಳಕಿನಲ್ಲೇ ಕಾರ್ಯಕ್ರಮದ ಉದ್ಘಾಟನೆಯಾಯಿತು.

ಭಾಷಣಗಳು ಒಂದೊಂದಾಗಿ ಮುಗಿಯುತ್ತಿದ್ದಂತೆ ಬೊಗಸೆ ತುಂಬ ಮಲ್ಲಿಗೆ ಹೂವು ಹಿಡಿದ ನರ್ತಕಿ ವೈಯ್ಯಾರವಾಗಿ ಸ್ಟೇಜು ಪ್ರವೇಶಿಸಿದಳು. ಗೆಜ್ಜೆಯ ಸದ್ದಿಗೆ ಅರೆಕ್ಷಣ ಪ್ರೇಕ್ಷಕರು 'ಓ...' ಎನ್ನಲು ಬಾಯಿ ತೆರೆದರೋ ಅನ್ನುವಷ್ಟರಲ್ಲೇ ಬಲಪಾರ್ಶ್ವದಿಂದ ವೇಷಧಾರಿಯೊಬ್ಬ ಪ್ರವೇಶಿಸಿದ. ಬಣ್ಣಬಣ್ಣದ ನೆರಿಗೆಗಳಿಂದ ಕೂಡಿದ ಸಡಿಲು ಮೇಲಂಗಿ ಹಸ್ತಗಳನ್ನೂ ಮೀರಿ ಇಳಿದಿತ್ತು. ಸೊಂಟಕ್ಕೊಂದು ಹಸಿರು ಬಣ್ಣದ ಪಟ್ಟಿ, ಉದ್ದನೆಯ ದೇಹಕ್ಕೆ ಚೂಪಾಗಿ ಸುತ್ತಿದ ಮುಂಡಾಸು, ಕೊರಳಲ್ಲೊಂದು ದೊಡ್ಡ ತಾಯಿತ, ಕಾಲಲ್ಲಿ ಕಾಲ್ಬಳೆ, ಕೈಯಲ್ಲಿ ಹಿತ್ತಾಳೆಯ ಉದ್ದದ ದಂಡ, ಎರಡೂ ಕಡೆಗೂ ಭರ್ಜರಿಯಾಗಿ ಅಂಟಿಸಿದ ಗಿರಿಜಾ ಮೀಸೆ, ತುದಿ ತುಂಬ ಚೂಪಾಗಿ ಕಾಣಿಸುತಿತ್ತು.

ಇನ್ನೇನು ಸೀಟಿ ಹೊಡೆಯಲು ಸನ್ನದ್ಧವಾಗಿದ್ದ ಪ್ರೇಕ್ಷಕರು ಹಠಾತ್ತಾಗಿ ಬಾಯ್ಮುಚ್ಚಿದ ಹಾಗಾಯಿತು. ಇಡೀ ಸಭೆ ನಿಶ್ಚಲವಾಯಿತು. ಆ ವಿಶಾಲ ಮೈದಾನ ಮೌನವಾಯ್ತು. ಶಬ್ದಗಳೆಲ್ಲ ಅಲ್ಲಲ್ಲೇ ತಡೆದು ನಿಂತವು. ವೇಷಧಾರಿ ಈ ಬದಿಯಿಂದ ಆ ಬದಿಗೆ ದಂಡ ಕುಟ್ಟುತ್ತ ಸಾಗಿ ಹೋದ. ಈಗ ತನ್ನನ್ನು ಇನ್ನೊಂದು ಪಾರ್ಶ್ವದ ತುತ್ತತುದಿಯಲ್ಲಿ ಸ್ಥಾಪಿಸಿಕೊಂಡು ನಿಂತ.

ಒಂದರ ಹಿಂದೊಂದು ಕಾರ್ಯಕ್ರಮಗಳು ನಡೆಯತೊಡಗಿದುವು. ಮೈದಾನದ ತುಂಬೆಲ್ಲ ಜನಸಂದಣಿ ಸೇರಿ ಕೊಂಡಿತ್ತು. ವೇದಿಕೆಯಲ್ಲಿ ಪಾತ್ರಗಳು ಬರುತ್ತಿದ್ದುವು. ಚೆಂದದಲ್ಲಿ ಆಡಿ ಅಭಿನಯಿಸಿ ನಿರ್ಗಮಿಸಿ ಹೋಗುತ್ತಿದ್ದರು. ಲಯಬದ್ಧವಾದ ಚಪ್ಪಾಳೆಗಳು ಮಾತ್ರ ಕೇಳಬರುತ್ತಿದ್ದವು. ಆಧ್ಯಾಪಕರ ಶೇಕ್ಸ್‌ಪಿಯರ್‌ನ ಡ್ರಾಮಾವೂ ಭರ್ಜರಿ ಶೋ ಕಂಡಿತು. ಮಧ್ಯ ಮಧ್ಯದಲ್ಲಿ ಆ ಉದ್ದನೆಯ ವೇಷಧಾರಿ ಈಚೆಗೆ ಆಚೆಗೆ ಒಮ್ಮೊಮ್ಮೆ ಹಾದು ಹೋಗುತ್ತಿದ್ದ. ನಾವು ವಿದ್ಯಾರ್ಥಿನಿಯರ ದಂಡು ಬೆರಗಾಗಿ ಮಾತಿಲ್ಲದೆ ಮೂಕವಾಗಿಬಿಟ್ಟಿದ್ದೆವು. ಎಲ್ಲವೂ ಕ್ಷೇಮವಾಗಿ ಮುಗಿಯುವಾಗ ರಾತ್ರಿ ಎರಡು ಗಂಟೆ ದಾಟಿತ್ತು.

ಒಟ್ಟಿನಲ್ಲಿ ಕಾಲೇಜ್ ಡೇ ಅತ್ಯಂತ ಯಶಸ್ವಿಯಾಗಿ ಮುಗಿದುಬಿಟ್ಟಿತು. ಪ್ರಿನ್ಸಿಪಾಲರಿಂದ ಹಿಡಿದು ಎಲ್ಲಾ ಲೆಕ್ಚರರುಗಳೂ ಫುಲ್ ಖುಷ್! ಎರಡು ದಿನ ರಜೆ ಪಡೆದು ತಿರುಗಿ ಕಾಲೇಜಿಗೆ ಬಂದ್ರೆ ಕಾಲೇಜ್ ವಾತಾವರಣವೇ ಬದಲಾಗಿತ್ತು. ಎಲ್ಲರೂ ಖುಷಿಯಿಂದಲೇ ಫೈನಲ್ ಎಕ್ಸಾಮ್‌ಗೆ ತಯಾರಾಗತೊಡಗಿದೆವು. ಅಧ್ಯಾಪಕರು ಪೋರ್ಷನ್ ಮುಗಿಸುವ ಧಾವಂತದಲ್ಲಿದ್ದರೆ, ಮೂರೂ ಲ್ಯಾಬ್‌ಗಳು ಸೈನ್ಸ್ ವಿದ್ಯಾರ್ಥಿಗಳಿಂದ ಅವಧಿ ಮೀರಿ ತುಂಬಿಕೊಂಡಿರುತ್ತಿದ್ದುವು. ನಾವು ಆರ್ಟ್ಸ್‌ನವರು ಕೆಲವರು ದಪ್ಪ ದಪ್ಪ ಪಠ್ಯ ಪುಸ್ತಕಗಳಲ್ಲಿ ತಲೆ ಹುದುಗಿಸಿಕೊಂಡರೆ, ಇನ್ನು ಕೆಲವರು 'ಇದೇ ಸುಸಮಯ 'ಎಂದು ಮದುವೇನೂ ಮಾಡಿಕೊಂಡರು ಎಂದು ಸಹಪಾಠಿ ಮಿತ್ರನನ್ನೇ ನೋಡಿದೆ.

"ಹೌದ್ಹೌದು" ಎಂದ ಮಿತ್ರ ಬೇರೆ ಉಪಾಯವಿಲ್ಲದವನಂತೆ ಕ್ಷಣ ಬಿಟ್ಟು ಮತ್ತೆ ಜೋರಾಗಿ ನಕ್ಕ. ನಾನೂ ನಗತೊಡಗಿದೆ. ಅವನ ಹೆಣ್ಣುಮಕ್ಕಳಿಬ್ಬರೂ ಅರ್ಥವಾಗದೆ ಒಮ್ಮೆ ನನ್ನನ್ನೂ, ಮತ್ತೊಮ್ಮೆ ಅವನನ್ನೂ ನೋಡಿದರು.

ಒಬ್ಬ ಮಗಳಿಗೆ ಫಕ್ಕನೆ ತಿಳಿದು ಹೋಯಿತು. "ಅಯ್ಯೋ ಅಪ್ಪಾ.... ಅದು ನೀವೇ! ಅಮ್ಮನನ್ನು ಮದುವೆ ಆಗಿದ್ದು.... ಆಂಟೀ...". ಇಡೀ ಮನೆ ನಗುವಿನಿಂದ ಪ್ರತಿಧ್ವನಿಸಿತು.

ನಕ್ಕು ನಕ್ಕು ಹೊಟ್ಟೆ ಹಿಡಿದುಕೊಳ್ಳುತ್ತ ಒಬ್ಬಳು ಕೇಳಿದಳು, "ಆಂಟೀ, ನೀವು ಕಥೆಯೇನೋ ಚೆನ್ನಾಗೇ ಹೇಳಿದಿರಿ ಆದರೆ ಕಾಲೇಜ್ ಡೇ ಪ್ರೋಗ್ರಾಂನಲ್ಲಿ ಆ ಬಣ್ಣದ ವೇಷಧಾರಿ, ಗೇಟ್‌ಕೀಪರೋ, ಪೀವನ್ನೋ, ಅವನು ಯಾರೆಂದೇ ಹೇಳಲು ಮರೆತುಬಿಟ್ಟಿರಲ್ಲ? ಅವನು ಆ ರೀತಿ ಸ್ಟೇಜ್ ಮೇಲೆ ಓಡಾಡಿದ್ದೂ ಯಾಕೆಂದೂ ಹೇಳಲೇ ಇಲ್ಲ! "

ಉಕ್ಕಿ ಬರುತ್ತಿದ್ದ ನಗುವನ್ನು ಕೈ ಮುಚ್ಚಿ ಬಾಯಿಗೆ ಅಡ್ಡ ಹಿಡಿದು ಸಹಪಾಠಿ ಮಿತ್ರನನ್ನೇ ನೋಡಿದೆ, 'ನೀನು ಹೇಳುತ್ತೀಯಾ ಇಲ್ಲ, ನಾನೇ ಹೇಳಲೇ 'ಎಂಬಂತೆ.

ಸಹಪಾಠಿ ಮಿತ್ರ ಗಂಭೀರ ಮುಖಮಾಡಿದ. ಆದರೂ ಹೇಳಿದ "ಮಕ್ಕಳೇ, ಅದು ನಾನೇ ಆಗಿದ್ದೆ, ಪೀವನ್ ಎನ್ನಿ , ದ್ವಾರಪಾಲಕ ಎನ್ನಿ".

ಆ ಹೆಣ್ಣು ಮಕ್ಕಳು ಇಷ್ಟಗಲ ಬಾಯಿ ಅಗಲಿಸಿದರು "ನಿಜವಾಗಲೂ..! ಯಾಕಪ್ಪಾ.." ಮಿತ್ರ ದಣಿದಂತೆ ಕಾಣಿಸುತ್ತಿದ್ದ. ಆದರೂ ಉತ್ಸಾಹ ತುಂಬಿಯೇ ಹೇಳಿದ. "ಯಾಕೆ ಅಂತೀರಾ..ಹಿಂದಿನ ವರ್ಷದ ಕಾಲೇಜ್ ಡೇನಲ್ಲಿ ಸಿಕ್ಕಾಪಟ್ಟೆ ಗಲಾಟೆಯಾಗಿತ್ತು. ಸ್ಟೇಜಿಗೆ ಬಂದ ಪಾತ್ರಧಾರಿಗಳನ್ನೆಲ್ಲ 'ನೀ ಬೇಡ, ಹೊರಟು ಹೋಗು' ಎಂದು ವಾಪಾಸು ಕಳಿಸುತಿದ್ದರು. ಲೆಕ್ಚರರುಗಳೂ ಹೆದರಿಬಿಟ್ಟು ತಮ್ಮ ನಾಟಕವನ್ನೇ ಕ್ಯಾನ್ಸಲ್ ಮಾಡಿದರು. ಅದಕ್ಕೇ ಹಾಗಾಗಬಾರದು ಎಂದು ನಮ್ಮ ಹುಡುಗರಿಗೆ ಖಡಕ್ ವಾರ್ನಿಂಗ್ ಕೊಟ್ಟು, ಪೇಟೆಯಿಂದ ಬಂದ ರೌಡಿಗಳ ಬಾಲ ಹಿಡಿಯಲು ಹೇಳಿದ್ದೆ. ಅಲ್ಲದೇ ನಮ್ಮ ಹುಡುಗರ ಮೇಲೂ ಕಣ್ಣಿಡಲು ನಾನೇ ದೊಣ್ಣೆ ಹಿಡಿದು ಸ್ಟೇಜಲ್ಲಿ ನಿಂತೆ. ಹಾಗಾಗಿ ಏನೂ ಗಲಾಟೆ ನಡೆಯಲಿಲ್ಲ" ಎಂದು ದೀರ್ಘ ನಿಟ್ಟುಸಿರು ಹೊರಹಾಕಿದ.

ಅಲ್ಲಿಗೆ ನನ್ನಲ್ಲಿ ಇನ್ನೂ ಒಂದು ಸಂಶಯ ಉಳಿದಿತ್ತು, ಕೇಳಿಯೂ ಬಿಟ್ಟೆ. "ಅಲ್ಲೋ, ಸ್ಟೇಜ್‌ಗೆ ಬರೋದಂತೂ ಬಂದೆ, ಏನಾದರೂ ಚಿಕ್ಕಪುಟ್ಟ ರೋಲ್, ಒಂದೆರಡು ಮಾತುಗಳ ಸಂಭಾಷಣೆಯನ್ನಾದರೂ ಆಡಬಹುದಿತ್ತಲ್ಲ.. ಸುಮ್ಮನೆ ದೊಣ್ಣೆ ಹಿಡಿದು ಸ್ಟೈಲಾಗಿ ತಿರುಗೋ ಬದಲಿಗೆ". ನನ್ನ ಲೇವಡಿಗೆ ಮಿತ್ರನಿಗೆ ದಣಿವಿನಲ್ಲೂ ಮುಳಕ್ಕನೆ ನಗು ಬಂತು.

"ಏನು? ಅದು ಸ್ಟೈಲಾ? ಜೀವ ಬಾಯಿಗೆ ಬಂದಿತ್ತು. ಸೇರಿದಾಗಿಂದಲೂ ಓದದೇ ಒಂದು ಬಾರಿ ಸ್ಟೇಜ್ ಮೇಲೆ ಕಾಲಿಟ್ಟಿರಲಿಲ್ಲ. ಹೋಗಲಿ ಒಂದು ಸ್ಪೋರ್ಟ್ಸ್ ಸರ್ಟಿಫಿಕೇಟ್ ಪಡೆದವನೂ ನಾನಲ್ಲ! ಈಗ ಪೂರಾ ಮೂರು ಗಂಟೆ ಬಣ್ಣದ ವೇಷ ಧರಿಸಿ ಪ್ರೇಕ್ಷಕರ ಕಣ್ಮುಂದೆಯೇ ನಿಂತಿರಬೇಕೆಂದರೆ ಅದೇನು ಕುಚ್ಚಲಕ್ಕಿ ಅನ್ನ ಉಂಡಹಾಗೆ ಅಂದುಕೊಂಡಿಯಾ ? ನನ್ನ ಕಷ್ಟ ನಿಂಗೇನು ಗೊತ್ತು!" ಎಂದು ನನ್ನನ್ನೇ ದುರುದುರು ನೋಡಿದ.

"ಅಯ್ಯಬ್ಬ! ಅಪ್ಪಾ... ಅಪ್ಪ.... ಅಪ್ಪ ಎಂದರೆ ನಮ್ಮಪ್ಪನೇ ಕಾಣಿ" ಎಂದು ಎಷ್ಟೋ ಹೊತ್ತಿನವರೆಗೂ ಆ ಹೆಣ್ಣು ಮಕ್ಕಳು ನಗುತ್ತಲೇ ಇದ್ದರು.

***

ಬಾಲ್ಯದ ಆ... ಗೆಳತಿ

– ಪೋರ

ಎರಡು ಜಡೆ ಶಾರದೆ
ನಡೆದಾಡುವ ವೀಣೆ
ಕಾಲಗೆಜ್ಜೆ ಶಬ್ದಮಾಡಿ
ಬಿರುಗಾಳಿ ಮಿಂಚು
ಮನದಂಗಳ ಎಬ್ಬಿಸಿ
ಮಾಯವಾದೆ ಒಮ್ಮೆಲೆ

ಹೆಗಲಹೊರೆ ಭಾರಕೆ
ವಧುವಾದೆ ನಗುತಲೆ
ಬಿಸಿಲು ಏರುವ ಮುನ್ನ
ಬಳ್ಳಿ ಬಿರಿದ ಮಲ್ಲಿಗೆ
ಸುತ್ತ ಸುರಿದ ಗಂಧ
ಬೀಸುಗಾಳಿ ಪಾಲಿಗೆ

ಬಟ್ಟಲಲ್ಲಿ ಇದ್ದ ಮೀನು
ಹಿಡಿಯದಾದ ನಾನು
ಕುಳಿತು ಕವನ ಬರೆದೆ
ಸುಡುವ ಹಗಲಿನಲ್ಲು
ಬೆಳದಿಂಗಳ ಕನಸಿ
ನೆನಪುಗಳನೆ ಪರಿಸಿದೆ

ಶಾಲೆ ಹಿಂದೆ ಮರದ ಕೆಳಗೆ
ನೀನು ಕೊಟ್ಟ ಮಾವು ಪಾಟಿ
ಚಪ್ಪರಿಸುವ ಮುನ್ನವೇ
ನೆಲಕೆ ಜಾರಿ ಬಿದ್ದಿತು
ಪೆಚ್ಚು ಮುಖದಿ ನಿಂತ
ಇಬ್ಬರಿಗೂ ನಗೆ ಎದ್ದಿತು

ಕಾದು ಉಕ್ಕುತಿತ್ತು ಹಾಲು
ಕಾವ ಆರಿಸಿಟ್ಟರು
ಬೆಕ್ಕ ಹೊರಗೆ ಅಟ್ಟಿ
ಕೆನೆಗಟ್ಟಲೆಂದು ಬಿಟ್ಟರು
ಹೃದಯಕಾದ ಗಾಯಕೆ
ಉಪ್ಪ ಸವರಿ ಬಿಟ್ಟರು

ಮೊನ್ನೆ ಸಿಕ್ಕಿ ಸೌಖ್ಯವೆಂದೆ
ಏನೋ ಕೇಳ ಹೊರಟರೆ
ನೀನು ಮುಡಿದ ಮಲ್ಲಿಗೆ
ಮೂಗಿಗರಡಿ ಮೌನ
ಕೊರಳ ಸುತ್ತ ಕುಣಿಕೆ
ಬಿಂದಿಗೆಯು ತುಂಬಿದೆ

ನಾನು ಸಹ ಹಿರಿಯ ಈಗ
ಎಲ್ಲ ಮಾಗಿ ಮುಗಿದಿದೆ
ಸುಕ್ಕು ಮುಖಕೆ ಮೆತ್ತಿದೆ
ನೆಲದ ಮೇಲೆ ಎಲ್ಲ ಕಡೆ
ನಡೆದು ಕಾಲು ಸವೆದಿದೆ
ಕನಸು ಹಾಗೇ ಉಳಿದಿದೆ

ಒಮ್ಮೆ ನೋಡಿ ನಕ್ಕು ಬಿಡು
ಅಷ್ಟೆ ಸಾಕು ಹೃದಯಕೆ
ಬದುಕು ಸುತ್ತು ಬಂದಿದೆ
ಕೊಂಡಿ ಬೆಸೆದು ವೃತ್ತ
ಈಗ ಪೂರ್ಣಗೊಂಡಿದೆ
ಬದುಕು ಅರ್ಥ ಕಂಡಿದೆ

ಅರ್ಥ ಉಂಟು ಸ್ವಾರ್ಥ ಇಲ್ಲ
ಹಳೆಯ ಗಾಯ ಮಾಗಿದೆ
ಉಳಿದ ಅರ್ಧ ಹಾಡನು
ನಾನು ಮೆಲ್ಲ ಹಾಡುವೆ
ಮುಪ್ಪುಇರದ ಮನವ
ನಿನಗೆ ತೆರೆದು ತೋರುವೆ

ನೆನಪಿನಾಳದ ಭಾವಿ
ತಳಬಂಡೆ ಕೆಳಗೆ ನೀರು
ಬರಡು ಮರದಿ ಚಿಗುರು
ಇನ್ನಷ್ಟು ವರುಷ ತಂಪು
ಕಂಡೀತು ಹೂವು ಹಣ್ಣು

***

ತತಃ ಕಿಂ

– ಟಿ.ಎಸ್. ಶ್ರವಣಕುಮಾರಿ

ಹೊರಲೋಕದ ಸಂಪರ್ಕ ಕಲ್ಪಿಸುವ ಕಿಟಕಿಯೆಂಬ ಕಿಂಡಿಯಿಲ್ಲದೆ ಕಾಲ ಕಳೆಯುವುದು ಅದೆಷ್ಟು ಕಷ್ಟ! ಎದುರು ಹಾಸಿಗೆಯ ಮೇಲೆ ಹಾಕಿರುವ ಅರ್ಥವಾಗದ ನವ್ಯಕಲೆಯ ಚಿತ್ತಾರವನ್ನು ಬಿಟ್ಟರೆ ನೋಡಲು ಏನೂ ಇಲ್ಲ. ಹದಿನಾರು ಕಕ್ಷೆಗಳಲ್ಲಿರುವ ಹಾಸಿಗೆಗಳು, ಮಾನಿಟರ್‌ಗಳು, ನಳಿಕೆಗಳು. ಕೇಳಲಾದರೂ ಏನಿದೆ. ನಿರಂತರವಾಗಿ ಸದ್ದು ಮಾಡುವ ಮಾನಿಟರ್‌ಗಳ ಸಾವಿನ ಎಚ್ಚರಿಕೆಯ ಗಂಟೆ, ದಾದಿಯರ ಬೂಟಿನ ಟಕ್ ಟಕ್ ಎನ್ನುವ ಸದ್ದು, ರೋಗಿಗಳ ಮುಲುಗು, ನರಳಾಟ, ಆಗೀಗ ವಿಸಿಟ್‌ಗೆಂದು ಬರುವ ಡಾಕ್ಟರುಗಳ ಧ್ವನಿ. ಆಯಾಗಳನ್ನೋ, ವಾರ್ಡ್ ಬಾಯ್‌ಗಳನ್ನೋ ಕರೆಯುವ ಒಂದಿಷ್ಟು ಆವಾಜ್‌ಗಳು. ನರಳುತ್ತಿರುವವರಿಗೆ ಇದೇ ಲೋಕ–ಹಗಲೇನು, ಇರುಳೇನು? ಹೊರಗೆ ಕಾಯುತ್ತಿರುವವರಿಗಲ್ಲವೇ ಎಷ್ಟು ದಿನ ಕಳೆಯಿತೆನ್ನುವ ಲೆಕ್ಕ!

ಅಪರಿಚಿತ ಜಾಗ, ತಿಳಿದಿಲ್ಲದ ಜನ, ಅಕ್ಕಪಕ್ಕದವರ ನರಳಾಟ, ಸಾವಿನ ಕರೆಯನ್ನು ಸೂಚಿಸುವ ಮಾನಿಟರ್‌ಗಳ ಸದ್ದು, ಅಲ್ಲಲ್ಲಿ ಸುಳಿದಾಡುತ್ತಾ ಕಾಣಿಸಿಕೊಳ್ಳುವ ಯಮದೂತ. ಇಷ್ಟೆಲ್ಲಾ ಅಪಸವ್ಯಗಳ ಪರಿಸರದಲ್ಲಿ ನಿದ್ರೆ ಬಂದೀತಾದರೂ ಹೇಗೆ? ಆಲಸ್ಯಗೊಂಡ ದೇಹ 'ಇನ್ನು ತಾಳಲಾರೆ' ಎನ್ನುವಂತೆ ಕಣ್ಣು ಮುಚ್ಚಿಕೊಂಡಾಗ ಎಲ್ಲೋ ಒಂದಿಷ್ಟು ಮಂಪರು. ಅಷ್ಟರಲ್ಲಾಗಲೇ ಆಯಾ ಬಂದು, "ಏಳಿ, ಏಳಿ. ನಿಮಗೆ ಸ್ನಾನ ಮಾಡ್ಸಿ ಬಟ್ಟೆ ಬದಲಾಯ್ಸಿ, ಬೆಡ್ ಮಾಡಿ ಹೋಗ್ಬೇಕು" ಎಂದು ಕರೆದಾಗ 'ಆಗಲೇ ಬೆಳಗಾಯಿತೆ?' ಎಂದುಕೊಂಡು ಎದುರು ಕಿಟಕಿಯನ್ನು ನೋಡಿದರೆ ಇನ್ನೂ ಪೂರಾ ಕಪ್ಪಾಗೇ ಇದೆ. "ಇಷ್ಟು ಬೇಗ? ಎಲ್ಲಿ ಮಾಡಿಸ್ತೀರಿ?" ಎಂದಾಗ "ವಾರ್ಡಲ್ಲಿರೋವ್ರೆಲ್ರ ಸ್ನಾನ ಮಾಡ್ಸೋ ಹೊತ್ಗೆ ಬೆಳ್ಗಿನ್ ಡ್ಯೂಟಿ ಆಯಾ ಬಂದ್ಬಿಡ್ತಾಳೆ. ಇಲ್ಲೇ ಸ್ಪಂಜ್ ಬಾತ್ ಕೊಡೋದಷ್ಟೇಯ" ಎನ್ನುತ್ತಾ ತನ್ನ ಪರಿಕರಗಳನ್ನು ಅಣಿಮಾಡಿಕೊಳ್ಳತೊಡಗಿದಳು. 'ಈ ಮಂಚ, ಹಾಸಿಗೆಯೇ ಊಟದ ಕೋಣೆ, ಮಲಗುವ ಕೋಣೆ, ಕಡೆಗೆ ಶೌಚಾಲಯವೂ ಆಗಿರುವಾಗ ಇನ್ನು ಸ್ನಾನದ ಕೋಣೆ ಯಾಕಾಗಬಾರದು?' ಎನ್ನಿಸಿ ಅವಳಿಗೆ ಸಹಕರಿಸಿದೆ. ನದಿ ತೀರಕ್ಕೆ ಹೋಗಿ ತಲೆಗಷ್ಟು ನೀರನ್ನು ಪ್ರೋಕ್ಷಣೆ ಮಾಡಿಕೊಂಡು, 'ಗಂಗೇಚ ಯಮುನೇಚ_' ಹೇಳಿಕೊಂಡು ಸ್ನಾನವಾಯಿತು ಎಂದು ಮಂತ್ರ ಸ್ನಾನ ಮಾಡುವ ಹಾಗೆ ಅವಳು ಮೈಯೊರಸಿ ಬೇರೆ ನೈಟಿ ತೊಡಿಸಿದ್ದನ್ನೇ ಸ್ನಾನವೆಂದುಕೊಂಡದ್ದಾಯಿತು. ಮಲಗಿದ ಹಾಗೆಯೇ ಅತ್ತ ಇತ್ತ ಸರಿಸಿ ಹಾಸಿಗೆಯ ಮೇಲ್ಹಾಸನ್ನೂ ಬದಲಿಸಿ ಹೋದ ಅವಳ ಕೈಚಳಕಕ್ಕೆ ವಿಸ್ಮಯಗೊಂಡೆ. ಹೀಗೆ ಬೆಳಗಿನ ಸುಪ್ರಭಾತ ಆರಂಭವಾಗಿತ್ತು.

ಸ್ವಲ್ಪವೇ ಹೊತ್ತು_ ದಾದಿಯಲ್ಲ, ಇನ್ನೊಬ್ಬಾಕೆ ಬಂದವಳು ತನ್ನನ್ನು ಆಹಾರತಜ್ಞೆ ಎಂದು ಪರಿಚಯಿಸಿಕೊಂಡು ನನ್ನ ಕೇಸಿನ ವಿವರಗಳೆಲ್ಲವನ್ನೂ ದಾದಿಯಿಂದ ಕೇಳಿಕೊಂಡು, 'ಸದ್ಯಕ್ಕೆ ನಿಮಗೆ ಕ್ಯಾಂಟೀನಿಂದ ತಿಂಡಿಯೇನೂ ಕಳಿಸಕ್ಕಾಗಲ್ಲ; ಕಾಫೀನೂ ಇಲ್ಲ. ಬರೀ ಗಂಜಿಯಷ್ಟೇ. ನಿಮ್ಮನ್ನು ವಾರ್ಡಿಗೆ ಕಳಿಸಿದ್ಮೇಲೆ ಕಾಫಿ, ತಿಂಡಿ, ಊಟ ಅಲ್ಲೀವರ್ಗೆ ಎಲ್ಲಾ ಅಡ್ಜಸ್ಟ್ ಮಾಡ್ಕೊಳಿ" ಎಂದಳು. ಏನನ್ನ ಅಡ್ಜಸ್ಟ್ ಮಾಡ್ಕೋಬೇಕೂಂತ ಗೊತ್ತಾಗಲಿಲ್ಲ. ಸುಮ್ಮನೆ ತಲೆಯಾಡಿಸಿದೆ. ಅವಳು ಮುಂದಿನ ಬೆಡ್ಡಿಗೆ ಹೊರಟಳು. ಮನೆಯಲ್ಲಿ ಎದ್ದು ಮುಖ ತೊಳೆದ ತಕ್ಷಣ ಕುಡಿಯುವ ಹಬೆಯಾಡುವ ಸ್ಟ್ರಾಂಗ್ ಕಾಫಿ ಇನ್ನು ಸದ್ಯಕ್ಕಿಲ್ಲ ಎಂದು ನನ್ನನ್ನೇ ನಂಬಿಸಿಕೊಂಡೆ. ಅಷ್ಟರಲ್ಲಿ ರೇಡಿಯೇಶನ್ ಎಂದು ಕೂಗುತ್ತಾ ಎಕ್ಸ್‌ರೇ ತೆಗೆಯುವ ಹುಡುಗ ಬಂದ. ಉಸಿರು ಬಿಗಿಹಿಡಿಸಿ ಅವನು ಪಟ ಹಿಡಿದುಕೊಂಡು ಹೊರಟದ್ದಾಯಿತು.

ಇಷ್ಟು ಹೊತ್ತಿಗೆ ರಾತ್ರಿ ಪಾಳಿಯ ದಾದಿಯ ಕೆಲಸದ ಸಮಯ ಮುಗಿದು, ಹಗಲಿನ ಪಾಳಿಯ ದಾದಿ ಬಂದು ಅವಳಿಂದ ಏಟಿ ಜ್ಞಾನ ವರ್ಗಾವಣೆ ಸಲುವಾಗಿ ನಿಂತಳು. ರಾತ್ರಿಯ ದಾದಿ ನನ್ನ ಗೋತ್ರ, ಪ್ರವರ, ಜಾತಕವನ್ನೆಲ್ಲಾ ವಿಧಿವತ್ತಾಗಿ ಹೇಳತೊಡಗಿದಳು. ಆ ದಿನ ಮಾಡಬೇಕಾಗಿರುವ ಮಂತ್ರ, ತಂತ್ರ, ಪೂಜೆ, ಹೋಮ, ಹವನ ಎಲ್ಲದರ ವಿವರವನ್ನೂ ನೀಡಿದಳು. ಅವಳೂ ಕೇಸ್‌ಶೀಟಿನತ್ತ ನೋಡುತ್ತಾ ತಲೆಯಾಡಿಸುತ್ತಾ ಕೇಳಿಸಿಕೊಂಡಳು. ನನಗೇನಾಗಿದೆ ಎಂದು ತಿಳಿದುಕೊಳ್ಳುವ ಸಲುವಾಗಿ ನಾನೂ ಆಸಕ್ತಿಯಿಂದ ಕೇಳಿಸಿಕೊಂಡೆ. ಹೆಚ್ಚೇನೂ ಅರ್ಥವಾಗದಿದ್ದರೂ, ಡೆಂಗ್ಯೂ, ಹೆಚ್1ಎನ್1 ಇನ್ನೂ ಏನೇನೋ ಖಾಯಿಲೆಗಳನ್ನು ಸಂದೇಹಿಸಿ ರಕ್ತದ ಮಾದರಿಗಳನ್ನು ಎಲ್ಲೆಲ್ಲಿಗೋ ಕಳಿಸಲಾಗಿದೆ ಎನ್ನುವುದು ಮಾತ್ರಾ ತಿಳಿಯಿತು.

ಪರೀಕ್ಷೆಗಾಗಿ ರಕ್ತವನ್ನು ತೆಗೆದುಕೊಳ್ಳುವ ದಾದಿ ಒಂದಿಷ್ಟು ಪ್ರನಾಳಗಳನ್ನು ಹಿಡಿದುಕೊಂಡು ಬಂದು ರಕ್ತವನ್ನು ಹೀರಿಕೊಂಡಳು. ಯಾವುದೋ ಪರೀಕ್ಷೆಗೆ ದಿನಕ್ಕೆರಡು ಬಾರಿ ಅಪಧಮನಿಯಿಂದ ರಕ್ತವನ್ನು ತೆಗೆದುಕೊಳ್ಳಬೇಕಿತ್ತು. ಆಳದಿಂದ ತೆಗೆಯಬೇಕಾದ್ದರಿಂದ ಪ್ರತಿಸಲವೂ ನನಗೆ ಕಷ್ಟ ಮತ್ತು ನೋವು ಎಂದು ಹತ್ತು ಹದಿನೈದು ಹೊರ ದಾರಿಗಳಿರುವ ನಳಿಕೆಗಳ ಒಂದು ಹೂಗೊಂಚಲಂತಹುದನ್ನು ಕಿವಿಯ ಹಿಂದಿನಿಂದ ಕತ್ತಿನ ಮೇಲ್ಭಾಗದವರೆಗೆ ಸ್ಥಿರವಾಗಿ ಕೂರುವಂತೆ ಚರ್ಮಕ್ಕೆ ಸೇರಿಸಿ ಹೊಲಿದು, ತಲೆಯನ್ನು ತಿರುಗಿಸಲು ಕೂಡಾ ಸಾಧ್ಯವಾಗದಂತೆ ಅದನ್ನು ಪ್ಲಾಸ್ಟರಿನಿಂದ ಭದ್ರ ಮಾಡಿಬಿಟ್ಟಳು!. ಯೋಗವೆಂದರೆ ಇದಲ್ಲವೇ? ಜುಟ್ಟು ಕಟ್ಟದೆ ತಲೆಗೊಂದು ಟೋಪಿ ಹಾಕಿದ್ದರೂ ಪರವಾಗಿಲ್ಲ; ಕಿವಿಯ ಹಿಂದೆ ಹೂಗೊಂಚಲೊಂದನ್ನು ಮುಡಿಯುವ ವೈಭೋಗ. ಮೂಗಿಗೆ ಆಮ್ಲಜನಕದ ನಳಿಕೆ, ಕೈಗೆ ರಕ್ತದೊತ್ತಡದ ಪಟ್ಟಿ, ಮೂತ್ರಕ್ಕೊಂದು ನಳಿಕೆ, ಇನ್ನೊಂದು ಕೈಗೆ ಡ್ರಿಪ್ಪು, ಹಿಂದೆ ಇನ್ನೂ ಯಾವ್ಯಾವುದೋ ನನ್ನ ದೇಹದ ಮುಖ್ಯಾಂಶಗಳನ್ನು ದಾಖಲಿಸುತ್ತಾ ಹೋಗುವ ಮಾನಿಟರ್‌ಗಳ ಅಲಂಕಾರ. ಇವೆಲ್ಲದರ ಮಧ್ಯೆ ಇರುವ ಹಂಸತೂಲಿಕಾ ತಲ್ಪದಲ್ಲಿ ಪವಡಿಸುವ ಸಿರಿ. ಈ ಸ್ಥಿತಿಯಲ್ಲಿ ಯಾರಾದರೊಂದು ಪಟ ಹಿಡಿದು, ಇಲ್ಲವೇ ಕನ್ನಡಿ ಹಿಡಿದು ತೋರಿಸಿದ್ದರೆ ಪಡೆದುಕೊಳ್ಳಬಹುದಿತ್ತು, ನನ್ನನ್ನು ನಾನೇ ಅವಲೋಕಿಸುವ ಸೌಭಾಗ್ಯವನ್ನು!

ತೀವ್ರ ನಿಗಾ ಘಟಕದ ಉಸ್ತುವಾರಿ ಡಾಕ್ಟರು ಎಲ್ಲಾ ರೋಗಿಗಳನ್ನೂ ಪರಿಚಯಿಸುವ ಸಲುವಾಗಿ ಬೆಳಗಿನ ಡ್ಯೂಟಿ ಡಾಕ್ಟರನ್ನು ತನ್ನೊಂದಿಗೆ ಕರೆದುಕೊಂಡು ಪ್ರತಿ ಬೆಡ್ಡಿನ ಭೇಟಿಮಾಡುತ್ತಾ ನನ್ನ ಬೆಡ್ಡಿಗೂ ಬಂದರು. ತಿಳಿಸಬೇಕಾದ ವಿವರಗಳನ್ನೆಲ್ಲಾ ತಿಳಿಸುತ್ತಾ ಡ್ಯೂಟಿ ಡಾಕ್ಟರ ಕಣ್ಣೊಳಗೆ ಕಣ್ಣಿಟ್ಟು, 'ಇದು ಆ ಮೇಡಂಕಡೆ ಕೇಸು; ಅರ್ಥವಾಯ್ತಲ್ಲಾ" ಎಂದರು ತಲೆಯಾಡಿಸುತ್ತಾ 'ಯಾವ ಡಾಕ್ಟರ್' ಎನ್ನುವ ಸೂಚನೆ ಕೊಡುವಂತೆ. ಆ ಮರಿ ಡಾಕ್ಟರು ತಕ್ಷಣವೇ 'ಓಹ್' ಎನ್ನುತ್ತಾ ನನ್ನ ಕಡೆಗೊಮ್ಮೆ ನೋಡಿದಳು. ಗುರುತಿಟ್ಟುಕೊಳ್ಳುವ ಸಲುವಾಗಾ! ಈ ಡಾಕ್ಟರಿಗೆ ಯಾವಾಗಲೋ ಪೂಜೆಯಾಗಿತ್ತೇನೋ ನನ್ನ ಡಾಕ್ಟರಿಂದ ಅಂದುಕೊಂಡೆ. ಅವಳಿಗೆ ನನ್ನಲ್ಲಿ ಆಸಕ್ತಿಯೇನೂ ಉಳಿಯಲಿಲ್ಲ. "ಮುಂದೆ ಹೋಗೋಣ" ಎನ್ನುತ್ತಾ ಹೊರಟೇಬಿಟ್ಟಳು. ರೋಗಿಗಳೊಂದಿಗೂ ತಮ್ಮ ರಾಜಕೀಯ ತರುವ ಅವರ ಮನಃಸ್ಥಿತಿಗೆ ಮನದಲ್ಲೇ ನಗುಬಂತು.

ಆಯಾಸಕ್ಕೆ ಕಣ್ಣೆಳೆದುಕೊಂಡು ಹೋಗುತ್ತಿದೆ. ಇವರೆಲ್ಲರ ಸಂಭ್ರಮ ಮುಗಿದಿದ್ದರೆ ಸ್ವಲ್ಪ ಹೊತ್ತು ನಿದ್ರಿಸಲು ಪ್ರಯತ್ನಿಸಬಹುದಿತ್ತೇನೋ ಎಂದುಕೊಳ್ಳುವಾಗಲೇ ನನ್ನ ಡಾಕ್ಟರು ಮರಿಡಾಕ್ಟರುಗಳ ಹಿಂಡಿನೊಂದಿಗೆ ಆಗಮಿಸಿದರು. ಪ್ರಯೋಗಾಲಯದಲ್ಲಿ ಮುಂದಿರುವ ಮಾದರಿಯನ್ನು ತೋರಿಸುತ್ತಾ ಶಿಷ್ಯರಿಗೆ ವಿವರಿಸುವ ಗುರುವಿನಂತೆ ನನ್ನ ಸ್ಥಿತಿಯನ್ನು ಅವರಿಗೆ ವಿವರಿಸುತ್ತಾ ಹೋದರು. ಮಧ್ಯೆ ಮಧ್ಯೆ ತಮ್ಮ ಶಿಷ್ಯವೃಂದದ ಜ್ಞಾನವನ್ನು ಪರೀಕ್ಷಿಸುವ ಸಲುವಾಗಿ ಪ್ರಶ್ನೆಗಳನ್ನು ಕೇಳತೊಡಗಿದರು. ಏನೋ ಹೀಗೇ ಗುರುಮರ್ಯಾದೆಯ ದೃಷ್ಟಿಯಿಂದ ಬಂದಿದ್ದ ಶಿಷ್ಯಗಣ

ತಬ್ಬಿಬ್ಬಾಗಿ 'ಬೆಬ್ಬೆಬ್ಬೆ_' ಎಂದಾಗ ಅಲ್ಲೇ ತರಾಟೆಗೆ ತೆಗೆದುಕೊಂಡು ಇದರ ಪಠ್ಯವನ್ನು ಓದಿಕೊಂಡು ಮಾರನೆಯ ದಿನ ತನಗೆ ಉತ್ತರವನ್ನು ಒಪ್ಪಿಸಬೇಕೆಂದು ತಾಕೀತು ಮಾಡಿದರು. ನಂತರ ನನ್ನೆಡೆಗೆ ತಿರುಗಿ "ಹೇಗಿದ್ದೀ?" ಎಂದಾಗ ಈ ನಾಟಕವನ್ನು ನೋಡುತ್ತಾ ಒಂದು ರೀತಿಯಲ್ಲಿ ಮಜಾ ತೆಗೆದುಕೊಳ್ಳುತ್ತಿದ್ದ ನಾನು ಅರ್ಥವಾಗ ದವಳಂತೆ ಅವರ ಮುಖವನ್ನೇ ನೋಡಿ, "ನೀವೇ ಹೇಳಿ" ಎಂದೆ ಜಾಣತನದಿಂದ. ಅವರೂ ಅಷ್ಟೇ ಜಾಣತನದಿಂದ ಬರಿದೆ ನಕ್ಕರು. "ಕಿವಿಯ ಹಿಂದಿರುವ ಹೂಗೊಂಚಲನ್ನು ಯಾವಾಗ ತೆಗೆಯುತ್ತಾರೆ?" ಎಂದು ಈಗಾಗಲೇ ಪ್ಲಾಸ್ಟರು ಬಿಚ್ಚಿಕೊಂಡು ಅಲ್ಲಾಡುತ್ತಾ ಹಿಂಸೆಕೊಡುತ್ತಿದ್ದ ಗೊಂಚಲನ್ನು ತೋರಿಸಿ ಕೇಳಿದೆ. "ಅದನ್ನು ಹಾಕಿರೋದು ನಿನ್ನ ಒಳ್ಳೇದಕ್ಕೆ. ಪ್ರತಿಸಲ ಚುಚ್ಚಿಸಿಕೊಳ್ಳುವ ಅಗತ್ಯವಿಲ್ಲ" ಎಂದಾಗ ನನ್ನ ಒಳ್ಳೇದಕ್ಕೋ, ಅವರ ಸೌಲಭ್ಯಕ್ಕೋ ಅರ್ಥವಾಗದೆ ಸುಮ್ಮನೆ ತಲೆಯಾಡಿಸಿದಂತೆ ಮಾಡಿದೆ. ದಾದಿಗೆ ಒಂದಿಷ್ಟು ನಿರ್ದೇಶನಗಳನ್ನು ಕೊಟ್ಟು, ಕೇಸ್ ಶೀಟಿನಲ್ಲಿ ಬರೆದು ಮುಂದೆ ಹೊರಟರು.

ಅಬ್ಬಾ! ಊಟ ತಿಂಡಿ ಯೋಚನೆಯಿಲ್ಲ. ಇನ್ನಾದರೂ ಮಲಗಲು ಅವಕಾಶವಾಗಬಹುದೇನೋ ಎನ್ನುವಾಗ ಒಂದು ತರುಣ ತರುಣಿಯ ಜೋಡಿ ಬಂತು. ನಾವು ಫಿಸಿಯೋ ಥೆರಪಿಸ್ಟ್. ನಿಮಗೆ ಕೆಲವು ವ್ಯಾಯಾಮಗಳನ್ನು ಮಾಡಿಸಬೇಕಾಗಿದೆ ಎಂದು ಉಸಿರು ತೆಗೆದುಕೊಳ್ಳುವ ಬಿಡುವ ಕ್ರಮವನ್ನು ನಿರ್ದೇಶಿಸತೊಡಗಿದರು. ಉಸಿರಾಡಲೇ ಆಯಾಸಪಡುತ್ತಿರುವಾಗ ಇನ್ನು ಸರಾಗ ಉಸಿರಾಟದ ವ್ಯಾಯಾಮವೆಲ್ಲಿ ಸಾಧ್ಯ?! ಪಕ್ಕದಲ್ಲೇ ನಿಂತಿದ್ದ ಯಮಕಿಂಕರ "ಮಾಡು ಮಾಡು, ನಾನೂ ಕಾಯ್ತಿದೀನಿ" ಎನ್ನುವಂತೆ ನಗುತ್ತಿದ್ದ. ಇವರಿಬ್ಬರು ಬಿಡಬೇಕಲ್ಲ ಅವನನ್ನೆಳೆದುಕೊಂಡು ಬಾಗಿಲತನಕ ತಳ್ಳಿಬಂದು ತಮ್ಮ ಕೆಲಸವನ್ನು ಮುಂದುವರೆಸಿ ನನ್ನನ್ನು ಹೈರಾಣಾಗಿಸಿ ಹೊರಟರು.

ಇನ್ನಾದರೂ ಮುಗಿಯಿತೇನೋ ಎಂದು ಕಣ್ಣು ಮುಚ್ಚುತ್ತಿರುವಾಗ ಚಂದವಾಗಿ ದಿರಿಸನ್ನು ಧರಿಸಿದ್ದ ಒಬ್ಬ ಹೆಂಗಸು "ಹೇಗಿದ್ದೀರಿ?" ಎಂದು ಕೇಳುತ್ತಾ ಬಂದರು. ಯಾರೆಂದು ನನಗೆ ಗುರುತಾಗಲಿಲ್ಲ. ಆಕೆಯೇ ತಾನು ಆಸ್ಪತ್ರೆಯ ಸಾರ್ವಜನಿಕ ಸಂಪರ್ಕ ವಿಭಾಗದಿಂದ ಬಂದಿದ್ದೇನೆ ಎಂದು ಹೇಳಿ, "ಇಲ್ಲಿನ ವ್ಯವಸ್ಥೆಯೆಲ್ಲಾ ಹೇಗಿದೆ? ನಿಮಗೆ ಅನುಕೂಲವಾಗಿದೆ ತಾನೆ. ಏನಾದರೂ ತೊಂದರೆಯಿದ್ದರೆ ತಿಳಿಸಿ" ಎಂದರು. ಕಟ್ಟಿಹಾಕಿದಂತೆ ಹೀಗೆ ಮಲಗಿರುವಾಗ ಯಾವುದನ್ನು ತೊಂದರೆಯೆನ್ನಬೇಕು, ಯಾವುದನ್ನು ಅನುಕೂಲವೆನ್ನಬೇಕೋ ನನಗೆ ತಿಳಿಯಲಿಲ್ಲ. ಬೆಪ್ಪಾಗಿ ಆಕೆಯ ಮುಖವನ್ನೇ ನೋಡಿದೆ. ಆಕೆ ತನ್ನ ಕರ್ತವ್ಯವನ್ನು ಮಾಡುತ್ತಿದ್ದರಷ್ಟೇ. "ನಿಮಗೇನಾದರೂ ತೊಂದರೆಯಿದ್ದರೆ ತಿಳಿಸಿ" ಎನ್ನುತ್ತಾ ಮುಂದಿನ ಹಾಸಿಗೆಯ ಕಡೆಗೆ ಹೊರಟರು. ನನ್ನಿಂದ ಯಾವ ಉತ್ತರದ ನಿರೀಕ್ಷೆಯೂ ಇಲ್ಲದೆ.

ಸ್ವಲ್ಪ ಹೊತ್ತಿನಲ್ಲೇ ಇನ್ನೊಬ್ಬ ಹೆಂಗಸು "ಈಗ ನಿಮಗೆ ಹೇಗನ್ನಿಸುತ್ತಿದೆ" ಎಂದು ಕೇಳುತ್ತಾ ಬಂದರು. ನನ್ನ ಮುಖದಲ್ಲಿದ್ದ "ನೀವ್ಯಾರು" ಎನ್ನುವ ಪ್ರಶ್ನೆಗೆ "ನಾನು ಕಾಸ್ಮಿಕ್ ಹೀಲರ್. ನಿಮ್ಮ ಆರೋಗ್ಯ ಚೆನ್ನಾಗತ್ತೆ ಅನ್ನೋ ಭರವಸೆ ಇಡಿ_." ಎನ್ನುತ್ತಾ ತನ್ನ ಚಿಕಿತ್ಸೆಯ ಶಕ್ತಿಯ ಬಗ್ಗೆ ಹೇಳುತ್ತಾ ನಾನು ನನ್ನ ಮನಸ್ಥಿತಿಯನ್ನು ಹೇಗಿಟ್ಟುಕೊಳ್ಳಬೇಕು ಎನ್ನುವುದರ ಬಗ್ಗೆ ದೀರ್ಘವಾಗಿ ಮಾತನಾಡಿ ತಲೆ ಸವರಿ ಮುಂದಿನ ಹಾಸಿಗೆಯ ಕಡೆಗೆ ತೆರಳಿದರು. ಇಷ್ಟರಲ್ಲಾಗಲೇ "ಜೋರಾಗಿ ಉಸಿರಾಡಿ" ಎಂದು ಹದಿನೈದು ಇಪ್ಪತ್ತು ಸಲವಾದರೂ ಎಚ್ಚರಿಸಿ ಹೋಗಿದ್ದ ದಾದಿ, ಮತ್ತೊಮ್ಮೆ ಬಂದು ಮಾನಿಟರ್ ಕಡೆಗೆ ನೋಡುತ್ತಾ "ಜೋರಾಗಿ_ ಇನ್ನೂ_ ಇನ್ನೂ ಜೋರಾಗಿ" ಎನ್ನುತ್ತಾ ಅವಳ ನಿರೀಕ್ಷೆಯ ಮಟ್ಟಕ್ಕೆ ಆಮ್ಲಜನಕ ಏರುವವರೆಗೆ ಅಲ್ಲಿಯೇ ನಿಂತಳು.

ಇನ್ನೇನು ಹೊರಡುತ್ತಾಳೆನ್ನುವಾಗ "ಏನಮ್ಮಾ, ಇಲ್ಲಿಗೆ ಬ್ಯುಟಿಷಿಯನ್ ಯಾವಾಗ ಬರ್ತಾರೆ?" ಎಂದು ಕೇಳಿದೆ. ಅವಳಿಗರ್ಥವಾಗದೆ ನನ್ನ ಮುಖವನ್ನೇ ನೋಡಿದಳು. ಬೆಳಗಿಂದ ಇಷ್ಟು ಜನ ಬಂದು ಹೋದರು. ಒಬ್ಬ

ಬ್ಯುಟಿಷಿಯನ್ನೂ ಬಂದಿದ್ರೆ ಈ ಹೂಗೊಂಚಲನ್ನ ಸರಿಯಾಗಿ ಮುಡಿಸ್ಕೋಬೋದಿತ್ತು. ಹೀಗೆ ಅಲ್ಲಾಡಿ ಕಿರಿಕಿರಿ ಮಾಡ್ತಿದೆ ಎಂದು ಕಿವಿಯ ಪಕ್ಕದ ನಳಿಕೆಗಳ ಗೊಂಚಲನ್ನು ತೋರಿದೆ. ಅವಳಿಗೆ ಜೋರಾಗಿ ನಗು ಬಂದು, “ಸಧ್ಯಕ್ಕೆ ನಾನೇ ಬ್ಯುಟಿಷಿಯನ್” ಎನ್ನುತ್ತಾ ಪ್ಲಾಸ್ಟರ್ ತಂದು ಮತ್ತೊಮ್ಮೆ ಅಂಟಿಸಿದಳು. ಅವಳು ಹೊರಟ ಹಿಂದೆಯೇ ಅದು ಮತ್ತೆ ಬಿಚ್ಚಿಕೊಂಡು ಮುಲಮುಲ ಮಾಡತೊಡಗಿತು. ಇಷ್ಟೆಲ್ಲಾ ಜನ ಟ್ಯಾಬ್ಲೋಗಳ ರೀತಿಯಲ್ಲಿ ಬಂದು ಪ್ರದರ್ಶನ ಕೊಟ್ಟು ಹೋದರಲ್ಲಾ; ಅದರಿಂದ ನನ್ನ ದೇಹಕ್ಕೇನಾದರೂ ಒಳಿತಾಯಿತೇ? ಏನು ಪ್ರಯೋಜನ? ‘ತತಃ ಕಿಂ’.

ಹೀಗೆಯೇ ಸಂಜೆಯೂ ಕಳೆದು ರಾತ್ರಿ ಪಾಳಯ ಆಯಾ ಬಂದವಳು, “ನೀವಿನ್ನೂ ಇಲ್ಲೇ ಇದೀರಾ?” ಎಂದಾಗ ಅವಳ ಪ್ರಶ್ನೆಯ ಅರ್ಥವೇನು ಎಂದು ಯೋಚಿಸತೊಡಗಿದೆ. ‘ಇನ್ನೂ ಬದುಕಿದ್ದು ಈ ಭೂಮಿಯ ಮೇಲೇ ಇದ್ದೀರಾ ಎಂದೋ ಅಥವಾ ವಾರ್ಡಿಗೋ ಮನೆಗೋ ಹೋಗಲಿಲ್ಲವಾ’ ಎಂತಲೋ??

***

ಭಾಷಾವಿಸ್ಮಯ

– ಭ.ರಾ.ವಿಜಯ ಕುಮಾರ್

ಅಮಾವಾಸ್ಯೆಯೆಂದರೆ ಕರಿಯ ಬೆಳದಿಂಗಳೇ?
ಹುಣ್ಣಿಮೆಯು ತಾನು ಬಿಳಿಯ ಕತ್ತಲೆಯೇ?
ಹಾಗೇ ಕರೆದರೆ ಎಲ್ಲರೂ ತಪ್ಪೇನು ಇಲ್ಲ
ಅಭ್ಯಾಸವಾದರದೇ ಅರ್ಥವಾದೀತಲ್ಲ!

ಅಕ್ಷರಕೆ ನಿಷ್ಪತ್ತಿ ಪದಕೆ ವ್ಯುತ್ಪತ್ತಿ
ಎಂದೊ ಮಾಡಿದ್ದುಂಟು ಪೀಳಿಗೆಗಳಲ್ಲಿ
ಇದಕೆ ಅದೆ ಪದವೇಕೆ? ಕೇಳಲೇ ಇಲ್ಲ
ಬದಲಾದರು ರೂಢಿಯಲಿ ಅದೇ ಉಳಿಯಿತಲ್ಲ!

ಅವರವರಿಗೆ ಅವರೆ ಕಂಡ ಇತಿಹಾಸದ ಪುಟಗಳು
ಪರಂಪರೆಯ ಹಿನ್ನೆಲೆಯು, ಅದಕವರದೆ ತರ್ಕವು
ನಂಬಿಕೆಯೊ ಗೌರವವೊ ಅಭಿಮಾನದ ಭಾವವೊ?
ಅದರಲ್ಲೆ ಕಲ್ಪನೆಯು ವಿಸ್ತರಣೆಯ ಲೋಕವೊ

ಹೊಸ ಭಾಷೆ ಹೊಸ ದನಿಗೆ ಅರ್ಥವೇ ಇಲ್ಲ
ನಾವದಕೆ ಬೇರೆಯದೆ ಹೇಳಿರುವೆವಲ್ಲ?
ಅವರಿಗದರ ಅರ್ಥವುಂಟು. ನಮಗದು ಬರಿ ಶಬ್ಧ!
ಭಾವದನುಭವ ಮಾತ್ರ ಇಬ್ಬರಿಗು ಚೋದ್ಯ!

ನಗುವೊಂದು ಅಳುವೊಂದು ನೋವು ನಲಿವೊಂದು
ಮಗುವೊಂದು ದನಿಯೊಂದು ಸಾವು ಬದುಕೊಂದು
ಭಾವಕೆಂದಿಗು ತಕ್ಕ ಭಾಷೆಯೇ ಇಲ್ಲ!
ಬಳಸುತ್ತ ಒಪ್ಪಿಹೆವು ಬೇರೆ ವಿಧಿಯಿಲ್ಲ!

***

ನಾ ಮೆಚ್ಚಿದ 'ಕ್ಯಾಚ್ 22'

– ವೆಂಕಟ್ ಕಾಮತ್

ಇಲ್ಲಿರುವ ನಾವೆಲ್ಲರೂ ಸಾಹಿತ್ಯ ಪ್ರೇಮಿಗಳು.. ಎಲ್ಲರೂ ಓದುಗರೇ, ಬಹಳ ಮಂದಿ ಓದುವುದರೊಡನೆ ತಾವೂ ಬರೆಯುತ್ತಾರೆ. ನಮ್ಮ ಈ ವೇದಿಕೆಯ ಬಗ್ಗೆ ನಮಗೆಲ್ಲರಿಗೂ ಬಹಳ ಹೆಮ್ಮೆ ಇದೆ.

ಒಬ್ಬ ಪುಸ್ತಕ ಪ್ರೇಮಿಯನ್ನು ಅಥವಾ ನಾಟಕ, ಚಲನಚಿತ್ರ ಪ್ರೇಮಿಯನ್ನು 'ನೀ ಅತಿಯಾಗಿ ಮೆಚ್ಚಿರುವ ಒಂದೇ ಒಂದು ಕಾದಂಬರಿ, ನಾಟಕ ಅಥವಾ ಸಿನಿಮಾ ಹೆಸರಿಸು' ಎಂದರೆ ಅದೊಂದು ಬಹಳ ಪ್ರಯಾಸದ ಕೆಲಸ. ನಾವು ಒಂದೊಂದು ಪರಿಯಲ್ಲಿ ಸುಖಾಂತ, ದುಃಖಾಂತ, ವೈಜ್ಞಾನಿಕ, ಚಾರಿತ್ರಿಕ ಹೀಗೆ ವಿಂಗಡಿಸಿ ಅದರಲ್ಲಿ ಅತ್ಯುತ್ತಮವಾದ ಒಂದನ್ನು ಹೆಸರಿಸುವುದು ಸ್ವಲ್ಪ ಸುಲಭದ ಕೆಲಸವೆನ್ನಬಹುದು.

ನಾನು ಕನ್ನಡ ಹಾಗೂ ಇಂಗ್ಲಿಷ್‌ನ ಬಹಳ ಕಾದಂಬರಿಗಳನ್ನು ಓದಿದ್ದರೂ ನಾನು ಕೊಂಡುಕೊಂಡವುಗಳಲ್ಲಿ ಶೇಕಡಾ 10ರಷ್ಟೂ ನಾನು ಓದಿಲ್ಲ! ನನ್ನ ಕೊಳ್ಳುಬಾಕತನ ಮಿತಿಮೀರಿ ನನ್ನ ಉಳಿದ ಜೀವಮಾನದ ಪ್ರತಿದಿನದ ಹತ್ತು ಘಂಟೆ ಪೂರ್ತಿ ಓದಿದರೂ ಇದು ಮುಗಿಯದು ಎಂದು ನಾನು ತೀರ್ಮಾನಕ್ಕೆ ಬಂದಿದ್ದೇನೆ. ಈಗ ನಾನು ಓದಿ ಮೆಚ್ಚಿದ ಬಹಳ ಕಾದಂಬರಿಗಳಲ್ಲಿ ನನಗೆ ಆಗೊಮ್ಮೆ ಈಗೊಮ್ಮೆ ಅದ್ಭುತ ಬರವಣಿಗೆ, ವಿಚಿತ್ರ ಚಿಂತನೆ, ಅಗೋಚರ ಸತ್ಯ. ಎಂದು ಪದೇ ಪದೇ ನೆನಪಿಗೆ ಬರುವ ಕಾದಂಬರಿ ಅಂದರೆ ಜೋಸೆಫ್ ಹೆಲ್ಲೆರ್ ಬರೆದಿರುವ "ಕ್ಯಾಚ್ 22"

ಜೋಸೆಫ್ ಹೆಲ್ಲೆರ್ 1923ರ ಮೇ 1 ರಂದು ಅಮೆರಿಕೆಯ ನ್ಯೂಯಾರ್ಕ್‌ನಲ್ಲಿ ಜನಿಸಿದರು. ಕಾದಂಬರಿ, ಸಣ್ಣ ಕಥೆಗಳು, ನಾಟಕಗಳು, ಚಲನಚಿತ್ರಗಳ ಸ್ಕ್ರೀನ್ ಪ್ಲೇ ಮುಂತಾದವುಗಳನ್ನು ರಚಿಸಿರುವ ಇವರು 1961ರಲ್ಲಿ 'ಕ್ಯಾಚ್ 22' ಎಂಬ ಕಾದಂಬರಿ ಬರೆದಿದ್ದಾರೆ. ಸಾಹಿತ್ಯ ಕ್ಷೇತ್ರದ ಕೊಡುಗೆಗಾಗಿ ಇವರು 1972ರಲ್ಲಿ ಸುಪ್ರಸಿದ್ಧ ನೋಬೆಲ್ ಪ್ರಶಸ್ತಿಗೆ ನಾಮಿನೇಷನ್ ಪಡೆದಿದ್ದಾರೆ. ಇವರ ಸಾಧನೆಗಳು ಪುಟಗಟ್ಟಲೆ ಇವೆ. ಜೀವನದ ಬಹುಭಾಗ ಶಿಕ್ಷಣ ಕ್ಷೇತ್ರದಲ್ಲಿ ಹಾಗೂ ತಮ್ಮ ಅನುಭವ, ಅನಿಸಿಕೆಗಳ ಆತ್ಮಚರಿತ್ರೆ ಬರೆದ ಇವರು 1982ರಿಂದ 'ಬ್ಯಾರಿ ಸಿಂಡ್ರೋಮ್' ಎಂಬ ಪ್ಯಾರಾಲಿಸಿಸ್ ಕಾಯಿಲೆಯಿಂದ ಬಳಲುತ್ತಿರುವಾಗ ತನ್ನೊಡನೆ ಇದ್ದು ಸಹಕರಿಸಿದ ಅಪೂರ್ವ ಗೆಳೆಯರಾದ ಅಮೆರಿಕೆಯ ಗಣ್ಯವ್ಯಕ್ತಿಗಳನ್ನು ಕುರಿತು "ನೋ ಲಾಫಿಂಗ್ ಮ್ಯಾಟರ್' (ಇದು ನಗುವಂತಹ ವಿಷಯವಲ್ಲ) ಎಂಬ ಪುಸ್ತಕದಲ್ಲಿ ಮಾರಿಯೋ ಪುಝೋ, ಮೆಲ್ ಬ್ರೂಕ್ಸ್, ಡಸ್ಟಿನ್ ಹೊಫಮನ್‌ರ ಬಗ್ಗೆ ಬರೆದಿದ್ದಾರೆ. 1987ರಲ್ಲಿ ಒಮ್ಮೆ ಸ್ವಲ್ಪ ಚೇತರಿಸಿದ ಇವರು, ತಮ್ಮ ಹಳೆಯ ನರ್ಸ್ ವಲೆರಿ ಎಂಬುವಳನ್ನು ವರಿಸಿದರು. ಮೊದಲ ಹೆಂಡತಿ ಶಿರ್ಲಿಯಿಂದ ಇವರಿಗೆ ಎರಡು ಗಂಡು ಮಕ್ಕಳಿವೆ. 1999ರಲ್ಲಿ ಜೋಸೆಫ್ ಹೆಲ್ಲೆರ್ ಹೃದಯಾಘಾತದಿಂದ ಮಡಿದರು.

ಇವರು ಬರೆದ 'ಕ್ಯಾಚ್ 22' ಅಮೆರಿಕ ಹಾಗೂ ವಿಶ್ವದಾದ್ಯಂತ ಎಷ್ಟು ಜನಪ್ರಿಯತೆ, ಮನ್ನಣೆಗೆ ಪಾತ್ರವಾಯಿತೆಂದರೆ ಜನೋಪಯೋಗಿ ತದ್ವಿರುದ್ಧ ಜೋಡಿ ವಾಕ್ಯಗಳನ್ನು 'ಕ್ಯಾಚ್ 22ಗಳು' ಎಂದು ಹೇಳುವ ಅನ್ವರ್ಥನಾಮ ಬಳಕೆಗೆ ಬಂದಿದೆ. ಮಿಶ್ರ, ತದ್ವಿರುದ್ಧ ವಿಮರ್ಶೆಗಳಿಗೆ ಎಡೆಕೊಟ್ಟ ಕ್ಯಾಚ್ 22 ಮುಂದೆ ವಿಶ್ವವಿದ್ಯಾಲಯ ಹಾಗೂ ವಾಯು ಪಡೆಯ ಶಿಕ್ಷಣ ಕ್ರಮಗಳಲ್ಲಿ ಪಠ್ಯ ಪುಸ್ತಕವಾಗಿ ದಾಖಲಾಯಿತು. ಕೋಟಿ ಪ್ರತಿಗಳಿಗಿಂತ ಹೆಚ್ಚು ಮಾರಾಟವಾಯಿತು. ಸಮೀಕ್ಷೆಯಲ್ಲಿ ನೂರು ಅತ್ಯುತ್ತಮ ಅಮೆರಿಕನ್ ಸಾಹಿತ್ಯ ಪುಸ್ತಕದ ಪಟ್ಟಿಯಲ್ಲಿ ಕ್ಯಾಚ್ 22 ಏಳನೇ ಸ್ಥಾನದಲ್ಲಿ ಕಂಡಿತು

ಜೋಡಿ ತದ್ವಿರುದ್ಧ ಜೋಡಿಗಳು ಎನ್ನುವುದಕ್ಕೆ ಕೆಲವೊಂದು ನಮ್ಮವೇ ಆದ ಉದಾಹರಣೆಗಳನ್ನು ಇಲ್ಲಿ ನೋಡೋಣ

1. ಮದುವೆ ಆಗದೆ ಹುಚ್ಚು ಬಿಡದು, ಹುಚ್ಚು ಬಿಡದೆ ಮದುವೆ ಆಗದು.
2. ಅನುಭವ ಇಲ್ಲದೆ ಕೆಲಸ ಸಿಗದು, ಕೆಲಸ ಸಿಗದೇ ಅನುಭವ ಸಿಗದು.
3. ನೀರಿಗಿಳಿಯದೆ ಈಜು ಬರದು, ಈಜು ಬರದೇ ನೀರಿನ ಭಯ ಹೋಗದು.

ಕ್ಯಾಚ್ 22 ನಮ್ಮ ಅರಿವಿಗೂ ಮೀರಿದ ಅನುಭವಗಳ ಜೋಡಣೆ. ಇಲ್ಲಿ ದೃಷ್ಟಿಕೋನವೇ ಬೇರೆ. ವಿಯೆಟ್ನಾಮ್ ಸೈನ್ಯಕ್ಕೆ ನಿಯೋಜಿಸಿ ಕಳಸಲ್ಪಟ್ಟ ಅಮೇರಿಕೆಯ ಯುವ ಬಾಂಬಿಂಗ್ ಪೈಲಟ್‌ಗಳಿಗೆ ಅನುಕ್ರಮವಾಗಿ ಬೆಳಗಾದೊಡನೆ ಯುದ್ಧ ವಿಮಾನಗಳಲ್ಲಿ ಹೋಗಲೇಬೇಕು. ಆದರೆ ಪ್ರಾಣ ಕಳೆದುಕೊಳ್ಳುವ ಸಂಭವ ಹೆಚ್ಚು. ದೇಶಪ್ರೇಮ, ದೇಶಭಕ್ತಿ ಎನ್ನಲು ವಿಯೆಟ್ನಾಂ ತಮ್ಮ ದೇಶವಲ್ಲ. ಅಮೇರಿಕನ್ ಜೀವನ ಶೈಲಿಗನುಗುಣವಾಗಿ ಆರೋಗ್ಯವಂತ ಮರ್ಯಾದಸ್ತ ಕುಟುಂಬದ ಎಲ್ಲ ಯುವಕರು ಸೈನ್ಯಕ್ಕೆ ಭರ್ತಿಗೊಳ್ಳುತ್ತಾರೆ. ಅವರಿಗೆ ಒಮ್ಮೆ ಯುದ್ಧ ಮುಗಿದರೆ ಸಾಕು.

ವೈದ್ಯಕೀಯ ತಪಾಸಣೆಯಲ್ಲಿ ನಿಮಗೆ ಪ್ರಾಣಭಯ, ವಿಮಾನ ಹಾರಿಸಲು ಹೆದರಿಕೆ, ಒಮ್ಮೆ ಓಡಿಹೋಗಿ ಮನೆ ಸೇರೋಣ ಎನಿಸುತ್ತಿದೆ ಅಂದರೆ ನೀವು ಆರೋಗ್ಯವಾಗಿದ್ದೀರಿ. ಆದುದ್ದರಿಂದ ನಿಮ್ಮ ಅನಿಸಿಕೆಗಳು ಸರಿ ಇವೆ. ಇದು ಎಲ್ಲರಿಗೂ ಅನಿಸುವ ಪರಿ. ಆದುದರಿಂದ ನಿಮಗೆ ಮೆಡಿಕಲ್ ಗ್ರೌಂಡ್ಸ್‌ನಲ್ಲಿ ಹೋಗಲು ಅನುಮತಿ ಇಲ್ಲ. ನಿಮ್ಮ ಮಾನಸಿಕ ಅರೋಗ್ಯ ಸರಿಯಿಲ್ಲ ಎಂದಾದರೆ ನಿಮಗೆ ಪ್ರಾಣಭಯ ಇರುವುದಿಲ್ಲ. ನಿಮಗೆ ಮನೆಗೆ ಹೋಗಬೇಕು ಎನಿಸುವುದಿಲ್ಲ. ಆದುದರಿಂದ ಮನೆಗೆ ಕಳಿಸುವ ಅಗತ್ಯವಿಲ್ಲ. ಹಾಗಾಗಿ ಇದೊಂದು ಕ್ಯಾಚ್ 22.

ಇಲ್ಲಿ ಆಕರ್ಷಕವಾಗಿ ಮಾತಾಡುವವರಿಗೆ ಬೆಲೆಯಿಲ್ಲ. ಅವರೊಡನೆ ಮಾತಾಡಿದರೆ ಘಂಟೆಗಳು ನಿಮಿಷದಂತೆ ಕಳೆದು, ಬೇಗ ನಾಳಿನ ಬೆಳಗು, ಅದರೊಡನೆ ರೌಂಡ್ಸ್ ಹೋಗುವ ಸಮಯ ಬಂದೇಬಿಡುತ್ತದೆ. ಅದು ನಮಗೆ ಬೇಡವೇಬೇಡ. ಅದೇ ಆ ಬೋರ್ ಹೊಡೆಸುವ ನಿಷ್ಪ್ರಯೋಜಕ ತರಲೆಯ ಬಳಿ ಕುಳಿತರೆ ಪ್ರತಿ ನಿಮಿಷ ಘಂಟೆಯಂತೆ ತೋರುತ್ತದೆ ಸಮಯ ಮುಂದೆ ಹೋಗುವುದೇ ಇಲ್ಲ. ಇದ್ದ ಸಮಯವೇ ಬಹಳ ಬದುಕಿದಂತೆ ಭಾಸವಾಗುತ್ತದೆ. ಆದುದರಿಂದ ನಾವೆಲ್ಲಾ ಅವನೊಡನೆ ಸಮಯ ಕಳೆಯೋಣ.

ಇನ್ನೊಂದೆಡೆ ಸ್ವಾರ್ಥಿ ಡೊಕ್ ಡನೀಕಾ, ಯುದ್ಧ ವಿಮಾನದಲ್ಲಿ ಹೋಗಿರುವುದಾಗಿ ಬರೆದು, ಹೆದರಿಕೆ ಆಲಸ್ಯದಿಂದ ಹೋಗದೆ ಹಿಂದುಳಿದಾಗ ವಿಮಾನದ ಪೈಲಟ್ ಆತ್ಮಹತ್ಯೆ ಮಾಡಿಕೊಂಡದ್ದರಿಂದ ಡನೀಕಾ ಕೇವಲ ಕಾಗದ ಪತ್ರಗಳಲ್ಲಿ, ಪುರಾವೆಗಳಲ್ಲಿ ಅಧಿಕೃತವಾಗಿ ಸಾವು ಪಡೆದು, ಈ ಕುಕಾರ್ಯದಲ್ಲಿ ತಮ್ಮ ಪಾತ್ರ ಹೊರಬರದಂತೆ ಅಧಿಕಾರಿಗಳು, ಇತರ ಸೈನ್ಯಪಡೆಯವರು ವರ್ತಿಸುವಾಗ, ಡನೀಕಾ ಒಂದು ನಡೆದಾಡಿಕೊಂಡಿರುವ, ಎಲ್ಲರಿಗೂ ಗೋಚರಿಸುವ ಜೀವಂತ ಭೂತವಾಗುತ್ತಾನೆ. ಆತನ ಅಸ್ತಿತ್ವವು ಒಪ್ಪಿಕೊಳ್ಳದ ಒಂದು ಸತ್ಯವಾಗಿ ಉಳಿಯುತ್ತದೆ. ಆತ ಬರೆದ ಕಾಗದಗಳು, ಮೃತ ಯೋಧನ ಪಿಂಚಣಿ ಪಡೆದು ಪುಟ್ಟ ಮಗನೊಂದಿಗೆ ನೆಮ್ಮದಿಯ ಜೀವನ ನಡೆಸ ಬಯಸಿದ ಹೆಂಡತಿಯನ್ನು ಕಾಡಿ ಆಕೆ ಬೇರೊಂದು ಹಳ್ಳಿಗೆ ಹೋಗಿ ತಲೆಮರೆಸಿಕೊಂಡು ಬದುಕುತ್ತಾಳೆ. ಡನೀಕಾ ಬದುಕಿದ್ದೇ ವೀರಸ್ವರ್ಗ ಪಡೆದ ನಿದರ್ಶನವಾಗುತ್ತಾನೆ.

ಕ್ಯಾಚ್ 22ರಲ್ಲಿ ಶಿಲಾಶಾಸನದಂತೆ ಅಮೇರಿಕನ್ ಸಾಹಿತ್ಯದಲ್ಲಿ ಕೆತ್ತಿ ಉಳಿದಿರುವ ಕೆಲವೊಂದು ಸಾಲುಗಳು ಇಂತಿವೆ:

1. ಹಾಂ! ಆತ ಶತ್ರುವೆ, ನಿನ್ನ ಕೊಂದವನು ಅವನು ಯಾವ ಕಡೆಯವನು ಎಂದು ಬೇಕಿಲ್ಲ.

2. ಹೌದು, ಬಹಳವೇ ದೇಶಗಳಿವೆ ಎಲ್ಲಕ್ಕಾಗಿ ನಾವು ಸಾಯಬೇಕಾಗಿಲ್ಲ.
3. ಇನ್ನು ಮುಂದೆ ನಾನು ಬರೀ ನನಗಾಗಿಯೇ ಚಿಂತಿಸುತ್ತೇನೆ.
4. ಹುಚ್ಚು ಒಂದು ಸಾಂಕ್ರಾಮಿಕ ರೋಗ
5. ಎಂದೂ ಪ್ರಶ್ನೆ ಕೇಳದೇ ಇರುವವರಿಗೆ ಕಲಿಸುವುದು ಅಸಾಧ್ಯ ಹಾಗೂ ಅನಗತ್ಯ ಎಂದು ಅವರೆಲ್ಲರೂ ನಿರ್ಧರಿಸಿದ್ದರು
6. ಅವನು ಸದಾ ಬದುಕುಳಿಯ ಬಯಸಿದನು ಅಥವಾ ಆ ಪ್ರಯತ್ನದಲ್ಲೇ ಮಡಿದನು
7. ಸಾಹಿತ್ಯದ ಬಗ್ಗೆ ಆತ ಎಲ್ಲವನ್ನೂ ತಿಳಿದಿದ್ದನು, ಅದನ್ನು ಆನಂದಿಸುವುದೊಂದನ್ನು ಬಿಟ್ಟು
8. ಯುದ್ಧದಲ್ಲಿ ಯಾರು ಗೆದ್ದರೆಂಬ ವಿಷಯ ಸತ್ತವರಲ್ಲಿ ಯಾವ ಬದಲಾವಣೆಯನ್ನೂ ತಾರದು.

'ಕ್ಯಾಚ್ 22' ಬರೀ ಓದುವ ಕಾದಂಬರಿಯಲ್ಲ. ಇದೊಂದು ಗಹನವಾಗಿ ಚಿಂತಿಸುವ ಕೆಲವೊಂದು ಸವಾಲುಗಳ ಮತ್ತು ವಿಚಾರಗಳ ಸಂದರ್ಭಗಳಿಂದ ಕೂಡಿದ ಚಿತ್ರಣ.

ನಾನು ಇನ್ನೊಮ್ಮೆ ಪೂರ್ಣ ವಿರಾಮದಲ್ಲಿ ಓದಿ ಮೆಲುಕು ಹಾಕಬೇಕು.

***

ಸಮನ್ವಯ ಸಮಿತಿ, ಕನ್ನಡವೇ ಸತ್ಯ, ಸಾಹಿತ್ಯ ದಾಸೋಹ ವೇದಿಕೆ

ಸಂಪರ್ಕ ವಿಳಾಸ: ಶ್ರೀ ಬೆಂ.ಶ್ರೀ. ರವೀಂದ್ರ, 'ತವರು', 288, 3ನೆಯ ಮುಖ್ಯ ರಸ್ತೆ, 11ನೆಯ ಅಡ್ಡ ರಸ್ತೆ, 1ನೆಯ ಹಂತ, ವಸಂತ ವಲ್ಲಭ ನಗರ, ವಸಂತಪುರ, ಬೆಂಗಳೂರು – 560 061
ಚರವಾಣಿ: 9448994199 – ಇಮೇಲ್ ವಿಳಾಸ: bsrsbi1954@gmail.com

ಈ ಸಂಚಿಕೆಯ ಸಂಕಲನ, ವಿನ್ಯಾಸ : ಎಸ್. ಶೃಂಗೇಶ್ವರ ಶರ್ಮ –
ಚರವಾಣಿ: 9448291329 – ಇಮೇಲ್ ವಿಳಾಸ: sringeswar.sharma@gmail.com

ಸಾಹಿತ್ಯ ದಾಸೋಹ 215 ನಡೆದ ದಿನಾಂಕ: 22 ಜುಲೈ 2023
ಸಂಚಿಕೆಯ ಬಿಡುಗಡೆ ದಿನಾಂಕ: 26 ಆಗಸ್ಟ್ 2023 – ಶನಿವಾರ

ರವಿತೇಜನ ಮುಕ್ತಕಗಳು

– ಬೆಂ.ಶ್ರೀ. ರವೀಂದ್ರ

ಈ ಪಠ್ಯ ಇವಗೆ ಸಲ್ಲ
ಆ ಪಠ್ಯ ಅವಗೆ ಸಲ್ಲ
ಪಾಠಕಗೆ ಜಟಾಪಟಿ ಹೊಲ್ಲ – ರವಿತೇಜ (001)

ಕಂಡಿದ್ದೆ ನಿಜವೆಂಬುದು ಕಗ್ಗಲು
ನಿಜಕೆ ನೂರೆಂಟು ಮಗ್ಗಲು
ಸುಖವು ಎಲ್ಲವನೊಪ್ಪಲು ರವಿತೇಜ (002)

ಒಪ್ಪು ಶಿಖರಕ್ಕೆ ಹಲವು ದಾರಿಗಳೆಂದು
ಇಲ್ಲವಾಗುವುದೆಲ್ಲ ಅಲ್ಲಿ ತಲುಪಲು
ನನ್ನದೆ ಸರಿಯೆಂಬ ಜಿದಿರಂಪ ಹೊಲ್ಲ ರವಿತೇಜ (003)

ಚೆಲುವೆಂದು ನಾಗನ ಮುದ್ದಿಸುವುದುಂಟೆ
ಚುರುಕೆಂದು ಪಾರದವ ಕುಡಿವುದುಂಟೆ
ವಸ್ತುಗುಣ ಗ್ರಹಿಸಿ ನಡೆ ರವಿತೇಜ (004)

ಪರಿಪೂರ್ಣರೆಲ್ಲುಂಟು ಜಗದಿ,
ಹಲವು ವಾಖ್ಯಾನ ವಾಲ್ಮೀಕಿ ವ್ಯಾಸರಿಗೂ
ಅಪರಿಪೂರ್ಣತೆಯನೊಪ್ಪು ರವಿತೇಜ (005)

ಬಂದರೂ ನಿಂದರೂ ಮಳೆ ನಿಂದಿಪರು
ಅವ್ಯವಸ್ಥೆಯ ಸೋತಮೌಲ್ಯದ ಸೊಲ್ಲಿದು
ಪ್ರಕೃತಿ ಪೀಡನೆಯನೆಂದು ನಿಲಿಪರು ರವಿತೇಜ (006)

ದೀರ್ಘ ಹಗಲಿನಂದೆ
ಯೋಗದ ಹೆಗಲ್ಮುಂದೆ
ಯೋಗದಿಂದಲೆ ಹಗಲು ರವಿತೇಜ (007)

ಛೀ, ಥೂ, ನಾಯಿ ನರಿ ಕತ್ತೆಗಳೆಂದು
ಬಯ್ದಾಡಿಕೊಳುವೆವೆಂದರಿತರೆ ಪ್ರಾಣಿಗಳು
ಛೀ, ಥೂ ಮನುಜನೆಂದು ಬಯ್ದಾಡುವುವು ರವಿತೇಜ (08)

ರಾತ್ರಿ ಹಗಲಿನ ನರ್ತನ
ಇಲ್ಲ ಕಾಲದ ಆವರ್ತನ
ಬದುಕು ಈ ಕ್ಷಣ ರವಿತೇಜ (009)

ಕಾವಿ ಮಾಸಿ ಕಾಮನಬಿಲ್ಲು ಮಿನುಗಿ
ತಳಕು ಬೆಳಕನು ನುಂಗಿ ರಾತ್ರಿ ಕಂಡ
ಕೂಪಕೆ ಹಗಲು ಜಾರಲಹುದೆ – ರವಿತೇಜ (010)

ಗೌರವಿಸು ಭಿನ್ನತೆಯನು ವೈಶಿಷ್ಟ್ಯವನು
ಗುರುತಿಸು ಅದರಲಿ ಶಿಷ್ಟ ಸಮಾನತೆಯನು
ಹೆಣೆ ಸಮಾಜಕೊಂದು ಸೂತ್ರವನು – ರವಿತೇಜ (011)

ಒಳಗೆ ಸ್ವಾರ್ಥದ ಘಾಟು
ಹೊರಗೆ ಮಾತಿನ ಗಿಲೀಟು
ಕವಿಚಿ ಹಾಕುವ ಒಳೇಟು – ರವಿತೇಜ (012)

ಗಂಡು ಹೆಣ್ಣಿನ ಅನುಬಂಧ
ಭೋಗಭಾಗ್ಯವಷ್ಟೆ ಅಲ್ಲ ಸುಯೋಗ್ಯ
ಸಾಮಾಜಿಕ ಯೋಗಸೂತ್ರವು – ರವಿತೇಜ (013)

ತಿಳಿದವನಲ್ಲ ತಿಳಿಯದವನೂ ಅಲ್ಲ
ತಿಳಿಯದ್ದನ್ನು ತಿಳಿದು ತಿಳಿದಿದ್ದನ್ನು ತಿಳಿಸಿ
ತಿಳಿಗೊಳಿಸು ಬದುಕು – ರವಿತೇಜ (014)

ಲಾಲಸೆಯೆಂದು ಹೀಗ್ಳೆಸದಿರು
ಗಂಡು ಹೆಣ್ಣಿನ ಆಕರ್ಷಣೆಯನು
ಲಾಲಿಸಿ ಮನ್ನಿಸಿ ಪಾಲಿಸು ಸಹಜವೆಂದು– ರವಿತೇಜ (015)

ಬಿಟ್ಟವಗೆ ಬಿಟ್ಟಿಹೆನೆಂದೆನಿಸದಿರೆ ತ್ಯಾಗಿ
ಬಿಟ್ಟಿಹೆನೆಂದೆನಿಸೆ ಅವ ಭೋಗಿ
ತೋರಿಕೆಗಲ್ಲ ವಿರಾಗ ನಿಜಕಾಣ್ಕೆಯು – ರವಿತೇಜ (016)

ಗುರು ದೇವ ತಾಯ್ತಂದೆ ಬಂಧು
ಮಿತ್ರರಿಗಿಂತ ಮಂಡಿಯೂರಿ ನಿನ್ನಾತ್ಮನಲಿ
ಕ್ಷಮೆಯಾಚಿಪ ಧೃತಿಯಿರಲಿ – ರವಿತೇಜ (017)

ಹಣ್ಣಲ್ಲದ ಹಣ್ಣುಹುದು
ಗೆಳತಿಯ ಕದಪಲ್ಲ ಕೆಂಪಹುದು
ಚಿನ್ನವಲ್ಲದ ಚಿನ್ನ ಗೋದೆಯಹುದು – ರವಿತೇಜ (018)

ಆಡದೆಡೆ ಆಡಿದರೆ ಅಪರಾಧ
ಆಡುವೆಡೆ ಆಡದಿರೆ ಮಹಾಪರಾಧ
ಆಡಾಡದ ವಿವೇಕ ನೆತ್ತಿಯಲಿರಲಿ – ರವಿತೇಜ (019)

ನೂರಲ್ಲ ಮೂರಾಡಿರೆ ಸಾಕು
ಅರ್ಥ ಸ್ಫುರಿಸಲು ಸಾಗರವೇಕೆ
ಉದ್ಧರಣಿಯಲೆ ತೀರ್ಥ – ರವಿತೇಜ (020)

***

‘ಅಮೆರಿಕದಲ್ಲಿ ಗೊರೂರು’

ವಿಶೇಷ ಪ್ರವಾಸ ಕಥನ – ಒಂದು ಮರು ಓದು

– ಶ್ರೀಧರ ಬಾಣಾವರ

ಜುಲೈ ನಾಲ್ಕು, ಗೊರೂರು ರಾಮಸ್ವಾಮಿ ಐಯ್ಯಂಗಾರ್ ಅವರ ಜನ್ಮದಿನ. ಅವತ್ತೇ ಅಮೆರಿಕ ಸಂಯುಕ್ತ ಸಂಸ್ಥಾನ ತನ್ನ ಸ್ವಾತಂತ್ರೋತ್ಸವ ಆಚರಿಸಿಕೊಳ್ಳುತ್ತದೆ. ಗೊರೂರು ಹಾಗೂ ಅಮೆರಿಕಾಕ್ಕೆ ಬೆಸುಗೆ ಹಾಕುವ ಕೃತಿ, ‘ಅಮೆರಿಕದಲ್ಲಿ ಗೊರೂರು’.

.

1977ರಲ್ಲಿ ಅಮೆರಿಕದಲ್ಲಿ ವಾಸಿಸುತ್ತಿದ್ದ ತಮ್ಮ ಮಗಳು-ಅಳಿಯ ಇವರ ಆಹ್ವಾನದ ಮೇರೆಗೆ ಗೊರೂರರು ತಮ್ಮ ಪತ್ನಿಯೊಡನೆ ಕೈಗೊಂಡ ಕೆನಡಾ, ಅಮೆರಿಕಾ ಯಾತ್ರೆ ನಮ್ಮ ಕನ್ನಡ ಪ್ರವಾಸ ಸಾಹಿತ್ಯಕ್ಕೆ ಒಂದು ಅಪೂರ್ವ ಕೊಡುಗೆಯಾಯಿತು. ಮರಳಿದ ನಂತರ ಅವರ ಕೈ ನೋವು, ಕಡಿಮೆಯಾಗಿದ್ದ ಕಣ್ಣಿನ ಚುರುಕು ಮುಂತಾದ ಕಾರಣಗಳಿಂದ ಪ್ರವಾಸದ ವಿವರಗಳನ್ನು ಬರಹಕ್ಕಿಳಸಲು ಹಿಂಜರಿಕೆಯಾಗಿದ್ದ ಸಂದರ್ಭದಲ್ಲಿ ಪು.ತಿ.ನ. ಅವರ ಸಲಹೆಯ ಮೇರೆಗೆ ಬೇರೆಯವರ ಸಹಾಯದಿಂದ ಅಪರೂಪದ ಗ್ರಂಥವೊಂದು ಜನ್ಮ ತಾಳಿತು. ಯಾವುದೇ ಟಿಪ್ಪಣಿ, ದಿನಚರಿಗಳ ಆಧಾರವಿಲ್ಲದೇ ಸಂಪೂರ್ಣ ತಮ್ಮ ನೆನಪಿನ ಆಧಾರದಿಂದಲೇ ಈ ಗ್ರಂಥ ರಚನೆ ಮಾಡಿದ್ದಾಗಿ ಗೊರೂರರು ಹೇಳಿಕೊಂಡಿದ್ದಾರೆ. ಈ ಗ್ರಂಥಕ್ಕೆ ಗೊರೂರರಿಗೆ ಆಪ್ತರಾಗಿದ್ದ ಹಾ.ಮಾ.ನಾಯಕರು ಮಹತ್ವಪೂರ್ಣ ಮುನ್ನುಡಿ ಬರೆದಿದ್ದಾರೆ. ಅಮೆರಿಕಾ ಪ್ರವಾಸದ ಬಗ್ಗೆ ನಮ್ಮ ಬಹಳಷ್ಟು ಹಿರಿಯ ಸಾಹಿತಿಗಳು ಕೃತಿಗಳನ್ನು ರಚಿಸಿದ್ದಾರೆ. ಮೂರ್ತಿರಾಯರ ‘ಅಪರ ವಯಸ್ಕನ ಅಮೆರಿಕಾ ಯಾತ್ರೆ’, ಜಿ.ಜಿ.ಎಲ್.ಸ್ವಾಮಿಯವರ ‘ಅಮೆರಿಕದಲ್ಲಿ ನಾನು’, ಕೃಷ್ಣಾನಂದ ಕಾಮತರ ‘ನಾನೂ ಅಮೆರಿಕೆಗೆ ಹೋಗಿದ್ದೆ’, ಶಿವರಾಮ ಕಾರಂತರ ‘ಅಪೂರ್ವ ಪಶ್ಚಿಮ’, ಪ್ರಭುಶಂಕರರ ‘ಅಮೆರಿಕದಲ್ಲಿ ನಾನು, ಶಾಂತಿ’ ಇವೆಲ್ಲವೂ ರೂಪ ಸ್ವರೂಪಗಳಲ್ಲಿ, ರುಚಿ ಅಭಿರುಚಿಗಳಲ್ಲಿ, ಆಯ್ಕೆ ನಿರೂಪಣೆಗಳಲ್ಲಿ ಭಿನ್ನವಾಗಿವೆ. ಗೊರೂರರ ಈ ಕೃತಿ ಬೇರೆಯೇ ಆಯಾಮವನ್ನು ತೆರೆದಿಡುತ್ತದೆ.

ನಾಯಕರು ಹೇಳುವಂತೆ ಗೊರೂರರ ಬರವಣಿಗೆಯಲ್ಲಿ ಯಾವ ಸಂಕೋಚವೂ ಇಲ್ಲ. ಜೊತೆಗೆ ಅಲ್ಲಿಗೆ ಹೊಸಬರಂತೆ ಅವರು ತೋರುವುದೇ ಇಲ್ಲ. ಅಲ್ಲಿಯ ಜನಜೀವನದೊಡನೆ ಅವರು ಸುಲಭವಾಗಿ ಬೆರೆತು ಹೋಗಿದ್ದಾರೆ. ಗಂಡು ಹೆಣ್ಣುಗಳ ಭೇಧವಿಲ್ಲದೇ, ವಯಸ್ಸಿನ ಅಂತರವಿಲ್ಲದೇ, ಹಳ್ಳಿ-ನಗರಗಳ ವ್ಯತ್ಯಾಸವಿಲ್ಲದೇ ಪೂರ್ವ ಪಶ್ಚಿಮಗಳ ಭಿನ್ನತೆ ತೋರದೆ ಪ್ರತಿಯೊಂದು ಸಂದರ್ಭಗಳಲ್ಲಿಯೂ ಕರಗಿ ಹೋಗುತ್ತಾರೆ.

ಅಮೆರಿಕದವರು ಅವರ ದೇಶವನ್ನು ಹೇಗೆ ಮಾಡಿಕೊಂಡಿದ್ದಾರೆ ಎಂಬುದು ಗೊರೂರರ ಕಣ್ಣಿಗೆ, ಬೆಳ್ಳಂಬೆಳಕಾಗಿ ತೋರುತ್ತಿದ್ದು ಪ್ರತಿಯೊಬ್ಬರೂ ವಿದ್ಯೆ, ಉದ್ಯೋಗ, ಟೆಲಿಫೋನು, ಟಿವಿ, ಮನೆ, ಕಾರು, ವೈದ್ಯಕೀಯ ಸೌಲಭ್ಯ ಇವೆಲ್ಲವನ್ನೂ ಅಂಗಡಿಗಳಲ್ಲಿ ಬಾಳೆಯ ಹಣ್ಣು, ಬೋಂಡಾಗಳನ್ನು ಕೊಳ್ಳುವಂತೆ ಕೊಳ್ಳಬಹುದಂತೆ. ಅಂದು ಭಾರತದಲ್ಲಿನ ಪರಿಸ್ಥಿತಿಯನ್ನು ಗಮನದಲ್ಲಿಟ್ಟುಕೊಂಡು ಅವರ ಈ ಹೇಳಿಕೆಯನ್ನು ನಾವು ನೋಡಬೇಕು. ಇಂದಿನ ನಮ್ಮ ಪರಿಸ್ಥಿತಿ ಇದನ್ನೂ ಮೀರಿಸಿದೆ. ಗೊರೂರರು ಮುಂದುವರೆಯುತ್ತಾ, ಅಲ್ಲಿ ಎಲ್ಲರಿಗೂ ಎಲ್ಲಾ ಸೌಲಭ್ಯಗಳೂ ಸಮಾನ. ಇದರಲ್ಲಿ ಹಿಂದುಳಿದವ, ಮುಂದೆ ಬಂದವ ಎಂಬ ತಾರತಮ್ಯವಿಲ್ಲ ಎಂದು ಕಂಡುಕೊಳ್ಳುತ್ತಾರೆ. ಅಂದಿನ ಅಮೆರಿಕನ್ನರ ಸ್ಥಿತಿಗತಿಗಳನ್ನು ಗೊರೂರರು ಮನಃಪೂರ್ವಕವಾಗಿ ಹೊಗಳುತ್ತಾರೆ. ಆದರೆ ನನ್ನ ಅಭಿಪ್ರಾಯದಲ್ಲಿ ಈ 40-50 ವರ್ಷಗಳಲ್ಲಿ ಇವೆಲ್ಲವೂ ಬದಲಾಗಿವೆ ಎನಿಸುತ್ತದೆ.

ಅವರ ವಿನೋದ ಪ್ರಜ್ಞೆಯನ್ನು ಇಡೀ ಕೃತಿಯುದ್ದಕ್ಕೂ ಕಾಣಬಹುದು. ಅವರು ಒಮ್ಮೆ ತಮ್ಮ ಸಸ್ಯಾಹಾರ ಕ್ರಮದ ಆಹಾರ ಲಭ್ಯತೆಯನ್ನು ಖಚಿತಪಡಿಸಿಕೊಳ್ಳಲು **'Have you got anything which is not meat, egg or fish?'** ಎಂದು ಕೇಳಿದಾಗ ಎದುರಿನವರು **'Yes, we have chicken, beacon fork, beef etc'** ಎಂದಾಗ ಆದ ಪೇಚನ್ನು ಹೇಳಿಕೊಳ್ಳುವ ಪರಿ ನಗೆಯನ್ನು ತರಿಸುತ್ತದೆ. .ಮಧ್ಯೆ ಮಧ್ಯೆ ಬಿದ್ದು ಡೊಂಕಾಗಿ ದಿಕ್ಕಾಪಾಲಾಗಿರುವ ತಮ್ಮ ಸ್ವಾಭಾವಿಕವಾದ ಹಲ್ಲನ್ನು ತೋರಿಸಿ ಚ್ಯುಯಿಂಗ್ ಗಮ್ ತಿನ್ನಲಾಗದ ಅಸಹಾಯಕತೆಯನ್ನು ತೋಡಿಕೊಂಡಾಗ ರೂತ್ ಎಂಬಾಕೆ ಹೇಳಿದ್ದು ಹೀಗೆ: 'ನಿಮ್ಮ ಹಲ್ಲನ್ನು ನಿಮ್ಮ ಡೆಂಟಿಸ್ಟ್ ಸರಿಯಾಗಿ ಕಟ್ಟಿಲ್ಲ. ಹಲ್ಲು ನೋಯುವುದಕ್ಕೆ ಚ್ಯೂಯಿಂಗ್ ಗಮ್ ಕಾರಣವಲ್ಲ ನಿಮ್ಮ ಡೆಂಟಿಸ್ಟ್ ಕಟ್ಟಿರುವ ಹಲ್ಲು' ಎಂದ ಪ್ರಸಂಗದ ವಿವರಣೆ ಮರೆಯಲಾಗದು.

ನೆಲಮಾಳಿಗೆಯೊಂದರಲ್ಲಿ ದಿಕ್ಕುತೋರದೆ ನಿಂತಿದ್ದಾಗ ಇವರ ಸಹಾಯಕ್ಕೆ ಬಂದ ಮಹಿಳೆಗೆ ಇವರ ದಿರಿಸಿಗೂ ಅಂದರೆ ದಟ್ಟಿಪಂಚೆ ದೊಗಲೆ ಜುಬ್ಬಾ, ಇವರ ಅಸ್ಖಲಿತ ಇಂಗ್ಲಿಷ್‌ಗೂ ಮ್ಯಾಚ್ ಆಗದೇ ಕಕ್ಕಾಬಿಕ್ಕಿಯಾದ ಪ್ರಸಂಗ, ಅನಿರೀಕ್ಷಿತವಾಗಿ ಪೋಲೀಸನೊಬ್ಬನ ಮನೆಯಲ್ಲಿ ರಾತ್ರಿ ಕಳೆಯುವ ಪ್ರಸಂಗ ಬಂದಾಗ, ಆತ ತನ್ನ ಕ್ವಾರ್ಟರ್ಸ್‌ನ ಅಸೌಕರ್ಯಗಳನ್ನು ವಿವರಿಸಿ, ಮನೆಗೆ ಲಗತ್ತಾಗಿದ್ದ ಸುಸಜ್ಜಿತ ಲಾಕಪ್‌ನಲ್ಲಿ ಮಲಗುವಂತೆ ಕೇಳಿಕೊಂಡಾಗ, ಗೊರೂರರು ಯಾವ ತಪ್ಪು ಮಾಡದಿದ್ದರೂ ಅಮೆರಿಕದ ಆ ಲಾಕಪ್‌ನಲ್ಲಿ ಸುಖವಾಗಿ ರಾತ್ರಿ ಮಲಗಿದ್ದ ಪ್ರಸಂಗ, ಈಜು ಕೊಳವೊಂದರಲ್ಲಿ ಈಜು ಕಲಿಸುವ ಶಿಕ್ಷಕ ಇವರ ಈಜಿನ ಪರಿಣಿತಿಗೆ ಸೋಜಿಗಪಟ್ಟುಕೊಳ್ಳುವುದು, ಇವರು ಕುದುರೆ ಸವಾರಿ ಮಾಡಿದ ಪ್ರಸಂಗ, ಇವೆಲ್ಲವೂ ಗೊರೂರರು ಅಲ್ಲಿನ ಸಾಮಾನ್ಯ ಜನರ ಜೊತೆ ಬೆರೆತು ಅನುಭವಿಸಿದ ಪ್ರಸಂಗಗಳು. ಅವು ನಗೆಯನ್ನೂ ಹುಟ್ಟಿಸುತ್ತವೆ. ಒಮ್ಮೆ ಇವರನ್ನು ನೋಡಿ ಬೊಗಳಿದ ನಾಯಿಗೆ ಇವರು ಗದರಿದಾಗ ಕೋಪಗೊಂಡ ಅದರ ಮಾಲೀಕ ಇವರೊಡನೆ ಜಗಳಕ್ಕೆ ಬಂದ ಸಂದರ್ಭದಲ್ಲಿ ಅವನ ಶ್ವಾನ ಪ್ರೇಮವನ್ನು ಹೊಗಳುತ್ತಾರೆ. ಮರುಕ್ಷಣವೇ ಹಾಲು ಕೊಡುವ ಗೋವನ್ನೇ ಕೊಂದು ತಿನ್ನುವ ಮನುಷ್ಯನ ಶ್ವಾನ ಪ್ರೇಮವನ್ನು ಕುರಿತು ಹಾಸ್ಯಮಾಡುತ್ತಾರೆ. ಪ್ರಕಟವಾಗಿ ಅಲ್ಲ. ಇನ್ನು ಯಾರೆಂದರೆ ಅವರೊಂದಿಗೆ ಬೆರೆಯುವ ಇವರು, ಯು.ಎನ್.ಓ. ಎದುರಿಗೆ ಕಂಡ, ಆಗತಾನೆ ಸ್ವಾತಂತ್ರ್ಯ ಪಡೆದಿದ್ದ ಆಫ್ರಿಕಾದ ಸಣ್ಣ ದೇಶವೊಂದರ ನಾಯಕನೊಡನೆ ಮಾತನಾಡಿ, ಅವನಿಗೆ ಸ್ವಾತಂತ್ರವೆಂದರೆ ಬರೀ ರಾಜಕೀಯ ಸ್ವಾತಂತ್ರ ಪಡೆಯುವುದಲ್ಲ, ಆರ್ಥಿಕ, ಶೈಕ್ಷಣಿಕ, ಸಾಂಸ್ಕೃತಿಕ, ಸ್ವಾತಂತ್ರವನ್ನು ಆ ದೇಶದ ಪ್ರಜೆಗಳೇ ಗಳಿಸಿಕೊಳ್ಳಬೇಕೆಂಬ ಉಪದೇಶ ನೀಡಿ ಅವನ ಮೆಚ್ಚುಗೆಗೆ ಪಾತ್ರರಾಗುತ್ತಾರೆ.

ಇಲ್ಲಿನ ಒಂದು ಸಂದರ್ಭದಲ್ಲಿ ಗೊರೂರರು ಮಾಡುವ ತಮ್ಮ ಹೆಂಡತಿಯ ವರ್ಣನೆ ಹೀಗಿದೆ. ನನ್ನ ಹೆಂಡತಿ ಬಾಗಿಲಿಂದ ಒಳಗೆ ಬರುತ್ತಿದ್ದಳು. ಅವಳ ಇಪ್ಪತ್ತೇಳು ಅಡಿ ಉದ್ದದ ಸೀರೆ, ಅದನ್ನು ಹಿಂದಕ್ಕೂ ಮುಂದಕ್ಕೂ ಕಾಮನ ಕಟ್ಟು ಭೀಮನಕಟ್ಟು ಹಾಕಿ ಬಿಗಿದಿದ್ದ ಕ್ರಮ, ತಲೆಯನ್ನು ಚನ್ನಾಗಿ ಬಾಚಿ ಬೈತಲೆ ತೆಗೆದು ಕಟ್ಟಿದ್ದ ದೊಡ್ಡ ಗಂಟು. ಈಚೆಗೆ ಭಾರತದಲ್ಲಿಯೂ ಕೇಶಾಲಂಕಾರವು ಚಿತ್ರ ವಿಚಿತ್ರವಾಗಿರುತ್ತದೆ. ಕೆಲವರು ತಲೆಯ ಮೇಲೆ ದೊಡ್ಡ ಎಳನೀರು ಬುರುಡೆ, ಹಲಸಿನ ಹಣ್ಣು, ಕುಕ್ಕೆ, ಮೊರ, ಗೋಪುರಗಳನ್ನೆಲ್ಲಾ ಕಟ್ಟಿಕೊಂಡಿರುತ್ತಾರೆ. ಆದರೆ ನನ್ನ ಹೆಂಡತಿ ಹಳೆಯ ಕಾಲದವಳಾದ್ದರಿಂದ ಆ ಗೋಜಿಗೆಲ್ಲಾ ಹೋಗದೆ ಸುಮ್ಮನೆ ಗಂಟು ಬಿಗಿದಿದ್ದಳು. ಹೇಗಿದೆ ಅವರ ವರ್ಣನೆ? ಮುಂದೊಮ್ಮೆ ಎಂಪೈರ್ ಸ್ಟೇಟ್ ಬಿಲ್ಡಿಂಗಿನ ಅತಿ ಎತ್ತರದಲ್ಲಿ ಈ ರೀತಿ ಸೀರೆಯುಟ್ಟ ಹೆಂಡತಿಗೆ ರಭಸವಾಗಿ ಬೀಸುತ್ತಿದ್ದ ಗಾಳಿಯ ಹೊಡೆತಕ್ಕೆ ಯಾವುದೇ ತೊಂದರೆಯಾಗದೆ ಜೊತೆಗಿದ್ದ ಸಾಧಾರಣ ಸೀರೆ ಉಟ್ಟ ಮಹಿಳೆಯರು

ಪಟ್ಟ ಪಡಿಪಾಟಲನ್ನು ಸ್ವಾರಸ್ಯಮಯವಾಗಿ ವರ್ಣಿಸುತ್ತಾರೆ. ಇಂತಹ ನೂರಾರು ಪ್ರಸಂಗಗಳು ಪುಟಪುಟದಲ್ಲೂ ನಮ್ಮನ್ನು ರಂಜಿಸುತ್ತವೆ.

ಅವರು ತಮ್ಮ ಪ್ರವಾಸ ಕಾಲದಲ್ಲಿ ಕೆಲವು ಕಡೆ ಆಹ್ವಾನಿತರಾಗಿ, ಕೆಲವು ಕಡೆ ಸ್ವಯಂ ಪ್ರೇರಣೆಯಿಂದ ದೂರದೂರದ ಸ್ಥಳಗಳಿಗೆ ಭೇಟಿಕೊಟ್ಟು ಭಾರತ, ಗಾಂಧಿ, ಖಾದಿ ಇವುಗಳ ಬಗ್ಗೆ ಉಪನ್ಯಾಸ ನೀಡುತ್ತಾರೆ. ಅಲ್ಲಿಯವರಿಂದ ಕಲಿಯುತ್ತಾರೆ. ನಮ್ಮ ದೇಶದ ಬಗ್ಗೆ ಆ ದೇಶದ ಜನರಲ್ಲಿ ಇರುವ ಗೊಂದಲಗಳನ್ನು ಪರಿಹರಿಸುತ್ತಾರೆ. ಅಲ್ಲಿನ ಕನ್ನಡ ಸಂಘದ ವಿಶೇಷಾಂಕದಲ್ಲಿ ಕಂಡ ಅನಿವಾಸಿ ಕನ್ನಡಿಗರ ಕೆಲವು ಬರಹಗಳನ್ನು ಹೃತ್ಪೂರ್ವಕವಾಗಿ ಶ್ಲಾಘಿಸುತ್ತಾರೆ. ಅಲ್ಲಿ ಕಂಡ ಕೆಲವು ಅಮೆರಿಕನ್ನಡ ಗಾದೆಗಳನ್ನು ಕೃತಿಯಲ್ಲಿ ನಮಗಾಗಿ ಕೊಟ್ಟಿದ್ದಾರೆ. ಅಲ್ಲಿನ ಕನ್ನಡಿಗರು ರಚಿಸಿದ ಗಾದೆಗಳಲ್ಲಿ ಕೆಲವು:

- ಅಮೆರಿಕನ್ನೇ ಅನ್‌ಎಂಪ್ಲಾಯ್ಡ್ ಆದಾಗ ಇಮಿಗ್ರೆಂಟು ಇನ್‌ಕ್ರಿಮೆಂಟು ಬೇಡಿದನಂತೆ.
- ಭಾರತಕ್ಕೆ ಮಾರಿ, ಅಮೆರಿಕಕ್ಕೆ ಉಪಕಾರಿ
- ಸ್ಕಾಚ್ ಕುಡಿಯುವವನಿಗೆ ಸಂಧ್ಯಾವಂದನೆ ಬೇರೆ
- ಷಿಕಾಗೋದಲ್ಲಿ ಕೆಲಸ ಹೋದರೆ ನ್ಯೂಯಾರ್ಕಿನಲ್ಲಿ ಹೊಸ ಆಳು
- ಕೈಗೆ ಸಿಕ್ಕ ಜಾಬೇ ಕೈಲಾಸ
- ಅಮೆರಿಕಕ್ಕೆ ಬಂದು ಅನ್ನಕ್ಕೆ ಅತ್ತರಂತೆ.

ಹೀಗೆ ಬೇರೆಯವರ ಪ್ರತಿಭೆಯನ್ನು ಮುಕ್ತವಾಗಿ ಹೊಗಳುವ ಗುಣ ಗೊರೂರರದು.

ಈ ಕೃತಿಯನ್ನು ಆಧರಿಸಿ ರೂಪಾಯಣ ಎಂಬ ಸಂಸ್ಥೆ ನಾಗಾಭರಣ ಅವರ ನಿರ್ದೇಶನದಲ್ಲಿ ಹಲವು ವರ್ಷಗಳ ಹಿಂದೆ ಒಂದು ಟೆಲಿ ಸೀರಿಯಲ್ ನಿರ್ಮಿಸಿತ್ತು. ಸಿ.ಆರ್.ಸಿಂಹ ಅವರು ಗೊರೂರರ ಪಾತ್ರದಲ್ಲಿ, ಅರುಂಧತಿ ನಾಗ್ ಅವರ ಹೆಂಡತಿಯಾಗಿ ನಟಿಸಿದ್ದ ಈ ದಾರಾವಾಹಿಯ ಬಹು ಭಾಗ ಅಮೆರಿಕದಲ್ಲಿ ಚಿತ್ರೀಕರಣಗೊಂಡಿತ್ತು. ಇಂದಿನ ಪ್ರಖ್ಯಾತ ಹಿರಿ ಕಿರಿತೆರೆಯ ಅನೇಕರು ಇದರಲ್ಲಿ ಪಾತ್ರವಹಿಸಿದ್ದಾರೆ. ಇದರ ಮೂರ್ನಾಲ್ಕು ಎಪಿಸೋಡುಗಳು ಮಾತ್ರ ಈಗ ಯೂಟ್ಯೂಬ್‌ನಲ್ಲಿ ಲಭ್ಯವಿದೆ.

'ಅಮೆರಿಕದಲ್ಲಿ ಗೊರೂರು' ಕೃತಿ ಅನೇಕ ಮರುಮುದ್ರಣಗಳನ್ನು ಕಂಡು ಈಗಲೂ ಮಾರುಕಟ್ಟೆಯಲ್ಲಿ ಲಭ್ಯವಿದೆ. ಕನ್ನಡಿಗರೆಲ್ಲರೂ ಓದಲೇ ಬೇಕಾದ ಕೃತಿ

***

ಸುರಲೋಕ

– ಸಿ.ಆರ್. ಕಮಲಾಕ್ಷಿ

ಎನಿತು ನಮಿಸಲಿ ದೇವ
ಇನಿತು ಎನಗುಪಕರಿಸುತಿಹೆ
ಅವಿತು ಜಗದ ಕಣಕಣದಿ
ಅಮಿತ ಮಹಿಮೆ ತೋರುತಿಹೆ

ಇರಲು ಕೋಟಿ ಜೀವಿಗಳಲಿ
ನರ ಜನುಮವನು ಕರುಣಿಸಿಹೆ
ಅರಿವ ಬುದ್ಧಿಯ ಎನಗಿರಿಸಿ
ಸರಿ ದಾರಿಯಲೆನ್ನ ನಡೆಸುತಿಹೆ

ಜನುಮದಾ ಪುಣ್ಯಫಲ ಮಾತಾಪಿತರ
ಬೆಳೆವಾಗ ಗುರಿ ತೋರೋ ಗುರುವ
ಒಳಿತು ಕೆಡುಕಿಗೆ ಒದಗುವ ಗೆಳೆಯರ
ಎನಗಿತ್ತು ಮಹದುಪಕಾರಿಸಿದೆ ದೇವ

ರಕ್ಕೆ ಇರದೆ ಗಾಳಿಯಲಿ ಹಾರುವ
ಉಕ್ಕುವ ಶರಧಿಯಲಿ ಪಯಣಿಸುವ
ದಿಕ್ಕು ದಿಕ್ಕಿನಲಿ ಅಳುಕದೆ ನಡೆಯುವ
ಹಕ್ಕೆನಿಸುವ ಶಕ್ತಿಯುಕ್ತಿ ಅನುಗ್ರಹಿಸಿದೆ

ಇರಲೆನಗೆ ಪ್ರತಿ ಜನುಮ ನರನಾಗಿ
ಬರಲೆನಗೆ ಕೋಟಿ ಕೋಟಲೆಗಳೆರಗಿ
ಕರೆದಾಗ ಓಗೊಡುತ ನೀ ಎನ್ನ ರಕ್ಷಿಸಲು
ಸುರಲೋಕ ಈ ಬುವಿಯೆ ಸಾಕೆನಗೆ ಧನ್ಯ ನಾ

***

ಸಮನ್ವಯ ಸಮಿತಿ ಕನ್ನಡವೇ ಸತ್ಯ
ನೋಡಿಯೋ ಸಾಹಿತ್ಯ ದಾಸೋಹ ವೇದಿಕೆ

ಸಾಹಿತ್ಯ ದಾಸೋಹ 215 – 22.07.2023

ಅಧ್ಯಕ್ಷರ ಅನಿಸಿಕೆಗಳು

– ಸಿ.ಆರ್. ಕಮಲಾಕ್ಷಿ

ಎಲ್ಲರಿಗೂ ನಮಸ್ಕಾರ, ಇಂದಿನ ಸಾಹಿತ್ಯ ದಾಸೋಹದಲ್ಲಿ ಕವನಗಳು, ಕಥೆ, ಪುಸ್ತಕ ಪರಿಚಯ, ಸಾಹಿತಿಗಳ ಪರಿಚಯ, ಹಾಸ್ಯ ಹಾಗೂ ಅನುಭವ ಹೀಗೆ ವೈವಿಧ್ಯಮಯ ಬರಹಗಳನ್ನು ಪ್ರಸ್ತುತ ಪಡಿಸಲಾಗಿತ್ತು. ಎಲ್ಲಾ ಪ್ರಸ್ತುತಿಗಳನ್ನೂ ಒಬ್ಬರ ನಂತರ ಮತ್ತೊಬ್ಬರಂತೆ ನಿರರ್ಗಳವಾಗಿ ಮಂಡಿಸಿದರು. ಕಾರ್ಯಕ್ರಮದ ಪಟ್ಟಿಯಂತೆ ಎಲ್ಲವೂ ಶಿಸ್ತಿನಿಂದ, ಸೊಗಸಾಗಿ ನಡೆದವು. ಪ್ರತಿಯೋರ್ವರ ಬರಹವನ್ನು ವಿಮರ್ಶೆಯಿಂದ ಒರೆಹಚ್ಚದೆ, ಚಿಕ್ಕದಾಗಿ ನನ್ನ ಅಭಿಪ್ರಾಯವನ್ನು ಹೀಗೆ ಹಂಚಿಕೊಂಡಿದ್ದೇನೆ.

1. ಸುಜಾತ ರವೀಶ್ – 'ಗಝುಲ್'

ಮೋಹನನ ಮುರಳಿ ಗಾನವನ್ನು ಆಸ್ವಾಧಿಸುತ್ತ ಅವನನ್ನೇ ಆರಾಧಿಸುತ್ತಿದ್ದ ರಾಧೆಯ ಪ್ರೇಮ ಅನನ್ಯ. ಮನಮೋಹನನ ಧ್ಯಾನದಲ್ಲಿ ಅವನ ಆಗಮನಕೆ ನಿವೇದಿಸುತ್ತ, ಮನದ ತಲ್ಲಣಗಳನ್ನು ಹಲವು ಉಪಮೆಗಳಿಂದ ಗಝುಲನ್ನು ಸುಂದರವಾಗಿ ಅಲಂಕರಿಸಿದ್ದಾರೆ. ಗಝುಲ್ ಪ್ರಸ್ತುತಿ ಕೂಡ ಸೊಗಸಾಗಿತ್ತು.

2. ಗಣಪತಿ ಹೆಗಡೆ – 'ಕಾವ್ಯ ಪ್ರಯೋಜನಗಳು'

ಕಾರಣವಿಲ್ಲದೆ ಹುಲ್ಲು ಕಡ್ಡಿಯೂ ಅಲುಗಾಡದು ಎನ್ನುವಂತೆ, ಪ್ರತಿಯೊಂದು ಕಾರ್ಯದ ಹಿಂದೆ ನಿರ್ದಿಷ್ಟ ಉದ್ದೇಶವಿರುತ್ತದೆ. ಕಾವ್ಯ ಯಾರಿಗೆ ತಾನೆ ಇಷ್ಟವಾಗದು? ಕಾವ್ಯವು ,ಸಂತೋಷ, ಯಶಸ್ಸು ಹಾಗೂ ಕಾಂತಾ ಸಮ್ಮಿತ ಇಂತಹ ಪ್ರಯೋಜನಗಳನ್ನು ಶ್ರೀ ಗಣಪತಿ ಹೆಗಡೆಯವರು ಬರಹದಲ್ಲಿ ನಿರೂಪಿಸಿದ್ದಾರೆ. ಮುಂದುವರೆದು, ಪ್ರಸ್ತುತ ಕಾಲಮಾನದಲ್ಲಿ ಕಾವ್ಯ ರಚನಕಾರರಿಗೆ ಕಾವ್ಯದಿಂದ ಯಶಸ್ಸು, ಧನ ಸಂಗ್ರಹಣೆ ಹಾಗೂ ಕೀರ್ತಿ ಸಿಗುವುದು. ಕಾವ್ಯ ರಚನೆಕಾರರಿಗೆ ಮಾತ್ರವಲ್ಲದೆ ಓದುಗರಿಗೂ, ಕೇಳುಗರಿಗೂ ಸಂತೋಷ, ಪುಣ್ಯಗಳ ಸತ್ಫಲ ಲಭಿಸುತ್ತದೆ ಎಂಬುದು ವೇದ ಉಪನಿಷತ್ತಿನಿಂದ ಗದುಗಿನ ನಾರಾಪ್ಪನವರೆಗೆ ಒಪ್ಪಿಕೊಂಡಿರುವ ಸತ್ಯ. ಮುಂದುವರೆಸುವುದಾದರೆ ಕಾವ್ಯಗಳು ಜ್ಞಾನವಾಹಕಗಳೂ ಹೌದು. ಕಾವ್ಯದ ಪ್ರಯೋಜನಗಳನ್ನು ಸೊಗಸಾಗಿ ಕಟ್ಟಿಕೊಟ್ಟಿದ್ದೀರಿ ಸರ್. ಅಷ್ಟೇ ಸೊಗಸಾದ ಪ್ರಸ್ತುತಿ ಸರ್.

3. ಎಲ್ ಗಿರಿಜಾರಾಜ್ – 'ಅವನಿವನಾದರೆ ಇವನವನೇನಾ'

ಶೀರ್ಷಿಕೆಯಿಂದಲೇ ಸೆಳೆವ ಬರಹವಿದು. ಪರೀಕ್ಷಾ ಸಮಯದಲ್ಲಿ ಕೊಠಡಿ ಮೇಲ್ವಿಚಾರಕರ ಕಾರ್ಯ ನಿರ್ವಹಿಸುವಾಗಿನ ಅನುಭವ. ಅದರಲ್ಲೂ ಪೂರಕ ಪರೀಕ್ಷೆ ಎದುರಿಸುವ ಅಭ್ಯರ್ಥಿಗಳ ಕೊಠಡಿ ಎಂದರೆ ಅವ್ಯಕ್ತ ಭಯ. ನೀವು ಪ್ರಸ್ತುತಪಡಿಸುವ ಪರಿ, ಉಪನ್ಯಾಸಕಿಯಾದ ನನಗೆ ಸ್ವಯಂ ಪರೀಕ್ಷಾ ಕೊಠಡಿಯಲ್ಲಿ ನಡೆದಾಡಿದಂತಾಯಿತು. ವಿದ್ಯಾರ್ಥಿಗಳನ್ನು ಗುರುತಿಸಲು ನೀವು ತೆಗೆದುಕೊಂಡ ಕ್ರಮಗಳು ನಗೆ ಉಕ್ಕಿಸಿದವು. ಭೌತಶಾಸ್ತ್ರ ಭೂತ ಶಾಸ್ತ್ರವಾಯಿತಲ್ಲ! ಸಧ್ಯ ಅಂದು ರಾಸಾಯನ ಶ್ರಾಸ್ತ್ರ ಆಗಿರಲಿಲ್ಲವಲ್ಲ ಎನಿಸಿ ಸಮಾಧಾನ ವಾಯಿತು. ನಗು ಉಕ್ಕಿಸುವಲ್ಲಿ ಯಶಸ್ವಿಯಾದ ಹಾಸ್ಯ ಬರಹದ ಪ್ರಸ್ತುತಿ.

4. ರೇಣುಕಾ ದೇಸಾಯಿ – 'ಗುರು ನಮನ'

'ಗುರು ಪೌರ್ಣಮಿ' ದಿನದ ಮಹತ್ವ ಹಾಗೂ ಔಚಿತ್ಯವನ್ನು ಸಾರುವ ಬರಹ. ಹರ ಮುನಿದರೂ ಗುರು ಮುನಿಯಬಾರದು ಎನ್ನುವ ನುಡಿಯಂತೆ, ಗುರುವಿನ ಸ್ಥಾನ ಹಿರಿದು. ವ್ಯಾಸ ಮಹರ್ಷಿ, ಭಗವಾನ್ ಬುದ್ಧ, ಶ್ರೀ ಶಂಕರಾಚಾರ್ಯರು ಇವರೆಲ್ಲರೂ ಸಮಾಜದ ಕಣ್ಣು ತೆರೆಸಿ, ಬದುಕಿನ ಮೌಲ್ಯವನ್ನು ಅರಿಯುವಂತೆ ಮಾಡಿರುವ ಮಹಾ ಗುರುಗಳು. ಗುರು ಪೌರ್ಣಮಿಯ ಹಿನ್ನೆಲೆಯಲ್ಲಿ ಅರ್ಥಪೂರ್ಣವಾದ ಬರಹವನ್ನು ಪ್ರಸ್ತುತಪಡಿಸಿದ್ದೀರಿ.

5. ಹು.ವಾ.ಶ್ರೀಪ್ರಕಾಶ್ – 'ಪರಿಹಾರ'

ಹೊಸದಾಗಿ ಬಾಡಿಗೆಗೆ ಬಂದವರ ಮೇಲೆ ನೆರೆಹೊರೆಯವರ ದೂರುಗಳು ಮತ್ತು ಅದಕ್ಕೆ ಪರಿಹಾರ ಸಿಕ್ಕಿದ್ದು ಜ್ಯೋತಿಷಿಯಿಂದ. ನಾಯಿಯ ತ್ಯಾಜ್ಯ, ಹೂ ಕಿಳೋದು\, ಕಾರು ನಿಲ್ಲಿಸೋದು, ಸಾಲದು ಅಂತ ತಮ್ಮ, ಮಕ್ಕಳು ಎಲ್ಲವೂ ಬೀದಿಯವರಿಗೆ ಸಮಸ್ಯೆಯೇ. ಇವರ ದೂರುಗಳ ಅರಿವಿದ್ದ ಜ್ಯೋತಿಷಿ ಈ ಪರಿಹಾರ ಸೂಚಿಸಿದ್ದನೇನೋ ಎನ್ನುವ ಅನುಮಾನ ಕಾಡಿತು. ಚೆಂದದ ನಿರೂಪಣೆ ಹಾಗೂ ಪ್ರಸ್ತುತಿ ಸರ್

6. ಶಾಂತಿ ವಾಸು – 'ಮೌನ ಸನ್ಮಾನ' (ಕವನ)

ಹಲವು ಸನ್ನಿವೇಶಗಳಿಗೆ, ಸಮಸ್ಯೆಗಳಿಗೆ ಮೌನವೇ ಉತ್ತರ. ಕವನದ ಶೀರ್ಷಿಕೆಗೆ ನ್ಯಾಯ ಸಲ್ಲಿಸುವಂತೆ ಮೌನವು ಹಲವು ಮಜಲುಗಳಲ್ಲಿ ಸನ್ಮಾನಿತವಾಗುತ್ತದೆ ಎಂಬುದನ್ನು ಸೊಗಸಾಗಿ ಬಿಂಬಿಸಲಾಗಿದೆ. 'ಅಂತರಂಗದಲ್ಲಿ ಒಳನೋಟದಿ, ಅನಾವರಣಗೊಳುವ ದೈವತ್ವ ತತ್ವಮೌನ' ಎಂಬ ಈ ಎರಡು ಸಾಲುಗಳಲ್ಲಿ ಕವನದ ಸತ್ವ ಅಡಗಿದೆ ಎನಿಸಿತು. ಓದಿದ ಬಳಿಕ ಮೌನಕ್ಕೆ ಶರಣಾಗುವಂತೆ ಮಾಡುವ ಸೊಗಸಾದ ಕವನವಿದು.

7. ಮಹಾಬಲ– 'ಮರೆಯಬಾರದ ಹೊಸಗನ್ನಡದ ಕವಿಗಳು: ಬೆಟಗೇರಿ ಕೃಷ್ಣಶರ್ಮ(ಆನಂದ ಕಂದ)'

ಮರೆಯಬಾರದ ಹೊಸಗನ್ನಡದ ಕವಿಗಳು ಮಾಲಿಕೆಯಲ್ಲಿ ಬೆಟಗೇರಿ ಕೃಷ್ಣಶರ್ಮ (ಆನಂದ ಕಂದ) ರನ್ನು ಸವಿಸ್ತಾರವಾಗಿ, ಅರ್ಥಪೂರ್ಣವಾಗಿ ಪರಿಚಯಿಸಿದ್ದೀರಿ ಸರ್. ಆನಂದ ಕಂದರ ಜನನ, ಶಿಕ್ಷಣ, ನಿರ್ವಹಿಸಿದ ಹಲವು ಕೆಲಸಗಳು, ಅವರ ಕೃತಿಗಳು, ಕನ್ನಡ ಭಾಷೆ ಹಾಗೂ ಸಂಸ್ಕೃತಿಯ ಪುನರುತ್ಥಾನದ ಮೇಲೆ ಪರಿಚಯ ಚೆಲ್ಲಲಾಗಿದೆ. ಮೇರು ಕೃತಿಗಳನ್ನು ಸಾಹಿತ್ಯ ಲೋಕಕ್ಕೆ ಸಮರ್ಪಿಸಿರುವ ಬೆಟಗೇರಿ ಕೃಷ್ಣಶರ್ಮರ ಬರಹಗಳನ್ನು ಓದುವ ಪ್ರಯತ್ನ ನಮ್ಮದಾಗಬೇಕು. ಪ್ರಸ್ತುತಿಯೂ ಸೊಗಸಾಗಿತ್ತು. ಶ್ರೇಷ್ಠ ಸಾಹಿತಿಗಳನ್ನು ಪರಿಚಯಿಸುವ ಇಂತಹ ಪ್ರಸ್ತುತಿಗಳು ಇನ್ನಷ್ಟು ಬೇಕು.

8. ಜಿ ವಿ ನಿರ್ಮಲ – 'ಸುಸ್ತುಶಾಸ್ತ್ರ'

ವಾಸ್ತುಶಾಸ್ತ್ರದ ಭರಾಟೆಯಿಂದ ಬಸವಳಿದವರಿಗೆ ಸುಸ್ತುಶಾಸ್ತ್ರವನ್ನು ಅಳವಡಿಸಿಕೊಂಡರೆ ಜೇಬಿಗೂ ಸೌಖ್ಯ, ದೇಹಕೂ ಸೌಖ್ಯ. ವಾಸ್ತುಶಿಲ್ಪಕ್ಕಿಂತ ಸುಸ್ತುಶಾಸ್ತ್ರವೇ ಉತ್ತಮ ಎಂಬುದನ್ನು ವೈಜ್ಞಾನಿಕವಾಗಿ, ಲಘುಹಾಸ್ಯ ಉಣಬಡಿಸುತ್ತ ಸಾಗುವ ಸುಸ್ತುಶಾಸ್ತ್ರ ಸೊಗಸಾಗಿತ್ತು. ಯಾವುದಕ್ಕೂ ನಿಮ್ಮ ಅನ್ವೇಷಣೆಯ ಸುಸ್ತುಶಾಸ್ತ್ರಕ್ಕೆ ಪೇಟೆಂಟ್ ಪಡೆದಿಟ್ಟುಕೊಳ್ಳಿ. ಬಹಳಷ್ಟು ಕರೆಗಳು ನಿಮಗೆ ಬರಲಿವೆ ನಿರ್ಮಲಾ ಮೇಡಂ.

9. ಶೀಲಾ ಅರಕಲಗೂಡು – 'ಆಹಾ ಅಹೋಬಿಲಂ'

ಪ್ರವಾಸ ಕಿರುಬರಹ. ನವನರಸಿಂಹನ ಸ್ವಯಂಭು ಸ್ವರೂಪಗಳಿರುವ ಕರ್ನೂಲಿನ ಅಹೋಬಿಲಂ ಬಗೆಗಿನ ಬರಹ. ಹಿರಣ್ಯಕಶಿಪು ವಧೆಯಾದ ಸ್ಥಳ ಎಂಬುದು ಅನಿರ್ವಚನೀಯ ಅನುಭೂತಿ ನೀಡುತ್ತದೆ. ಒಂದೂವರೆ ದಿನದ

ಪ್ರವಾಸದಲ್ಲಿ ನವನರಸಿಂಹರ ದರ್ಶನ ಮಾಡಿ ಬರಹದ ಮೂಲಕ ಅಲ್ಲಿಯ ವೈಶಿಷ್ಟ್ಯಗಳನ್ನು ವಿವರಸಿದ್ದೀರಿ. ಓದುಗರು, ಕೇಳುಗರು ಅಹೋಬಿಲಂನತ್ತ ಪ್ರವಾಸ ಮಾಡಲೇಬೇಕು ಎನಿಸುವಂತೆ ಸೊಗಸಾಗಿ ಪ್ರಸ್ತುತಪಡಿಸಿದ್ದೀರಿ. ನಮ್ಮನ್ನು ಅಹೋಬಿಲಂ ಬಾರಲಾ.. ಬಾರಲಾ.. ಎಂದು ನೀವು ಧ್ವನಿಯಲ್ಲಿ ನಮ್ಮನ್ನು ಕರೆದೊಯ್ದಂತೆ ಕಿವಿಗಳಲ್ಲಿ ಬಹು ಸಮಯ ಗುಯ್ಗುಡುತ್ತದೆ.

10. ಅನ್ನಪೂರ್ಣ ಸುಬ್ಬರಾವ್ – 'ಇದನ್ನೂ ಆಚೆ ಹಾಕು'

ನಿವೃತ್ತಿಯ ನಂತರ ಪತಿ ಪತ್ನಿಯರ ನಡುವೆ ಸನ್ನಿವೇಶಗಳ ಬರಹ. ನಿವೃತ್ತಿಯವರೆಗೆ ದಿನದ ಬಹು ಸಮಯ ಹೊರಗೇ ಕಳೆಯುವ ಪುರುಷರು, ನಿವೃತ್ತಿಯ ಬಳಿಕ ಮನೆಯಲ್ಲಿ ಕಾಲ ಕಳೆಯುವುದು ದುಸ್ತರವೆನಿಸುವುದು ಸಾಮಾನ್ಯ. ಮನೆ ಮನೆ ಕಥೆಯನ್ನು ತಮ್ಮ ಮನೆಯ ಹಾಗೂ ಗೆಳತಿಯ ಮನೆಯಲ್ಲಿ ನಡೆದ ಸಂಭಾಷಣೆಯ ಮೂಲಕ ಸೊಗಸಾಗಿ ಕಟ್ಟಿಕೊಟ್ಟಿದ್ದಾರೆ ಅನ್ನಪೂರ್ಣ ಸುಬ್ಬರಾವ್ ಅವರು.

11. ಶಾಂತಾ ನಾಗಮಂಗಲ – 'ಗೆಸ್ಟ್ ರೂಮ್'

ಹೆತ್ತವರಿಂದ ದೂರವಾಗಿ ಬದುಕು ಕಟ್ಟಿಕೊಳ್ಳುವ ಮಕ್ಕಳ ನಡೆ ಕಥೆಯಲ್ಲಿ ಸೊಗಸಾಗಿ ಬಿಂಬಿತವಾಗಿದೆ. ತಾಯಿ ತಂದೆ ತಮ್ಮ ಕುಟುಂಬದವರೆಂದು ಪರಿಗಣಿಸದೆ ಇರುವುದು ಈಗೀಗ ಕೇಳಬರುತ್ತಲೇ ಇವೆ. ಇಲ್ಲಿ, ಮೊಮ್ಮಗಳು ಅಜ್ಜಿಗಾಗಿ ಅಪ್ಪ ಕಟ್ಟಿಸಿದ ಗೆಸ್ಟ್ ರೂಂ ತೋರಿಸಿದಾಗ, ತಾಯಿ ಅರ್ಥೈಸಿಕೊಳ್ಳುವ ಪರಿ ಅನಿವಾರ್ಯವಾಗಿ ಸ್ಥಿತಪ್ರಜ್ಞತೆಯನ್ನು ತಂದುಕೊಳ್ಳುವ ಹತಾಶ ಭಾವ ಮೂಡಿಸುತ್ತದೆ. ಕಥೆ, ನಿರೂಪಣೆ ಹಾಗೂ ಪ್ರಸ್ತುತಿ ಶಾಂತಾ ನಾಗಮಂಗಲ ಅವರದ್ದು.

12. ಮಾಧುರಿ ಕೃಷ್ಣ – 'ಆ ಸೊಗಸಿನ ಬಂಗಾರದ ದಿನಗಳು'

ಹಿಂದಿನ ಮಾಲಿಕೆಯಂತೆ ಈ ಬಾರಿಯೂ ಕಾಲೇಜಿನ ಸವಿನೆನಪುಗಳನ್ನು ಮೆಲುಕು ಹಾಕುವ ಬರಹ. ಬಣ್ಣ ಹಾಕಿಕೊಂಡು, ದಂಡ ಹಿಡಿದು ವೇದಿಕೆಯಲ್ಲಿ ಅತ್ತಿಂದಿತ್ತ ನಡೆದಾಡಿ ಕಾರ್ಯಕ್ರಮ ನಡೆವಂತೆ ಮಾಡಿದವರಾರು ಎಂಬುದನ್ನು ಕುತೂಹಲ ಕಾಯ್ದುಕೊಳ್ಳುವಂತೆ ಬರೆದಿರುವಿರಿ. ಅಲ್ಲಲ್ಲಿ ಸಣ್ಣ ನಗು ಮೂಡಿಸುವ ಪ್ರಸಂಗಗಳು, ಕೇಸರಿಬಾತಿನಲ್ಲಿ ದ್ರಾಕ್ಷಿ ಗೋಡಂಬಿ ಸಿಕ್ಕಂತಹ ಆಸ್ವಾದ ನೀಡುತ್ತವೆ. ನನ್ನನ್ನೂ ಸೇರಿ ಕೇಳುಗರೆಲ್ಲರಿಗೂ ತಮ್ಮ ಕಾಲೇಜು ದಿನಗಳನ್ನು ನೆನಪು ಮಾಡುವ ಬರಹ.. ಮಿತ್ರನ ಮಕ್ಕಳೊಡನೆ ನಾವೂ ಕೇಳುಗರಾಗಿ ಕುಳಿತಂತೆ ಭಾಸವಾಯಿತು.

13. ಪೋಲೇನಹಳ್ಳಿ ರಮೇಶ್ (ಪೋರ) – 'ಬಾಲ್ಯದ ಆ ಗೆಳತಿ' (ಕವನ)

ಬಾಲ್ಯದ ಸವಿ ನೆನಪುಗಳನ್ನು ಮೀಟಿದಾಗ ಹೊರಹೊಮ್ಮುವ ಮಧುರ ಕವನ. ಕವನದಲ್ಲಿ ಬಾಲ್ಯದ ಗೆಳತಿಯನ್ನು ನಡೆದಾಟುವ ವೀಣೆಗೆ ಹೋಲಿಸಿದ್ದು ವಿಶೇಷವೆನಿಸಿತು. ಗೆಳತಿಗೆ ವಿವಾಹವಾದಾಗ ಮನದ ತಲ್ಲಣಗಳಿಗೆ ನೀಡಿರುವ ಉಪಮೆಗಳು ಸತ್ವಯುತವಾಗಿವೆ. ಸುಕ್ಕು ಬಂದಾಗ ಸಿಕ್ಕ ಗೆಳತಿ, ಸೌಖ್ಯವೇ ಎಂದು ಕೇಳಿದಾಗ ಬದುಕು ಪೂರ್ಣವಾಯಿತು ಎಂದಿರುವುದು ಸ್ವಾರ್ಥದಿಂದಲ್ಲ, ಸ್ನೇಹದಿಂದ ಎಂಬ ಸಮರ್ಥನೆ. ಆದರೆ ಉಳಿದ ಅರ್ಧ ಹಾಡನು ನಾನು ಮೆಲ್ಲನೆ ಹಾಡುವೆ,.. ಎನ್ನುವ ಸಾಲುಗಳು ಸುಪ್ತ ಪ್ರೇಮವನ್ನು ಅನಾವರಣಗೊಂಡಿದೆ ಎನಿಸಿತು. ನವಿರಾದ ಪ್ರೇಮ ಕವನ ಎನ್ನುವುದೋ, ವಿಷಾದ ಕವನ ಎನ್ನುವುದೋ ಪೋರರೇ ಹೇಳಬೇಕು. ಚೆಂದದ ಕವನ.

14. ಟಿ.ಎಸ್. ಶ್ರವಣ ಕುಮಾರಿ – 'ತತಃ ಕಿಂ'

ರುಮ್ಯಾಟಿಕ್ arthritis ನಿಂದ ICU ನಲ್ಲಿದ್ದಾಗ, ತಮ್ಮನ್ನು ಸಂದರ್ಶಿಸುವವರ ಚಲನವಲನಗಳನ್ನು ಅದೆಷ್ಟು ಸೂಕ್ಷ್ಮವಾಗಿ ಗಮನಿಸಿದ್ದೀರಿ. ವೈಜ್ಞಾನಿಕ ಉಪಕರಣಗಳಗೂ ಸೂಕ್ತ ಉಪಮೆಗಳನ್ನು ಕೊಟ್ಟು ನಗು ಅರಳಿಸಿರುವಿರಿ. ಯಾವ ಆಹಾರ ಕೊಡಬೇಕೆಂದು . ಆಹಾರತಜ್ಞೆಗೆ ತಿಳಿಯದೆ ಅಡ್ಜಸ್ಟ್ ಮಾಡಿಕೊಳ್ಳಿ ಎಂದಾಗ ಇವರನ್ನು ತಜ್ಞರು ಎಂದೇಕೆ ಕರೆಯಬೇಕು ಎನಿಸುತ್ತದೆ. ಐಸಿಯುನ ಪ್ರತಿಯೊಂದು ದೃಶ್ಯವೂ ಕಣ್ಮುಂದೆ ಹಾದುಹೋಗುವಂತಹ ಬರಹ. ನಿಮ್ಮ ಪ್ರಸ್ತುತಿಯೂ ಅಮೋಘವಾಗಿತ್ತು ಮೇಡಂ.

15. ರಾಧಿಕಾ ಗುಜ್ಜಾರ್ – 'ಕನಸುಗಳರದ ಮಿಂಚಿನ ಸೀರೆಯಾಕೆ' (ಕವನ)

ತನ್ನವನಿಂದ ಧಿಕ್ಕರಿಸಲ್ಪಟ್ಟ ಹೆಣ್ಣು, ಸಮಾಜದಲ್ಲಿ ತನಗೆ ಸಹಾಯ, ಸಹಕಾರ ಸಿಗದೆ ಅನಾದರಕ್ಕೆ ಒಳಗಾಗಿ ಬೆಲೆವೆಣ್ಣಾಗಿ ಪರಿವರ್ತಿತವಾಗುತ್ತಾಳೆ. ರಕ್ಷಣೆ ಕೊಡಬೇಕಾದವರಿಂದ ಶೋಷಿತರಾಗಿ ಹಪಹಪಿಸುವ ಸ್ಥಿತಿಯನ್ನು ತಮ್ಮ ಕವನದಲ್ಲಿ ಚೆನ್ನಾಗಿ ಕಟ್ಟಿಕೊಟ್ಟಿದ್ದಾರೆ ರಾಧಿಕಾ ಗುಜ್ಜಾರ್ ಅವರು. 'ಮರಳಲಾಗದ ಕಾಮದ ಚಟ್ಟವೇರಿದಾಕೆ, ಸುಟ್ಟ ಕನಸುಗಳ ಅಸ್ಥಿ ವಿಸರ್ಜನೆ ನಿತ್ಯ' ಎನ್ನುವ ಸಾಲುಗಳು ಮನಸ್ಸನ್ನು ಕಾಡುತ್ತವೆ. ವಿಭಿನ್ನ ವಸ್ತುವನ್ನು ಆಯ್ದುಕೊಂಡದ್ದು ಸವಾಲು. ಅದನ್ನು ಚೆನ್ನಾಗಿ ನಿರೂಪಿಸಿದ್ದೀರಿ ರಾಧಿಕಾ ಗುಜ್ಜಾರ್ ಮೇಡಂ.

16. ವೆಂಕಟ್ ಕಾಮತ್ – 'ಕ್ಯಾಚ್ 22'

ಅಮೇರಿಕಾ ಪುಸ್ತಕ ಲೋಕದಲ್ಲಿ 22ನೇ ಸ್ಥಾನ ಪಡೆದ ಜೋಸೆಫ್ ಹಲ್ಲೆರ್ ಅವರ "ಕ್ಯಾಚ್ 22" ಪುಸ್ತಕದ ಪರಿಚಯ. ಜೋಸೆಫ್ ಅವರ ಪರಿಚಯವನ್ನು ಮಾಡಿಕೊಟ್ಟು, ಜನೋಪಯೋಗಿ ತದ್ವಿರುದ್ಧ ಜೋಡಿ ವಾಕ್ಯಗಳು 'ಕ್ಯಾಚ್ 22' ಎಂದು ಅನ್ವರ್ಥನಾಮವಾಗಿ ಬಳಕೆಗೆ ಬಂದಿವೆ. ಬರಹದಲ್ಲಿ ಉಲ್ಲೇಖಿಸಿರುವ 8 ತದ್ವಿರುದ್ಧ ವಾಕ್ಯಗಳಿಂದಲೇ ಆ ಪುಸ್ತಕ ಗಹನವಾದ ಚಿಂತನೆಯನ್ನು ಮೂಡಿಸುತ್ತದೆ ಎಂದು ತಿಳಿಯುತ್ತದೆ. ಉತ್ಕೃಷ್ಟ ವಿಚಾರಧಾರೆಯ ಕ್ಯಾಚ್ 22 ಪುಸ್ತಕವನ್ನು ಕ್ಯಾಚ್ ಹಾಕ್ಕೊಂಡು ಓದಬೇಕು ಎನಿಸುವಂತೆ ಮಾಡಿದ ಬರಹ ಸರ್.

17. ಭ.ರಾ.ವಿಜಯಕುಮಾರ – 'ಭಾಷಾ ವಿಸ್ಮಯ' (ಕವನ)

ಭಾವವನ್ನು ಭಾಷೆಯೊಡನೆ ಬೆಸೆಯುವ ಯತ್ನ ಭಾಷೆ ಅಭಿವೃದ್ಧಿಯಾಗುವ ಕಾಲದಿಂದಲೂ ನಡೆದೇ ಇದೆ. ಹಿಂದಿನಿಂದ ಚಾಲ್ತಿಯಲ್ಲಿರುವ ಪದಗಳಲ್ಲದೆ ಹೊಸದಾಗಿ ಪ್ರಯೋಗಿಸಿ ಅಭ್ಯಾಸಿಸಿದರೆ, ಆ ಪದಗಳೇ ಸರಿ ಎನಿಸುತ್ತವೆ. ಎಲ್ಲವೂ ಅವರವರ ಭಾವಕ್ಕೆ ಎನ್ನುವಂತೆ, ಭಾಷೆಯನ್ನು ಬೆಳೆಸಬಹುದು.. ಬಳಸಬಹುದು. ಆದರೆ ನಗು–ಅಳು, ಜನನ –ಮರಣ ಇತ್ಯಾದಿಗಳಿರುವಂತೆ ಭಾವಕೆ ತಕ್ಕ ಭಾಷೆ ಎಂಬುದಿಲ್ಲ. ನಮಗನಿಸಿದ್ದೇ ಸರಿ ಎಂದು ಸಾಗಿದ್ದೇವೆ. ಇದು ನಿಜಕ್ಕೂ ಬೆರಗು ಮೂಡಿಸುವ ವಿಚಾರ. ವಿಭಿನ್ನ ವಿಚಾರಧಾರೆಯ ಕವನ ಸರ್.

18. ಬೆಂ ಶ್ರೀ ರವೀಂದ್ರ – 'ರವಿತೇಜನ ಮುಕ್ತಕಗಳು'

ಈಗಾಗಲೇ 'ರವಿತೇಜನ ಮುಕ್ತಕಗಳು' ಪುಸ್ತಕ ರೂಪದಲ್ಲಿ ಸಾಹಿತ್ಯಲೋಕದಲ್ಲಿ ಪಾದಾರ್ಪಣೆ ಮಾಡಿವೆ. ಇಂದು ಪ್ರಸ್ತುತಪಡಿಸಿರಿರುವ 20 ಮುಕ್ತಕಗಳು ವಾಸ್ತವತೆಯ ಕಠೋರತೆಯನ್ನು ಪರಿಚಯಿಸುತ್ತವೆ. ಅಂತರಾತ್ಮವನ್ನು ಕೆಣಕಿ ಪರಾಮರ್ಶೆಗೆ ಒಳಪಡಿಸುತ್ತವೆ.

ಚೆಲುವೆಂದು ನಾಗನ ಮುದ್ದಿಸುವುದುಂಟೆ?...;
ಛೀ .. ಥೂ.. ನಾಯಿ ನರಿ ಕತ್ತೆಗಳೆಂದು..;
ಒಳಗೆ ಸ್ವಾರ್ಥದ ಘಾಟು ಹೊರಗೆ ಮಾತಿನ ಗಿಲೀಟು.. .;
ಆಡದೆಡೆ ಆಡಿದರೆ ಅಪರಾಧ....;
ನೂರಲ್ಲ ಮೂರಾಡಿರೆ ಸಾಕು..;

– ವಿವಿಧ ಮುಕ್ತಕಗಳಲ್ಲಿನ ಈ ಸಾಲುಗಳು ಬಹಳ ಇಷ್ಟವಾದವು. ಈ ಮುಕ್ತಕಗಳು ವಚನಗಳಿಗೆ ಸಮನಾಗಿ ನಿಲ್ಲುತ್ತವೆ. ಅಭಿನಂದನೆಗಳು ಸರ್, ಅರ್ಥಪೂರ್ಣ ಮುಕ್ತಕಗಳಿಗಾಗಿ.

19. ಶ್ರೀಧರ ಬಾಣಾವರ – 'ಅಮೆರಿಕದಲ್ಲಿ ಗೊರೂರು'

ಗೊರೂರು ರಾಮಸ್ವಾಮಿ ಅಯ್ಯಂಗಾರ್ ಅವರ ಅಮೇರಿಕಾ ಪ್ರವಾಸ ಕಥನ ಪುಸ್ತಕ ಪರಿಚಯ. ಈ ಪ್ರವಾಸ ಕಥನವನ್ನು ಪರಿಚಯಿಸುವುದರ ಮೂಲಕ ಗೊರೂರರ ವ್ಯಕ್ತಿತ್ವವನ್ನು ಪರಿಚಯಸುತ್ತಾ, ಗೊರೂರರ ಭಾಷಾಜ್ಞಾನ, ಸರಳತೆ ಹಾಗೂ ಎಲ್ಲರೊಡನೆ ಬೆರೆಯುವ ಅವರ ಗುಣಗಳನ್ನು ಶ್ರೀಧರ್ ಸರ್ ಕಟ್ಟಿಕೊಡುತ್ತಾರೆ. ತಪ್ಪು ಮಾಡದೆ ಲಾಕಪ್‌ನಲ್ಲಿ ನಿದ್ರಿಸಿದ್ದು, ಅವರ ಉಡುಪು ಹಾಗೂ ನಿರರ್ಗಳ ಇಂಗ್ಲೀಷ್ ಮಾತಿಗೆ ಸಂಬಂಧವಿಲ್ಲದ್ದು, ಅವರ ಮಡದಿಯ ಉದ್ದನೆಯ ಸೀರೆಯ ವಿಚಾರ, ಬೊಗಳುತ್ತಿದ್ದ ನಾಯಿಗೆ ಗದರಿದ್ದು, ಹೀಗೆ ಅಲ್ಲಿನ ಪ್ರಸಂಗಗಳನ್ನು ವಿನೋದವಾಗಿ ಪ್ರವಾಸ ಕಥನ ಪ್ರಸ್ತುತಪಡಿಸಿರುವುದನ್ನು ಪರಿಚಯಿಸಿ, ಓದುಗರನ್ನು ಸೆಳೆದಿರುವರು. ಶ್ರೇಷ್ಠ ಸಾಹಿತಿಗಳ ಪುಸ್ತಕ ಪರಿಚಯಿಸಿದ್ದಕ್ಕಾಗಿ ಧನ್ಯವಾದಗಳು ಸರ್.

ಸೀಮಿತ ಸಮಯದಲ್ಲಿ ನನಗೆ ಹೇಳಲಾದ ಅಭಿಪ್ರಾಯವಿಷ್ಟು. ಮಹತ್ವದ ಅವಕಾಶವನ್ನು ನೀಡಿದ ವೇದಿಕಯ ಅಧ್ಯಕ್ಷರಿಗೆ, ಸಂಚಾಲಕರಿಗೆ ಹೃನ್ಮನದ ಧನ್ಯವಾದಗಳು. ಕಾರ್ಯಕ್ರಮ ಸುಗಮವಾಗಿ ನಡೆಯಲು ಕೊಂಡಿಯನ್ನು ಸೃಜಿಸಿದ ರಾಧಿಕಾ ಗುಜ್ಜರ್ ಹಾಗೂ ಸಕಾಲಕ್ಕೆ ಕಾರ್ಯಕ್ರಮದ ಬಳಿಕ ಯೂಟ್ಯೂಬ್‌ನಲ್ಲಿ ಹಾಕಿ ಅದರ ಕೊಂಡಿಯನ್ನು ತಲುಪಿಸಿದ್ದಕ್ಕಾಗಿ ರೇಣುಕಾ ದೇಸಾಯಿ ಅವರ ತಾಂತ್ರಿಕ ಸಹಾಯಕ್ಕೆ ಧನ್ಯವಾದಗಳು.

ಈ ದಾಸೋಹದಲ್ಲಿ 'ಸುರಲೋಕ' ಎಂಬ ನನ್ನ ಸ್ವರಚಿತ ಕವನವನ್ನೂ ಪ್ರಸ್ತುತಪಡಿಸಿದ್ದೇನೆ.

***